
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮೇ 4, 2011 ಪುಟ 20 ರೂ. 12/-

ಅಂಬೇಡ್ಕರ್ ಪ್ರತಿಮೆ ಆಗದಿರಲಿ



ವೀರಶೈವ ಸಮಾವೇಶ

ಜಂಟಿ ಡೀಲ್‌ಗಳು



ಸಂಪತ್ತು ಲೂಟಿ



ಸ್ವರ್ಣವಲ್ಲಿ ಸ್ವಾಮಿ

ಸಾಲಮನ್ನಾ ಮಸಲತ್ತು



ಹುಟ್ಟಿದ್ದು ಹೇಗೆ?



KPCC

ಅಸಂಬದ್ಧ ಪುನರ್‌ರಚನೆ

ನೋ ಕಾಮೆಂಟ್ಸ್

"ಸುತ್ತೂರಿನಲ್ಲಿ ನಡೆದ 22ನೇ ಅಖಿಲ ಭಾರತ ವೀರಶೈವ ಮಹಾಸಭಾ ಸಮ್ಮೇಳನದಲ್ಲಿ ಭಾಗವಹಿಸಿದ ಮಠಾಧೀಶರು ಯಡಿಯೂರಪ್ಪನವರ ಅಧಿಕಾರ ಮುಂದುವರಿಕೆಗೆ ನೀಡಿದ ಭರವಸೆ........ ಧರ್ಮಪೀಠಗಳು ಲೌಕಿಕ ಅನುಕೂಲಕ್ಕಾಗಿ ಯಾವ ಹಂತಕ್ಕಾದರೂ ಇಳಿಯಬಲ್ಲವು ಎಂಬುದನ್ನಷ್ಟೇ ತೋರಿಸುತ್ತದೆ. ರಾಜಕೀಯ ವ್ಯವಸ್ಥೆ ಜನರಿಂದ ಆಯ್ಕೆಯಾದವರಿಂದ ನಡೆಯುವ ಪ್ರಕ್ರಿಯೆ. ಇದರಲ್ಲಿ ಧರ್ಮಪೀಠಗಳಿಗೆ ಯಾವ ಪಾತ್ರವೂ ಇಲ್ಲ. ಶತಮಾನಗಳ ಅಕಾಲದಿಂದ ಸಕಲ ಜೀವರಾಶಿಗಳಲ್ಲಿ ಲೇಸನ್ನು ಕಂಡಂಥ ಉದಾರ ಚಿಂತನೆಯನ್ನು ಹೊಂದಿದ್ದ ಧರ್ಮಪೀಠಗಳು ಸಂವಿಧಾನಕ್ಕೆ ಹೊರತಾದ ಅಧಿಕಾರ ಕೇಂದ್ರಗಳಾಗಲು ನಡೆಸಿರುವ ಇಂಥಾ ಕಸರತ್ತು ಅಪ್ರಸ್ತುತ. ಧರ್ಮಪೀಠಗಳು ಸಮಾಜದಲ್ಲಿ ಧಾರ್ಮಿಕತೆ ನೆಲೆಗೊಳ್ಳುವಂತೆ ಮಾಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುವುದನ್ನು ಬಿಟ್ಟು ರಾಜಕೀಯ ಉಸಾಬರಿಗೆ ಇಳಿಯುವುದು ಅನವಶ್ಯಕ."

- ಪ್ರಜಾವಾಣಿ ಸಂಪಾದಕೀಯದಲ್ಲಿ

"ನಾನು ನನ್ನ ದೇಶದ ಜನರಿಗೆ ಎಂದೂ ವಂಚಿಸಿಲ್ಲ ಎಂಬುದು ನನಗೆ ತಿಳಿದಿದೆ. ದೇಶದ್ರೋಹಿಯ ಆರೋಪವನ್ನು ನಾನು ಎಂದೂ ಒಪ್ಪಿಕೊಂಡಿರಲಿಲ್ಲ."

- ಬಿನಾಯಕ್ ಸೇನ್

"ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಂಭವಿಸಿದ ಪ್ರವಾಹ ಮತ್ತು ಬರಗಾಲದಿಂದಾಗಿ ಸಾಕಷ್ಟು ಮಂದಿ ಬೆಂಗಳೂರಿಗೆ ವಲಸೆ ಬಂದದ್ದರಿಂದ ಬೆಂಗಳೂರು ನಗರ ಜಿಲ್ಲೆಯ ಜನಸಂಖ್ಯೆ ಹೆಚ್ಚಳವಾಗಿದೆ. ಬೆಂಗಳೂರು ನಗರ ಜಿಲ್ಲೆಯ ಜನಸಂಖ್ಯೆ ಈ ದಶಕದಲ್ಲಿ ಅತ್ಯಂತ ಹೆಚ್ಚಳ ದಾಖಲಿಸಿದ್ದು ಜನಸಾಂದ್ರತೆ ಪ್ರತಿ ಚದುರ ಕಿಲೋ ಮೀಟರ್‌ಗೆ 4378 ಇದೆ."

- ಟಿ.ಕೆ. ಅನಿಲ್‌ಕುಮಾರ್, ಜನಗಣತಿ ನಿರ್ದೇಶಕ

"ದೇಶದಲ್ಲಿ ಹಸಿವಿನಿಂದ ಸಾಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಈ ದೇಶದಲ್ಲಿ ಎರಡು ಭಾರತಗಳು ಇರುವಂಥಾ ಸನ್ನಿವೇಶ ಸೃಷ್ಟಿಯಾಗಬಾರದು. ರಾಜ್ಯಗಳಲ್ಲಿ ಶೇ.36ರಷ್ಟು ಜನ ಮಾತ್ರ ಬಡತನ ರೇಖೆಗಿಂತ ಕೆಳಗಿರುವವರು ಎಂದು ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಕಾರಣವನ್ನು ಯೋಜನಾ ಆಯೋಗ ಸ್ಪಷ್ಟಪಡಿಸಬೇಕು."

- ಸುಪ್ರೀಂ ಕೋರ್ಟ್

"ಬಡವರ ಮಾಡುತ್ತಿರುವ ಸಾಮಾಜಿಕ ಕಳಕಳಿ ಕಾರ್ಯಕ್ರಮಗಳಿಗೆ ಮತಾಂತರದ ಬಣ್ಣ ಹಚ್ಚುತ್ತಿರುವುದು ಬೇಸರ ತರಿಸುತ್ತಿದೆ."

- ಆರ್ಚ್ ಬಿಷಪ್ ಬರ್ನಾಡ್ ಮೋರಿಸ್

"ಮುಖ್ಯಮಂತ್ರಿಗಳು, ಸಚಿವರು, ಅತಿಗಣ್ಯರು ಅಷ್ಟು ದೂರದಿಂದ ಬರುತ್ತಿದ್ದಾರೆ ಎಂದರೆ ಅರ್ಧಗಂಟೆ ಮೊದಲೇ ಇತ್ತ ಜನರ ವಾಹನಗಳನ್ನು ತಡೆದು ನಿಲ್ಲಿಸಿ ಗಣ್ಯರಿಗೆ ದಾರಿ ಸುಗಮ ಮಾಡಿಕೊಡುತ್ತೀರಿ. ಜನರು ಇತ್ತ ಪರದಾಡುತ್ತಿರುವಾಗ ಗಣ್ಯರು ಅತ್ತ ನಿರಾತಂಕವಾಗಿ ಸಾಗುತ್ತಾರೆ. ಅವರಿಗೆ ಜನರ ಸಮಸ್ಯೆ ಹೇಗೆ ಅರ್ಥವಾಗಬೇಕು? ಹೀಗಾದರೆ ಸಂಚಾರ ದಟ್ಟಣೆಯಿಂದ ಜನರ ಪರದಾಟ ಕಡಿಮೆಯಾಗುವುದು ಯಾವಾಗ?"

- ನ್ಯಾಯಮೂರ್ತಿ ರಮೇಶ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಸುತ್ತೂರಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭಾದ 22ನೇ ಮಹಾಧಿವೇಶನವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಹೈಜಾಕ್ ಮಾಡಿದ್ದಾರೆ. ಈ ಅಧಿವೇಶನ ಯಡಿಯೂರಪ್ಪನವರ ಪರವಾದ ನಿರ್ಣಯವನ್ನೇನಾದರೂ ಕೈಗೊಂಡರೆ ವೀರಶೈವ ನಾಯಕರ ಸಭೆ ಕರೆದು ಸಿಎಂ ವಿರುದ್ಧ ಮತ್ತೊಂದು ನಿರ್ಣಯ ಕೈಗೊಳ್ಳಲಾಗುವುದು."

- ಬಸವರಾಜ ಪಾಟೀಲ್ ಯತ್ನಾಳ್

"ಅಕ್ರಮ ಗಣಿಗಾರಿಕೆ ನಿಯಂತ್ರಿಸುವ ವಿಷಯದಲ್ಲಿ ಸರ್ಕಾರ ಗಂಭೀರವಾಗಿದೆ ಎಂಬುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲಾಗುವುದು. ಈಗಾಗಲೇ ಕೈಗೊಂಡಿರುವ ಕ್ರಮ, ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳ ಬಗ್ಗೆ ಪ್ರಮಾಣ ಪತ್ರದಲ್ಲಿ ವಿವರಣೆ ನೀಡಲಾಗುವುದು. ಅಕ್ರಮ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವ ಬದ್ಧತೆಯನ್ನೂ ವ್ಯಕ್ತಪಡಿಸಲಾಗುವುದು."

- ಸುಪ್ರೀಂ ಕೋರ್ಟ್‌ಗೆ ಮಂಡಿಸಲಿರುವ ವರದಿಯ ಬಗ್ಗೆ

"ಕೇಂದ್ರ ಸರ್ಕಾರ ಮತ್ತು ಆಂಧ್ರ ಸರ್ಕಾರಕ್ಕೆ ಓಬಳಾಪುರಂ ಮೈನಿಂಗ್ ಕಂಪನಿ ಬಾಕಿ ಉಳಿಸಿಕೊಂಡಿರುವ ತರಹೇವಾರಿ ತೆರಿಗೆಗಳನ್ನು ತುಂಬಲು ಬಳ್ಳಾರಿ ರೆಡ್ಡಿ ಸೋದರರ ಬಳಿ ಹಣವಿಲ್ಲವಂತೆ."

- ಪತ್ರಿಕಾ ವರದಿ

ಪಂಡಿತರ ಮೂಢನಂಬಿಕೆಗಳು!

"ಅಂತರ್ಜಾಲದ ಬಗ್ಗೆ ಮೊದಲು ನನಗೆ ಅನುಮಾನಗಳಿದ್ದವು. ಆದರೆ ಈಜಿಪ್ಟ್‌ನಲ್ಲಾದ ಕ್ರಾಂತಿ ಹಾಗೂ ಭ್ರಷ್ಟಾಚಾರ ತೊಲಗಿಸಲು ಗಾಂಧೀವಾದಿ ಅಣ್ಣಾ ಹಜಾರೆ ಬೆಂಬಲಕ್ಕೆ ನಿಂತ ಅಂತರ್ಜಾಲ ಅಸಾಮಾನ್ಯ ಕೆಲಸ ಮಾಡಿದೆ."

- ಯು.ಆರ್. ಅನಂತಮೂರ್ತಿ

ಬಡತನ ನಿವಾರಣೆಯಾಗದೆ ಬಡವರು ಕಡಿಮೆಯಾಗುವ ಪವಾಡ!

"2004-05ನೇ ಸಾಲಿನಲ್ಲಿ ದೇಶದಲ್ಲಿನ ಬಡತನದ ಮಟ್ಟ ಶೇ.37.2ರಷ್ಟಿತ್ತು, 2009-10ನೇ ಸಾಲಿನಲ್ಲಿ ಅದರ ಪ್ರಮಾಣ ಶೇ.32ಕ್ಕಿಳಿದಿದೆ ಎಂದು ಯೋಜನಾ ಆಯೋಗದ ಸದಸ್ಯ ಅಭಿಜಿತ್ ಸೇನ್ ಸಿದ್ಧಪಡಿಸಿರುವ ಪ್ರಾಥಮಿಕ ಮಾಹಿತಿಯಿಂದ ಸ್ಪಷ್ಟವಾಗಿದೆ."

- ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ

ಅಂಬೇಡ್ಕರ್ ಜಯಂತಿ:
ಅವರನ್ನು ಕೇವಲ ಪ್ರತಿಮೆಯಾಗಿಸದಿರಲಿ!

ಇದು ಅಂಬೇಡ್ಕರರ 120ನೇ ಜನ್ಮ ಜಯಂತಿಯ ವರ್ಷ. ಸರ್ಕಾರಗಳು, ವಿಶ್ವವಿದ್ಯಾಲಯಗಳು ಮತ್ತು ಹಲವಾರು ಕಾಲೇಜುಗಳು ಮತ್ತು ಸಂಘಸಂಸ್ಥೆಗಳು ಈ ತಿಂಗಳಾದ್ಯಂತ ಅಂಬೇಡ್ಕರ್ ಜಯಂತಿಯನ್ನು ಆಚರಿಸುತ್ತಿದ್ದಾವೆ. ಹಾಗೆ ನೋಡಿದಲ್ಲಿ ಅಂಬೇಡ್ಕರ್ ಜಯಂತಿಯನ್ನು ಇತರ ಪ್ರಮುಖ ರಾಷ್ಟ್ರೀಯ ದಿನದ ರೀತಿ ಆಚರಿಸುವ ಅನಿವಾರ್ಯತೆ ಉಂಟಾಗಿರುವುದು ಒಂದರ್ಥದಲ್ಲಿ ಎಚ್ಚೆತ್ತ ದಲಿತ ಪ್ರಜ್ಞೆಯಿಂದಲೇ! ಅಷ್ಟರಮಟ್ಟಿಗೆ ಅಂಬೇಡ್ಕರ್ ಜಯಂತಿಗಳು ವರ್ಣಾಶ್ರಮವನ್ನೇ ಉಸಿರಾಡುವ ಸಮಾಜದಲ್ಲಿ ದಲಿತ ಚೇತನಗಳು ಸ್ವಾಭಿಮಾನದಿಂದ ತಲೆ ಎತ್ತಿ ನಿಲ್ಲುವ ಅವಕಾಶವನ್ನು ಕಲ್ಪಿಸಿಕೊಟ್ಟಿವೆ.

ಆದರೆ ಅದೇ ಸಮಯದಲ್ಲಿ ಅಂಬೇಡ್ಕರ್ ಜಯಂತಿಗಳನ್ನು ಆಳುವ ವರ್ಗಗಳು ಅಂಬೇಡ್ಕರ್ ಚಿಂತನೆಯನ್ನು ಮತ್ತು ಅದರಲ್ಲಿನ ಕ್ರಾಂತಿಕಾರಿ ಸತ್ವವನ್ನು ಮರೆಮಾಚಲೂ ಪ್ರಯತ್ನಿಸುತ್ತಿವೆ ಎಂಬುದರಲ್ಲಿ ಸಂಶಯವಿಲ್ಲ. ತನ್ನ ಅಸ್ತಿತ್ವಕ್ಕೆ ಮತ್ತು ಶೋಷಣೆಗೆ ಸವಾಲು ಹಾಕುವ ಯಾವುದಾದರೂ ಚಿಂತನೆಯನ್ನು ಕೊಂದುಹಾಕಬೇಕು ಎಂದರೆ ಆ ಚಿಂತನೆಯನ್ನು ಸಾಂಸ್ಥೀಕರಿಸಿಬಿಡುವುದು ಅಥವಾ ಅದರಲ್ಲಿನ ಕ್ರಾಂತಿಕಾರಿ ಸತ್ವವನ್ನೇ ತೆಗೆದುಹಾಕಿ "ಕಳಬೇಡ, ಕೊಲಬೇಡ" ತರದ ರೀತಿಯ ಸಾರ್ವತ್ರಿಕ ಸದಾಶಯಗಳ ಮಟ್ಟಿಗೆ ಇಳಿಸಿಬಿಡುವುದು ಭಾರತದ ಆಳುವ ವರ್ಗ ಲಾಗಾಯ್ತಿನಿಂದಲೂ ಅನುಸರಿಸಿಕೊಂಡು ಬಂದಿರುವ ತಂತ್ರ. ಕಳೆದ ಕೆಲವು ವಾರಗಳಿಂದ ಹಲವಾರು ಅಂಬೇಡ್ಕರ್ ಜಯಂತಿಗಳಲ್ಲಿ ಭಾಗವಹಿಸಿದ್ದೇನೆ. ನೂರಾರು ಜಯಂತಿಗಳ ವರದಿಗಳನ್ನು ಓದಿದ್ದೇನೆ. ಕೆಲವೇ ಕೆಲವು ಹೋರಾಟ ನಿರತ ಸಂಘಟನೆಗಳು ಅಂಬೇಡ್ಕರ್ ಚಿಂತನೆಗೆ ಒದಗುತ್ತಿರುವ ಈ ಅಪಾಯವನ್ನು ಗ್ರಹಿಸಿ ನಡೆಸಿದ ಕಾರ್ಯಕ್ರಮಗಳನ್ನು ಹೊರತುಪಡಿಸಿದರೆ ಬಹುಪಾಲು ಅಂಬೇಡ್ಕರ್ ಜಯಂತಿಗಳು ಗೊತ್ತಿದ್ದೋ ಗೊತ್ತಿಲ್ಲದೆಯೋ ಅಂಬೇಡ್ಕರ್‌ರನ್ನು ಸರ್ಕಾರಿ ಸಂತನನ್ನಾಗಿಸುವ ಪ್ರಯತ್ನದಲ್ಲೇ ಇದ್ದದ್ದನ್ನು ನಾನು ವಿಷಾದದಿಂದ ಗಮನಿಸಿದ್ದೇನೆ. ಕೆಲವು ಕಡೆ ಈ ವಿಷಾದ ಹಾಗೂ ದುರಂತಮಯ ಪ್ರಕ್ರಿಯೆಗೆ ದಲಿತ ಸಂಘಟನೆಗಳು ತಮ್ಮ ಪಾಲನ್ನು ನೀಡಿವೆ.



ಹಾಗೆ ನೋಡಿದರೆ ಈ ದೇಶದ ಶೋಷಿತ ಜನರಿಗೆ ಆಗಸ್ಟ್ 15ರ ಸ್ವಾತಂತ್ರ್ಯ ದಿನಕ್ಕಿಂತ ಅಂಬೇಡ್ಕರರ ಜನ್ಮ ದಿನವಾದ ಏಪ್ರಿಲ್ 15 ಅತ್ಯಂತ ಮಹತ್ವದ್ದು. ಏಕೆಂದರೆ ಆಗಸ್ಟ್ 15 ಈ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು (?) ತಂದುಕೊಟ್ಟಿತೇ ವಿನಃ ಈ ದೇಶದ ಶೋಷಿತ ಜನರಿಗೆ ವಿಮೋಚನೆಯನ್ನೇನೂ ತಂದುಕೊಡಲಿಲ್ಲ. ಅಂಬೇಡ್ಕರ್ ಸ್ವಾತಂತ್ರ್ಯಕ್ಕೆ ಮೊದಲೂ ಮತ್ತು ಆ ನಂತರವೂ ಶೋಷಿತ ಜನರ ವಿಮೋಚನೆ ಮಾಡಲು ಈ ಆಗಸ್ಟ್ 15ರ ಸ್ವಾತಂತ್ರ್ಯಕ್ಕೆ ಶಕ್ತಿ ಇದೆಯೇ ಎಂಬ ಪ್ರಶ್ನೆಯನ್ನು ಕೇಳುತ್ತಲೇ ಬಂದಿದ್ದರು. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಇಲ್ಲದೆ ಕೇವಲ ರಾಜಕೀಯ ಸ್ವಾತಂತ್ರ್ಯ ಈ ದೇಶದ ಶೋಷಿತ ಜನರಿಗೆ ಸ್ವಾತಂತ್ರ್ಯವನ್ನು ಗಳಿಸಿಕೊಡುವುದಿಲ್ಲವೆಂದೂ, ಆದಷ್ಟು ಬೇಗ ಭಾರತದ ಪ್ರಭುತ್ವ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಸಾಧಿಸುವ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಇದೇ ರಾಜಕೀಯ ಸ್ವಾತಂತ್ರ್ಯ ಅಸ್ತಿತ್ವದಲ್ಲಿರುವ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯ ಕಂದರಗಳನ್ನು ಹೆಚ್ಚಿಸುತ್ತದೆಯೆಂದೂ ಎಚ್ಚರಿಸಿದ್ದರು. ಇದು ಗಾಂಧಿಗೂ ಅಂಬೇಡ್ಕರ್‌ಗೂ ಇದ್ದ ಮೂಲಭೂತ ವ್ಯತ್ಯಾಸ.

ಕಳೆದ 63 ವರ್ಷಗಳ ಸ್ವಾತಂತ್ರ್ಯದ ರಿಪೋರ್ಟ್ ಕಾರ್ಡನ್ನು ನೋಡಿದರೆ ಅಂಬೇಡ್ಕರ್ ಎಚ್ಚರಿಸಿದಂತೆ ಆಗಸ್ಟ್ 15ರ ಸ್ವಾತಂತ್ರ್ಯವು ಉಳ್ಳವರ ಮತ್ತು ಇಲ್ಲದವರ ನಡುವಿನ ಕಂದರವನ್ನು ಸ್ವಾತಂತ್ರ್ಯದ ಪೂರ್ವಕ್ಕಿಂತ 300 ಪಟ್ಟು ಹೆಚ್ಚಿಸಿದೆ. ಸಾಮಾಜಿಕ ಅಸಮಾನತೆ, ಜಾತಿವ್ಯವಸ್ಥೆ, ಜಾತಿ ದೌರ್ಜನ್ಯ ಕಡಿಮೆಯಾಗುವುದಿರಲಿ, ಹಲವು ಕ್ರೂರ ಆಯಾಮಗಳನ್ನು ಪಡೆದುಕೊಂಡು ಹೆಚ್ಚುತ್ತಲೇ ಹೋಗುತ್ತಿದೆ. ನಮ್ಮ ಸ್ವಾತಂತ್ರ್ಯಕ್ಕೆ ಸಮಾನತೆಯ ತಳಹದಿಯೇ ಇಲ್ಲದಿರುವುದರಿಂದ ರಾಜಕೀಯ ಸ್ವಾತಂತ್ರ್ಯವೂ ನಿಧಾನವಾಗಿ ಅರ್ಥಕಳೆದುಕೊಂಡು ದೇಶ ನಿಧಾನವಾಗಿ ಅಮೆರಿಕದಂಥ ಶ್ರೀಮಂತ ದೇಶಗಳ ವಸಾಹತುಶಾಹಿ ಶೋಷಣೆಗೂ ಗುರಿಯಾಗುತ್ತಿದೆ. ಇದೆಲ್ಲದರ ಒಟ್ಟು ಪರಿಣಾಮ ಶತಮಾನಗಳಿಂದ ತುಳಿತ ಮತ್ತು ಶೋಷಣೆಗೆ ಗುರಿಯಾಗುತ್ತಲೇ ಬಂದ ಜನವರ್ಗಗಳ ಮೇಲೆಯೇ ಆಗುತ್ತಿದೆ. ಅಂಬೇಡ್ಕರ್‌ರನ್ನು ಸಂವಿಧಾನಶಿಲ್ಪಿ ಎಂದು ಮಾತ್ರ ಹೆಸರಿಸುವ ಮೂಲಕ ಈ ದೇಶದ ಆಳುವ ವರ್ಗ ಮುಂದುವರೆಯುತ್ತಲೇ ಇರುವ ಈ ಅಸಮಾನತೆಗೆ ಸಂವಿಧಾನದ ಮತ್ತು ಅಂಬೇಡ್ಕರ್‌ರ ಮರೆಯಲ್ಲಿ ರಕ್ಷಣೆ ಪಡೆಯಲು ಪ್ರಯತ್ನಿಸುತ್ತಿವೆ. ಆದರೆ ಆಳುವ ವರ್ಗಗಳ ಈ ಬಗೆಯ ಹುನ್ನಾರಗಳನ್ನು ಸ್ಪಷ್ಟವಾಗಿಯೇ ಅರ್ಥಮಾಡಿಕೊಂಡಿದ್ದ ಅಂಬೇಡ್ಕರ್‌ರವರು 1953ರಲ್ಲೇ "ನನ್ನನ್ನು ಈ ಸಂವಿಧಾನ ಶಿಲ್ಪಿ ಎಂದು ಕರೆಯುತ್ತಾರೆ. ಆದರೆ ಈ ಸಂವಿಧಾನ ಸಮಾನತೆಯ ಆಶಯಗಳನ್ನು ಈಡೇರಿಸಲು ವಿಫಲವಾದಲ್ಲಿ ಅದನ್ನು ತಿರಸ್ಕರಿಸುವುದರಲ್ಲಿ ನಾನೇ ಮೊದಲಿಗ" ಎಂದು ಹೇಳಿದ್ದನ್ನಾಗಲೀ, ಸ್ತ್ರೀ-ಪುರುಷ ಸಮಾನತೆಯ ಕಡೆಗಿನ ಒಂದು ಸಣ್ಣ ಹೆಜ್ಜೆಯಾಗಿದ್ದ "ಹಿಂದೂ ಕೋಡ್ ಬಿಲ್"ಅನ್ನು ಸ್ವತಂತ್ರ ಭಾರತ ಸಂಸತ್ತು ತಿರಸ್ಕರಿಸಿದಾಗ ಬೇಸತ್ತು ಹೊರಬಂದಿದ್ದನ್ನಾಗಲೀ ಮರೆಸಿಬಿಡುವ ಪ್ರಯತ್ನಗಳನ್ನು ಮಾಡುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ 1947ರ ಮಾರ್ಚ್‌ನಲ್ಲಿ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯ ಮುಂದಿರಿಸಿದ್ದ ಅವರ ಕನಸಿನ ಸಂವಿಧಾನವಾಗಿದ್ದ "States and Minorities" ಬಗ್ಗೆ ನೆನಪೇ ಮಾಡಿಕೊಳ್ಳದಂಥ ವಿಸ್ಮೃತಿಯನ್ನು ಹುಟ್ಟುಹಾಕಿದೆ. ಆ ದಸ್ತಾವೇಜಿನಲ್ಲಿ ಅಂಬೇಡ್ಕರ್‌ರವರು ತುಂಬಾ ಸ್ಪಷ್ಟವಾಗಿ ಸಮಾನತೆಯೂ ಮೂಲಭೂತ ಹಕ್ಕಾಗದೇ - ಅಂದರೆ ಯಾವುದೇ ಪಕ್ಷ ಬಂದರೂ ಬದಲಾಯಿಸಲಾಗದ ಸಂವಿಧಾನ ದತ್ತ ಹಕ್ಕಾಗದೇ -ಹೋದರೆ ಈ ದೇಶದಲ್ಲಿ ಸ್ವಾತಂತ್ರ್ಯ ಉಳ್ಳವರ ಸೇವೆಯನ್ನಷ್ಟೆ ಮಾಡುತ್ತದೆ ಎಂದು ಪ್ರತಿಪಾದಿಸಿ ದೇಶದ ಸಂಪತ್ತಿನ ರಾಷ್ಟ್ರೀಕರಣವನ್ನು ಒಂದು ಅನುಷ್ಠಾನಯೋಗ್ಯ ಆರ್ಥಿಕ ಮತ್ತು ರಾಜಕೀಯ ಕಾರ್ಯಕ್ರಮವಾಗಿ ಮುಂದಿರಿಸಿದ್ದರು. ಆದರೆ ನಂತರದಲ್ಲಿ ಅವರನ್ನು ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ, ಉಳ್ಳವರಿಂದಲೇ ತುಂಬಿದ್ದ ನಮ್ಮ ಸಂವಿಧಾನ ರಚನಾ ಸಭೆ ಅಂಬೇಡ್ಕರ್ ಮುಂದಿರಿಸಿದ್ದ ರಾಜಕೀಯ ಕಾರ್ಯಕ್ರಮಗಳನ್ನು ಸಂವಿಧಾನದ ಪ್ರಭುತ್ವ ನಿರ್ದೇಶನಾ ತತ್ವಗಳಲ್ಲಿ ಸೇರಿಸಿದರು. ಆದರೆ ಈ ಯಾವುದೇ ಕಾರ್ಯಕ್ರಮಗಳು ಜನತೆಯ ಮೂಲಭೂತ ಹಕ್ಕೂ ಅಲ್ಲ ಮತ್ತು ಇದನ್ನು ಯಾವುದೇ ನ್ಯಾಯಾಲಯದಲ್ಲಿ ಅನುಷ್ಠಾನಕ್ಕೆ ಆಗ್ರಹಿಸುವಂತೆಯೂ ಇಲ್ಲ ಎಂಬ ಶಾಸನವನ್ನು ಸಂವಿಧಾನ ರಚನಾ ಸಭೆ ಮಾಡಿಬಿಟ್ಟಿತು. ಅಂದರೆ ಯಾವ ಸಾಂವಿಧಾನಿಕ ಬಲವಿಲ್ಲದೆ ನಮ್ಮ ದೇಶದಲ್ಲಿ ಸಮಾನತೆ ಬರಲು ಸಾಧ್ಯವಿಲ್ಲವೆಂದು ಅಂಬೇಡ್ಕರ್ ಎಚ್ಚರಿಸಿದ್ದರೋ, ಮತ್ತು ಈ ಸನ್ನಿವೇಶದಲ್ಲಿ ಪಡೆದುಕೊಳ್ಳುವ ಸ್ವಾತಂತ್ರ್ಯ ಕೇವಲ ಉಳ್ಳವರ ಕಾವಲು ನಾಯಿಯಾಗುವುದೆಂದು ಎಚ್ಚರಿಸಿದ್ದರೋ ಅವ್ಯಾವುದನ್ನು ನಮ್ಮ ಸಂವಿಧಾನ ರಚನಾ ಸಭೆ ಮಾನ್ಯ ಮಾಡಲಿಲ್ಲ. ಬದಲಿಗೆ ಸಮಾನತೆಯನ್ನು ಕೇವಲ ಅಲಂಕಾರಿಕವಾಗಿ ಇರಿಸಿಕೊಂಡು ಪ್ರಧಾನವಾಗಿ ಉಳ್ಳವರ ಲೂಟಿಯನ್ನು ಮತ್ತು ಅವರ ಆಸ್ತಿಯ ಹಕ್ಕಿನ ಸ್ವಾತಂತ್ರ್ಯವನ್ನು ಮಾತ್ರ ರಕ್ಷಿಸುವ ಸಂವಿಧಾನವನ್ನು ಈ ದೇಶಕ್ಕೆ ಕೊಡಲಾಯಿತು. ಅಂದರೆ ಯಾವ ಬಗೆಯ ಸಂವಿಧಾನದ ಬಗೆಗೆ ಅಂಬೇಡ್ಕರ್‌ರವರಿಗೆ ಅನುಮಾನ ಮತ್ತು ಆಕ್ಷೇಪಣೆಗಳಿದ್ದವೋ ಅದೇ ಬಗೆಯ ಸಂವಿಧಾನವನ್ನೇ ಅಂತಿಮವಾಗಿ ರೂಪಿಸಲಾಯಿತು. ಆದ್ದರಿಂದಲೇ 1949ರ ನವಂಬರ್ 26ರಂದು ಸಂವಿಧಾನ ರಚನಾ ಸಭೆಯ ಅಂತಿಮ ಭಾಷಣ ಮಾಡುವಾಗ ಅಂಬೇಡ್ಕರ್ ಅತ್ಯಂತ ಮುಂಗಾಣ್ಕೆಯಿಂದ ಈ ದೇಶ ವೈರುಧ್ಯಗಳಿಂದ ಕೂಡಿದ ಯುಗವನ್ನು ಪ್ರವೇಶಿಸುತ್ತಿದೆಯೆಂದೂ ಸಮಾನತೆ ಸಾಧ್ಯವಾಗದಿದ್ದರೆ ಈ ಪ್ರಜಾತಂತ್ರವನ್ನೆ ತುಳಿತಕ್ಕೊಳಗಾದ ಜನ ಸ್ಫೋಟಿಸುತ್ತಾರೆಂದೂ ಎಚ್ಚರಿಕೆ ನೀಡಿದ್ದರು.

ಹೀಗೆ ಹೆಚ್ಚುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯ ಕಂದರಕ್ಕೆ ಬುನಾದಿ ನಮ್ಮ ಸಂವಿಧಾನದಲ್ಲಿದೆ. ಅಂಬೇಡ್ಕರ್ ಆಶಯಗಳಿಗೆ ಆದ ವ್ಯವಸ್ಥಿತ ದ್ರೋಹದಲ್ಲಿದೆ. ಇದು ಕೇವಲ ಅನುಷ್ಠಾನದಲ್ಲಿ ಆಗುತ್ತಿರುವ ಲೋಪಗಳಲ್ಲ.



ಶಿವಸುಂದರ್

ಚಾರ್ವಾಕ

ಅದನ್ನು ಮರೆಮಾಚಲೆಂದೇ ಅಂಬೇಡ್ಕರ್ ಜಯಂತಿಯ ದಿನದಂದೂ ಆಳುವ ವರ್ಗಗಳು ಅಂಬೇಡ್ಕರ್‌ರವರ ಚಿಂತನೆಯಲ್ಲಿರುವ ಈ ಕ್ರಾಂತಿಕಾರಿ ಸತ್ವವನ್ನು ಮರೆಮಾಚಿ ಅವರನ್ನು ಇನ್ನೊಬ್ಬ ಗಾಂಧಿಯಂತೆಯೋ, ಪವಾಡ ಪುರುಷನಂತೆಯೋ, ಸಮಾಜ ಸುಧಾರಕನಂತೆಯೋ ಅಥವಾ ಅಪಾರ ಮುತ್ಸದ್ದಿಯಂತೆಯೋ ಮಾತ್ರ ಚಿತ್ರಿಸಲು ಯತ್ನಿಸುತ್ತವೆ. ಸಂವಿಧಾನದಲ್ಲಿ ಅಂತರ್ಗತವಾಗಿ ಅಂಬೇಡ್ಕರ್‌ರವರ ಕ್ರಾಂತಿಕಾರಿ ದರ್ಶನಕ್ಕೆ ಮಾಡಿರುವ ದ್ರೋಹವನ್ನು ಚರ್ಚೆಗೇ ತರದಂತೆ ಮುಚ್ಚಿಹಾಕಲು ಪ್ರಯತ್ನಿಸುತ್ತವೆ. ಅಂಬೇಡ್ಕರ್ ಸಂವಿಧಾನ ಶಿಲ್ಪಿ ಎಂಬ ಪ್ರಚಾರವನ್ನು ಸರ್ಕಾರವೇ ಹೆಚ್ಚಿಗೆ ಮಾಡುತ್ತಿರುವ ಕಾರಣವೇ ಸಂವಿಧಾನದ ಬಗ್ಗೆ ಶೋಷಿತ ಜನತೆ ಮೂಲಭೂತ ಪ್ರಶ್ನೆಗಳನ್ನು ಎತ್ತಬಾರದೆಂದು.

ಅದೇರೀತಿ ಈ ವ್ಯವಸ್ಥೆಯಿಂದ ಅನುಕೂಲ ಪಡೆದಿರುವ ಒಂದು ಮಧ್ಯಮ ವರ್ಗ ಶೋಷಿತ-ದಲಿತ ಸಮುದಾಯಗಳಲ್ಲೂ ಹುಟ್ಟಿಕೊಂಡು ಅಂಬೇಡ್ಕರ್‌ರನ್ನು ಈ ರೀತಿಯಲ್ಲಿ ಸಂವಿಧಾನ ಶಿಲ್ಪಿ, ಮುತ್ಸದ್ದಿ ಇನ್ನಿತರ ಪ್ರತಿಮೆಗಳಲ್ಲೇ ಕಟ್ಟಿಹಾಕುವ ಪ್ರಯತ್ನ ಮಾಡುತ್ತಿದೆ. ಇದರಲ್ಲಿ ವ್ಯವಸ್ಥೆಯ ಮತ್ತು ಈ ಮಧ್ಯಮವರ್ಗದ ಪಟ್ಟಭದ್ರ ಹಿತಾಸಕ್ತಿಯೂ ಅಡಗಿದೆ.

ಅಂಬೇಡ್ಕರ್ ಜಯಂತಿಯ ದಿನ ಇವೆರಡರಿಂದಲೂ ಅಂಬೇಡ್ಕರರನ್ನು ಕ್ರಾಂತಿಕಾರಿ ಅಂಬೇಡ್ಕರರನ್ನು ಬಚಾವು ಮಾಡಿ ದಕ್ಕಿಸಿಕೊಳ್ಳುವ ಹೊಣೆ ಎಲ್ಲಾ ಶೋಷಿತ ಸಮುದಾಯಗಳ ಮುಂದಿದೆ.

ವೀರಶೈವ ಮಠಾಧೀಶರಿಗೆ ಎಚ್ಚರಿಕೆ!

ಲಂಕೇಶರು ಎಂದೂ ತಾವು ಹುಟ್ಟಿದ ಜಾತಿಯೊಂದಿಗೆ ಗುರುತಿಸಿಕೊಂಡವರಲ್ಲ. ಎಂದೂ ಯಾವ ದೇವಸ್ಥಾನಕ್ಕಾಗಲಿ, ಮಠಕ್ಕಾಗಲಿ ಹೋದವರಲ್ಲ. ಲಿಂಗ ಕಟ್ಟಿಕೊಂಡವರಲ್ಲ, ವಿಭೂತಿ ಹಚ್ಚಿಕೊಂಡವರಲ್ಲ, ಯಾವ ಮಠಾಧೀಶನ ಕಾಲಿಗೆ ಬಿದ್ದವರಲ್ಲ. ಮಾತ್ರವಲ್ಲ, ತಾವು ಹುಟ್ಟಿದ ಲಿಂಗಾಯತ ಜಾತಿಯವರೇನಾದರೂ ಜಾತಿ ಕಾರಣಕ್ಕಾಗಿ ತಮ್ಮೊಂದಿಗೆ ನಂಟು ಬೆಳೆಸಿಕೊಳ್ಳಲು ಯತ್ನಿಸಿದರೆ ಅಂತಹವರನ್ನು ತಕ್ಷಣವೇ ದೂರ ಇಡುತ್ತಿದ್ದರು. ಅಂಥಾ ಲಂಕೇಶರ ಫೋಟೋಗಳನ್ನು ತಮ್ಮ ಸಮಾವೇಶದಲ್ಲಿ ಪ್ರದರ್ಶಿಸುವ ಮೂಲಕ ವೀರಶೈವ ಮಹಾಸಭಾದವರು ಲಂಕೇಶರನ್ನು ಒಂದು ಜಾತಿಗೆ ಸೀಮಿತಗೊಳಿಸಲು ಯತ್ನಿಸಿದ್ದಾರೆ. ಇದು ಲಂಕೇಶರ ಜಾತ್ಯತೀತ ನಿಲುವಿಗೆ, ಬದುಕಿಗೆ, ವಿಚಾರಗಳಿಗೆ ಎಸಗಿದ ಘೋರ ಅವಮಾನವೇ ಸರಿ.



• ಗೌರಿ ಲಂಕೇಶ್
editorlankesh@gmail.com

ಕಂಡ ಹಾಗೆ


ಮೊನ್ನೆ ಮೈಸೂರಿನಲ್ಲಿ ನಡೆದ ವೀರಶೈವ ಮಹಾಸಭಾದ ಅಧಿವೇಶನದಲ್ಲಿ ಭಾಗವಹಿಸಿದ್ದ ಮಠಾಧೀಶರು ಇಡೀ ರಾಜ್ಯದ ಪ್ರಜ್ಞಾವಂತ ಜನರಿಗೆ ಅವಮಾನ ಮಾಡಿದ್ದಾರೆ, ಪ್ರಜಾತಂತ್ರ ವ್ಯವಸ್ಥೆಯನ್ನೇ ಲೇವಡಿ ಮಾಡಿದ್ದಾರೆ, ಓರ್ವ ಲಜ್ಜೆಗೆಟ್ಟ ಭ್ರಷ್ಟನಿಗೆ ತಮ್ಮ ಬೆಂಬಲ ನೀಡುವ ಮೂಲಕ ತಮ್ಮ ಮುಖಕ್ಕೆ ತಾವೇ ಕೆಸರು ಬಳಿದುಕೊಂಡಿದ್ದಾರೆ. ಅದೆಲ್ಲದರ ಬಗ್ಗೆ ಈ ಸಂಚಿಕೆಯಲ್ಲಿ ವಿವರವಾದ ವರದಿಗಳು ಮತ್ತು ಲೇಖನಗಳು ಇವೆ. ಆದ್ದರಿಂದ ಈ ಅಂಕಣದಲ್ಲಿ ಅದೇ ಮಹಾಸಭಾದವರು ಹೇಗೆ ನಮ್ಮೆಲ್ಲರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿರುವ ಪಿ.ಲಂಕೇಶರಿಗೆ ಅವಮಾನ ಮಾಡಿದ್ದಾರೆ ಎಂಬುದರ ಬಗ್ಗೆ ಹೇಳಬೇಕೆನಿಸುತ್ತಿದೆ.

ನಮ್ಮ ಮೈಸೂರು ವರದಿಗಾರ ಲಕ್ಷ್ಮಣ್ ಚೀರನಹಳ್ಳಿ ಮೊನ್ನೆ ನನಗೆ ಫೋನ್ ಮಾಡಿ ಮೈಸೂರಿನಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಪಿ.ಲಂಕೇಶರ ಫೋಟೋ ಗಳನ್ನು 'ವೀರಶೈವ ಸಾಹಿತಿಗಳು' ಮತ್ತು 'ಚಲನಚಿತ್ರ ರಂಗದಲ್ಲಿನ ವೀರಶೈವ ಸಾಧಕರು' ಎಂಬ ವಿಭಾಗಗಳಲ್ಲಿ ಪ್ರದರ್ಶಿಸಿದ್ದಾರೆ ಎಂದಾಗ ನನಗೆ ಶಾಕ್ ಆಯಿತು. ಏಕೆಂದರೆ ಎಲ್ಲರಿಗೂ ಗೊತ್ತಿರುವಂತೆ ಲಂಕೇಶರು ಎಂದೂ ತಾವು ಹುಟ್ಟಿದ ಜಾತಿಯೊಂದಿಗೆ ಗುರುತಿಸಿಕೊಂಡವರಲ್ಲ, ಎಂದೂ ಯಾವ ದೇವಸ್ಥಾನಕ್ಕಾಗಲಿ, ಮಠಕ್ಕಾಗಲಿ ಹೋದವರಲ್ಲ, ಲಿಂಗ ಕಟ್ಟಿಕೊಂಡವರಲ್ಲ, ವಿಭೂತಿ ಹಚ್ಚಿಕೊಂಡವರಲ್ಲ, ಯಾವ ಮಠಾಧೀಶನ ಕಾಲಿಗೆ ಬಿದ್ದವರಲ್ಲ, ಮಾತ್ರವಲ್ಲ, ತಾವು ಹುಟ್ಟಿದ ಲಿಂಗಾಯತ ಜಾತಿಯವರೇನಾದರೂ ಜಾತಿ ಕಾರಣಕ್ಕಾಗಿ ತಮ್ಮೊಂದಿಗೆ ನಂಟು ಬೆಳೆಸಿಕೊಳ್ಳಲು ಯತ್ನಿಸಿದರೆ ಅಂತಹವರನ್ನು ತಕ್ಷಣವೇ ದೂರ ಇಡುತ್ತಿದ್ದರು.

ಅಂಥಾ ಲಂಕೇಶರ ಫೋಟೋಗಳನ್ನು ತಮ್ಮ ಸಮಾವೇಶದಲ್ಲಿ ಪ್ರದರ್ಶಿಸುವ ಮೂಲಕ ವೀರಶೈವ ಮಹಾಸಭಾದವರು ಲಂಕೇಶರನ್ನು ಒಂದು ಜಾತಿಗೆ ಸೀಮಿತಗೊಳಿಸಲು ಯತ್ನಿಸಿದ್ದಾರೆ. ಇದು ಲಂಕೇಶರ ಜಾತ್ಯತೀತ ನಿಲುವಿಗೆ, ಬದುಕಿಗೆ, ವಿಚಾರಗಳಿಗೆ ಎಸಗಿದ ಘೋರ ಅವಮಾನವೇ ಸರಿ.

ಜಾತಿ ವಿಷಯದಲ್ಲಿ ಲಂಕೇಶರು ಎಷ್ಟು ಎಚ್ಚರ ವಹಿಸುತ್ತಿದ್ದರು ಎಂಬುದಕ್ಕೆ ಒಂದು ಪ್ರಕರಣವನ್ನು ಉದಾಹರಣೆಯಾಗಿ ಕೊಡಬಹುದು. ಇದು ನಡೆದದ್ದು 1999ರಲ್ಲಿ. ಚಿತ್ರದುರ್ಗದ ಮುರುಘಾರಾಜೇಂದ್ರ ಶರಣರು ನೀಡುವ ಪ್ರತಿಷ್ಠಿತ 'ಬಸವ ಪ್ರಶಸ್ತಿ'ಯನ್ನು ಆ ವರ್ಷ ಲಂಕೇಶರಿಗೆ ಕೊಡಬೇಕೆಂದು ಬಯಸಿದ್ದರು. ಅದಕ್ಕೆ ಕಾರಣವೂ ಇತ್ತು. ಶರಣರು ಇತರ ಲಿಂಗಾಯತ ಮಠಾಧೀಶರಂತೆ ಜಾತಿ ವ್ಯಾಮೋಹ ಹೊಂದಿದವರಲ್ಲ. ಆದ್ದರಿಂದ ಅವರು ನೀಡುವ ಈ ಪ್ರಶಸ್ತಿ ಕೂಡ ಜಾತಿ ಚೌಕಟ್ಟಿನ ಆಚೆಗಿದ್ದು, ಸಮಾಜಕ್ಕೆ ಒಳಿತನ್ನು ಮಾಡಿದವರಿಗೆ ಅದನ್ನು ಕೊಡುತ್ತಾರೆ. ಆ ಮಾನದಂಡದಲ್ಲೇ ಲಂಕೇಶರಿಗೆ ಅದನ್ನು ಕೊಡಬೇಕೆಂದು ಬಯಸಿದ್ದರೇ ಹೊರತು ಲಂಕೇಶರು ಲಿಂಗಾಯತ ಜಾತಿಯಲ್ಲಿ ಹುಟ್ಟಿದ್ದರು ಎಂಬ ಆಕಸ್ಮಿಕ ಕಾರಣಕ್ಕಲ್ಲ.

ಈ ಪ್ರಶಸ್ತಿ ಬಗ್ಗೆ ಲಂಕೇಶರೊಂದಿಗೆ ಚರ್ಚಿಸಬೇಕೆಂದು ಶರಣರು ಪಾರ್ವತೀಶ ಅವರಲ್ಲಿ ಪ್ರಸ್ತಾಪಿಸಿದಾಗ ಅದನ್ನು ಅಜಿತನಿಗೆ ತಿಳಿಸಲಾಯಿತು. ಅಜಿತ ಅಪ್ಪನನ್ನು ಕೇಳಿ ಒಂದು ದಿನವನ್ನು ನಿಗದಿಪಡಿಸಿದ. ಪಾರ್ವತೀಶ ಹೇಳುವಂತೆ "ಅವತ್ತು ನಾನು ಶರಣರೊಂದಿಗೆ ಬಂದಾಗ ಮೇಷ್ಟ್ರು ಅವರನ್ನು ಸೌಜನ್ಯದಿಂದಲೇ ಬರಮಾಡಿ ಕೊಂಡರು. ಸ್ವಲ್ಪ ಸಮಯದ ನಂತರ ಶರಣರು ಬಸವ ಪ್ರಶಸ್ತಿ ಬಗ್ಗೆ ಪ್ರಸ್ತಾಪಿಸಿದಾಗ ಮೇಷ್ಟ್ರು 'ನನ್ನ ಈ ಕೊನೇಗಾಲದಲ್ಲಿ ನನ್ನ ಸಮುದಾಯಕ್ಕೆ ಸೇರಿರುವ ಮಠದ ಪ್ರಶಸ್ತಿ ತೆಗೆದುಕೊಂಡರೆ




ವೀರಶೈವ ಸಮಾವೇಶದಲ್ಲಿ ಲಂಕೇಶರ ಹೆಸರು ಬಳಸಿರುವ ಅವಿವೇಕಿಗಳು

ಸರಿಹೋಗುವುದಿಲ್ಲ ನೀವು ಒಳ್ಳೆ ಕೆಲಸ ಮಾಡುತ್ತಿದ್ದೀರಿ. ಅದನ್ನು ಮುಂದುವರೆಸಿ. ನೀವು ನನ್ನನ್ನು ಪರಿಗಣಿಸಿದ್ದಕ್ಕೆ ಥ್ಯಾಂಕ್ಸ್' ಎಂದು ಶರಣರಿಗೆ ಬೇಸರವಾಗದಂತೆ ಹೇಳಿ ಬೇರೆ ವಿಷಯಗಳ ಬಗ್ಗೆ ಮಾತನಾಡಲಾರಂಭಿಸಿದರು. ಬಸವ ಪ್ರಶಸ್ತಿ ಜೊತೆ ಒಂದು ಲಕ್ಷ ರೂಪಾಯಿಗಳನ್ನು ಕೂಡ ಕೊಡುತ್ತಾರೆ. ಅದು ಚಿಕ್ಕ ಮೊತ್ತವೇನಲ್ಲ. ಆದರೂ ಮೇಷ್ಟ್ರು ಅದ್ಯಾವುದೂ ಬೇಡ ಎಂದಿದ್ದು ಕೇಳಿ ಅವರ ಬಗೆಗಿನ ನನಗೆ ಮೆಚ್ಚುಗೆ ಹೆಚ್ಚಿಗೆ ಆಯಿತು."

ಅಂದಹಾಗೆ, ಇತ್ತೀಚೆಗೆ ಭ್ರಷ್ಟ ಯಡ್ಡಿ ಪರವಾಗಿ ಓರ್ವ ಪ್ರಮುಖ ಲಿಂಗಾಯತ ಸ್ವಾಮಿ ಬೀದಿಗಿಳಿದಿದ್ದಲ್ಲದೆ "ಇದು ಲಿಂಗಾಯತರಿಗೆ ಆಗುತ್ತಿರುವ ಅನ್ಯಾಯ, ಅವಮಾನ" ಎಂದೆಲ್ಲ ಚೀರಿಕೊಂಡಿದ್ದು ಎಲ್ಲರಿಗೂ ನೆನಪಿದೆ. ಕುಡುಕನೂ, ಲಂಪಟನೂ, ಸ್ತ್ರೀಲೋಲನೂ ಆದ ಈ ಢೋಂಗಿ ಕಾವಿಧಾರಿ ಎಂತಹ ಸ್ವಾಮಿ ಎಂಬುದನ್ನು ಲಂಕೇಶರು ತಮ್ಮ ಆತ್ಮಕಥನ 'ಹುಳಿಮಾವಿನ ಮರ'ದಲ್ಲಿ ತೆರೆದಿಟ್ಟಿದ್ದಾರೆ. ಅದನ್ನು ಇಲ್ಲಿ ಯಥಾವತ್ತಾಗಿ ನೀಡಿದ್ದೇನೆ.

ಎಲ್ಲಕ್ಕಿಂತ ಒಂದು ಭೀಕರ ಅನುಭವ ಬೆಂಗಳೂರಲ್ಲೇ ಆಯಿತು. ಈಗ ಗಣ್ಯ ರಾಜಕಾರಣಿಯಾಗಿರುವ ಒಬ್ಬ ವ್ಯಕ್ತಿ ಒಂದು ಮಧ್ಯಾಹ್ನ ನನಗೆ ಫೋನ್ ಮಾಡಿ 'ಒಂದು ರಿಟ್ರೀಟ್‌ಗೆ ಹೋಗೋಣ ಬನ್ನಿ' ಎಂದು ಹೇಳಿದ. ನಾನು ಮತ್ತು ರವೀಂದ್ರ ರೇಶ್ಮೆ ಅವರು ಕಳಿಸಿದ ಕಾರ್‌ನಲ್ಲಿ ಹೋದೆವು. ಆ ಗಣ್ಯ ರಾಜಕಾರಣಿ ನಮ್ಮನ್ನು ಕರೆದುಕೊಂಡು ಕುಮಾರ ಪಾರ್ಕ್‌ನಲ್ಲಿದ್ದ ಒಂದು ಮಠಕ್ಕೆ ಹೋದರು. ಅಲ್ಲಿ ಅಂಥದೊಂದು ಮಠ ಇರಬಹುದೆಂದೇ ನನಗೆ ಗೊತ್ತಿರಲಿಲ್ಲ. ಅಲ್ಲಿ ಸ್ವಾಮೀಜಿ ಕಾವಿಯ ಲುಂಗಿಯಲ್ಲಿದ್ದರು; ಆಗಾಗ ಬಿಚ್ಚಿಕೊಳ್ಳುತ್ತಿದ್ದ ಅದು ಇನ್ನೇನು ಉದುರಿ ಬೀಳಬೇಕು ಅನ್ನುವಾಗ ಎತ್ತಿಕಟ್ಟಿಕೊಂಡು ವ್ಹಿಸ್ಕಿ ಹೀರುತ್ತಿದ್ದರು. 'ನೀನು ಇಷ್ಟು ಧೈರ್ಯವಾಗಿ ಬರೆಯಬೇಕಾದರೆ ನೀನು ವೀರಶೈವನೇ ಅಂತ ನಮಗೆ ತಿಳೀತು' ಎಂದು ನನ್ನನ್ನು ಮೆಚ್ಚಿದರು; ಈ ರೀತಿಯ ಭಟ್ಟಂಗಿ ಜಗದ್ಗುರುವನ್ನು ನಾನು ಎಂದೂ ನೋಡಿರಲಿಲ್ಲ. ವ್ಹಿಸ್ಕಿ ಹೀರುತ್ತಾ ತಾನು ಕೊಲ್ಹಾಪುರದಲ್ಲಿ ರಾಣಿಯರನ್ನು ಕೂಡಿದ್ದು, ತಮ್ಮ ಪಾಂಡಿತ್ಯದ ನೆರವಿನಿಂದ ಅನೇಕ ಹೆಣ್ಣುಮಕ್ಕಳನ್ನು ಒಲಿಸಿಕೊಂಡದ್ದು, ಬೆಂಗಳೂರಿನ ಸಾಹಸಗಳು; ಹೆಂಗಸರೊಂದಿಗೆ ರಂಜನೆಯಲ್ಲಿ ಮುಳುಗಿದ್ದಾಗ ಕೊನೇ ಗಳಿಗೆಯಲ್ಲಿ ಪೊಲೀಸರಿಂದ ತಪ್ಪಿಸಿಕೊಂಡದ್ದು–ಇತ್ಯಾದಿಯ ಬಗ್ಗೆ ಮಾತಾಡಿದರು. ಗಣ್ಯ ರಾಜಕಾರಣಿ ಕೂಡ ಕುಡಿತ ಹೆಚ್ಚಾದಂತೆಲ್ಲ ಸ್ವಾಮಿಯನ್ನು ಏಕವಚನದಲ್ಲಿ ಮಾತಾಡಿಸುತ್ತಾ ತಮ್ಮ ಅನುಭವ ಹೇಳಿಕೊಳ್ಳತೊಡಗಿದರು. ಕ್ರಮೇಣ ನನಗೆ ತಿಳಿಯತೊಡಗಿದಂತೆ ಈ ಸ್ವಾಮಿಯ ಮಠ ಕರ್ನಾಟಕದ ಎಲ್ಲ ವಾಣಿಜ್ಯ ತೆರಿಗೆ ಅಧಿಕಾರಿಗಳ, ಕಪ್ಪು ಹಣದ ವ್ಯಾಪಾರಿಗಳ, ತಲೆಹಿಡುಕರ, ವರ್ಗಾ ಮಾಡಿಸಿಕೊಳ್ಳುವವರ, ಇವರ ಮರ್ಜಿಯಲ್ಲಿ ಕೆಲಸ ಗಿಟ್ಟಿಸಿಕೊಳ್ಳುವವರ ಕೇಂದ್ರವಾಗಿತ್ತು. ರೇಶ್ಮೆ ಮತ್ತು ನಾನು ಇದನ್ನೆಲ್ಲ ನೋಡಿ ದಿಗ್ಭ್ರಮೆಗೊಳ್ಳುತ್ತಲೇ ಕುಡಿದು ಮೇಲೆದ್ದೆವು. ಗಣ್ಯರು ನಮ್ಮ ಒತ್ತಾಯಕ್ಕೆ ಮಣಿದು ಹೊರಡಲಣಿಯಾದರು. ಸ್ವಾಮಿ ನಮ್ಮನ್ನುದ್ದೇಶಿಸಿ ಹೇಳಿದರು; 'ಬೆಂಗಳೂರಾಗೆ ಒಂದು ತಣ್ಣನೆಯ ಜಾಗ ಅಂದ್ರೆ ಇದು. ನಿಮಗೆ ಇಷ್ಟವಾದಾಗಲೆಲ್ಲ ಇಲ್ಲಿಗೆ ಬಂದು ಅಕ್ಕಿರೊಟ್ಟಿ, ಎಣ್ಣೆಗಾಯಿ ಪಲ್ಯ, ಹಸನಾದ ಮರಳು ಮರಳು ತುಪ್ಪ ತಿಂದು ಇಲ್ಲಿರುವ ಗೆಳತಿಯರ ಜೊತೆ



ಆನಂದವಾಗಿ ಕಾಲ ಕಳೆಯಬಹುದು. ಇರುವ ಅಷ್ಟಿಷ್ಟು ತಾರುಣ್ಯ ಹಾಳು ಮಾಡಿಕ್ಯಾಬ್ಯಾಡ್ರಿ. ಬರ್ರಿ' ಅಂದರು. ನಾನು 'ಆಗಲಿ' ಎಂದು ಹೊರಟೆ. ರೇಶ್ಮೆ, 'ಮತ್ತೆ ಇಲ್ಲಿ ನಾವು ಕಾಲಿಡಕೂಡದು. ಇದು ಕ್ರಿಮಿನಲ್‌ಗಳ ಜಾಗ' ಅಂದರು. ಆನಂತರ ನಾನು ಆ ಕಡೆ ಮುಖ ತಿರುಗಿಸಿಲ್ಲ.

ಈ ಸ್ವಾಮಿಗಳ ಬಗ್ಗೆ ನಾನು ಹೇಳಬಹುದಾದ ಸಣ್ಣಪುಟ್ಟ ಕತೆಗಳಿವೆ. ಅವೆಲ್ಲ ಈಗ ಬೇಡ. ನನ್ನ ಬದುಕಿನಲ್ಲಿ ಈ ಸ್ವಾಮಿಗಳು ಮುಖ್ಯ ಪಾತ್ರವನ್ನೇನೂ ವಹಿಸಿಲ್ಲ. ನನ್ನ ನಿರೀಶ್ವರವಾದ ನನ್ನ ಹಲವಾರು ಅನುಭವಗಳಿಂದ, ಓದಿನಿಂದ ಮತ್ತು ನನ್ನದೇ ಆದ ಆತಂಕದಿಂದ ಬಂದಿದೆ.

ಇಂಥಾ ಸ್ವಾಮಿಯು ಭ್ರಷ್ಟ, ಲಜ್ಜೆಗೆಟ್ಟ, ಬಸವದ್ರೋಹಿ, ಲಿಂಗಾಯತ ಧರ್ಮಕ್ಕೆ ಕಳಂಕವಾಗಿರುವ ಯಡಿಯೂರಪ್ಪ ಪರ ನಿಲ್ಲದೆ ಇನ್ನೇನನ್ನು ಮಾಡುತ್ತಾನೆ? ಇನ್ನು ಮಹಾಸಭಾದಲ್ಲಿ ಭಾಗವಹಿಸಿದ ಬಹಳಷ್ಟು ಸ್ವಾಮಿಗಳಿಗೆ ಯಡ್ಡಿ ಸರ್ಕಾರಿ ತಿಜೋರಿಯಿಂದ ಮಠಗಳಿಗೆ ನೀಡುವ ಕೋಟ್ಯಾಂತರ ರೂಪಾಯಿಗಳ ಬಗ್ಗೆ ಆಸೆ ಅಥವಾ ಆತ ಕರುಣಿಸುವ ಕಾಲೇಜು, ಆಸ್ಪತ್ರೆ ಇತ್ಯಾದಿಗಳ ಮೇಲೆ ಕಣ್ಣು ಅಥವಾ ಆತನೊಂದಿಗೆ ತರಹೇವಾರಿ ಡೀಲ್‌ಗಳನ್ನು ಕುದುರಿಸಿಕೊಂಡು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ದುರಾಶೆ... ಇಂತಹವರು ಯಾವ ನಿಟ್ಟಿನಲ್ಲೂ ಆಧ್ಯಾತ್ಮಿಕ ಸಂತರಲ್ಲ, ಜನರ ಒಳಿತಿನ ಬಗ್ಗೆ ಚಿಂತಿಸುವ ಸಾಧುಗಳಲ್ಲ, ಸಮಾಜೋದ್ಧಾರದ ಬಗ್ಗೆ ಕಿಂಚಿತ್ತೂ ಕಾಳಜಿ ಹೊಂದಿರದ ಸರ್ವ ಸಂಗಪರಿತ್ಯಾಗಿಗಳಲ್ಲ. ಬದಲಾಗಿ ಇವರೆಲ್ಲ ಖಾವಿ ತೊಟ್ಟಿರುವ ವ್ಯಾಪಾರಿಗಳು, ಅಥವಾ ಹಲವಾರು ಚಟಗಳ ದಾಸರು ಕೆಲವರು ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವವರು ಕೆಲವರು ಹಣ ಮತ್ತು ಹೆಣ್ಣುಬಾಕರು. ಆ ಕಾರಣಕ್ಕೆ ಇವರ್ಯಾರಿಗೂ ಯಡ್ಡಿಯ ಭ್ರಷ್ಟಾಚಾರ ಕಾಣಿಸುವುದಿಲ್ಲ.

ಇವರೆಲ್ಲರ ಜಾತಿಪ್ರೇಮ ಬದಿಗಿರಲಿ, ಕನಿಷ್ಠ "ದಕ್ಷ ಮತ್ತು ಭ್ರಷ್ಟಾಚಾರರಹಿತವಾದ ಆಡಳಿತ ನೀಡಿದರೆ ನಿಮಗೆ ನಮ್ಮ ಬೆಂಬಲ ಇರುತ್ತದೆ" ಎಂದು ಹೇಳುವಷ್ಟು ವಿವೇಕವೂ ಸುತ್ತೂರು ಸ್ವಾಮಿ ಮತ್ತು ಸಿದ್ದಗಂಗಾ ಸ್ವಾಮಿ ಕಳೆದುಕೊಂಡಿದ್ದಾರೆಂದರೆ ಇವರೆಲ್ಲರ ಬಗ್ಗೆ ಏನನ್ನಬೇಕು?

ಭುವನೇಶ್ವರಿ ಪ್ರತಿಮೆ ನೆಪದಲ್ಲಿ ಕನ್ನಡ ಹೋರಾಟಗಾರರನ್ನು ಖರೀದಿಸಿದ್ದಾಯಿತು, ವಿಶ್ವಕನ್ನಡ ಸಮ್ಮೇಳನವನ್ನು ಆಯೋಜಿಸುವ ಮೂಲಕ ಸಾಮಾನ್ಯ ಕನ್ನಡ ಪ್ರೇಮಿಗಳಿಗೆ ಮಣ್ಣು ಮುಕ್ಕಿಸಿದ್ದಾಯಿತು, ಈಗ ಜಾತಿ ಹೆಸರಲ್ಲಿ ವೀರಶೈವರನ್ನು ನೇರವಾಗಿಯೂ ಲಿಂಗಾಯತರನ್ನು ಪರೋಕ್ಷವಾಗಿಯೂ ಹಳ್ಳ ಹಿಡಿಸುತ್ತಿದ್ದಾರೆ ಯಡ್ಡಿ.

ಓರ್ವ ಭ್ರಷ್ಟ-ಜಾತಿದ್ರೋಹಿ ಮುಖ್ಯಮಂತ್ರಿಯ ಪರವಾಗಿ ಇಲ್ಲಿಯತನಕ ನಿಲ್ಲುವ ಲಜ್ಜೆಗೇಡಿತನವನ್ನು ಯಾವ ಜಾತಿಯ ಸ್ವಾಮಿಗಳೂ, ಮುಖಂಡರೂ, ಪ್ರಮುಖರೂ ತೋರಿದ್ದ ಉದಾಹರಣೆ ಇರಲಿಲ್ಲ. ಆದರೆ ಯಡ್ಡಿಯ ನೀಚ ಅಧಿಕಾರಾವಧಿಯಲ್ಲಿ ಈ ರಾಜ್ಯದ ಒಂದು ಪ್ರಮುಖ ಮತ್ತು ಬಲಿಷ್ಠ ಸಮುದಾಯ ಅಂತಹ ಹೇಸಿಗೆ ಕೃತ್ಯಕ್ಕೆ ನಿಂತಿರುವುದು ನಿಜವಾಗಲೂ ಆತಂಕ ಹುಟ್ಟಿಸುತ್ತಿದೆ...

ಆತ್ಮಸಾಕ್ಷಿ ಕಳೆದುಕೊಂಡಿರುವ ವೀರಶೈವ ಮಠಾಧೀಶರೇ ಎಚ್ಚರಿಕೆ: "ನಾವು ನಿಮ್ಮನ್ನು ವಿರೋಧಿಸುತ್ತೇವೆ!"

ಕೆಪಿಸಿಸಿ ಪುನರ್ರಚನೆ
ಕೆಟ್ಟ ಮೇಲೂ ಬುದ್ಧಿ ಕಲಿಯದ ಕಾಂಗ್ರೆಸ್



ಕೆಲವರು ಕೆಟ್ಟ ಮೇಲೆ ಬುದ್ಧಿ ಕಲಿಯುತ್ತಾರೆ. ಆದರೆ ಕರ್ನಾಟಕ ಕಾಂಗ್ರೆಸ್‌ನವರು ಕೆಟ್ಟ ಮೇಲಿರಲಿ, ಚಟ್ಟ ಹತ್ತುವ ಸ್ಥಿತಿ ಬಂದಿದ್ದರೂ ಬುದ್ಧಿ ಕಲಿಯುವಂತೆ ಕಾಣುತ್ತಿಲ್ಲ.


ಈಗತಾನೇ ಪುನರ್ರಚನೆಯಾಗಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಪದಾಧಿಕಾರಿಗಳ ಪಟ್ಟಿ ನೋಡಿದರೆ ಸಾಕು, ಕಾಂಗ್ರೆಗಳ ಹುಚ್ಚಾಟ ಎಷ್ಟರಮಟ್ಟಿಗಿನದೆಂದು ಗೊತ್ತಾಗುತ್ತದೆ. ಸಿದ್ದರಾಮಯ್ಯ ಈ ಸಮಿತಿಯ ವಿರುದ್ಧ ಈಗಾಗಲೇ ತಿರುಗಿ ಬಿದ್ದಿದ್ದಾರೆ.

ಒಂದು ಕಡೆ ಬಿಜೆಪಿಯವರು ಲಿಂಗಾಯತ ಜಾತಿ ಲಾಬಿ ಮಾಡುತ್ತಾ ತಮ್ಮ ಬೇಸ್ ಭದ್ರಮಾಡಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ಜಾತ್ಯತೀತ ಜನತಾ ದಳ ತಾನೇನು ಕಡಿಮೆಯೆಂಬಂತೆ ರಾಜ್ಯದ ಉದ್ದಗಲಕ್ಕೂ ಓಡಾಡುತ್ತಿದ್ದಾರೆ. ಈ ಗದ್ದಲದಲ್ಲಿ ಅಡ್ರೆಸ್ ಇರದಂತಾಗಿರುವುದು ಕಾಂಗ್ರೆಗಳೇ.

ಈಗ್ಗೆ ಹನ್ನೊಂದು ವರ್ಷಗಳ ಹಿಂದೆ ಅಲ್ಲಂ ವೀರಭದ್ರಪ್ಪ ಅಧ್ಯಕ್ಷರಾಗಿದ್ದಾಗ ರಚನೆಯಾಗಿದ್ದ ಐವತ್ತು ಜನರ ಸಮಿತಿಯೇ ಇದುವರೆಗೂ ಕಾರ್ಯನಿರ್ವಹಿಸಿಕೊಂಡು ಬಂದಿತ್ತು. ಈಗ ನೋಡಿದರೆ ಹಾಲಿ ಅಧ್ಯಕ್ಷ ಜಿ.ಪರಮೇಶ್ವರ್ ಯಾರ ಅಭಿಪ್ರಾಯವನ್ನೂ ಕೇಳದೆ ಏಕಾಏಕಿ ದೆಹಲಿಗೆ ಹೋಗಿ 106 ಜನರ ಹೊಸ ಪದಾಧಿಕಾರಿಗಳ ನೇಮಕಕ್ಕೆ ಹೈಕಮಾಂಡ್‌ನ ಒಪ್ಪಿಗೆ ಪಡೆದು ಬಂದು ಪಟ್ಟಿ ಪ್ರಕಟಿಸಿಬಿಟ್ಟಿದ್ದಾರೆ. ಆದರೆ ನಿರೀಕ್ಷಿಸಿದಂತೆ ದೀಪಾವಳಿಯ ಸರ ಪಟಾಕಿಯಂತೆ ಈ ಏಕಪಕ್ಷೀಯ ಪಟ್ಟಿಗೆ ವಿರೋಧ ಆಸ್ಫೋಟಿಸುತ್ತಿದೆ.

ಇದೇನು ಪ್ರಾದೇಶಿಕ ಸಮತೋಲನ ಸಾಧಿಸುವ ಪಟ್ಟಿಯಾ? ಅಥವಾ ಜಾತಿವಾರು ಪ್ರಾತಿನಿಧ್ಯವಿರುವ ಸಮಿತಿಯಾ ಎಂದು ನೋಡಿದರೆ ಕಾಣುವುದು ಬರೀ ಜೊಳ್ಳು. ಪಕ್ಷ ಕಟ್ಟಬಲ್ಲ ಸಾಮರ್ಥ್ಯವಿರುವವರು, ಮಾಸ್ ಲೀಡರ್‌ಗಳಿಗೆ ಇಲ್ಲಿ ಜಾಗವೇ ಸಿಕ್ಕಿಲ್ಲ. ನೇಮಕಗೊಂಡಿರುವ ಬಹುತೇಕರು ಎಸ್.ಎಂ.ಕೃಷ್ಣ ಪಟಾಲಂಗಳು, ಉಳಿದವರು ಪರಮೇಶ್ವರ್ ಹಾಗೂ ಬಿ.ಕೆ.ಚಂದ್ರಶೇಖರ್ ಚೇಲಾಗಳು ಮಾತ್ರ.


ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ಹಳ್ಳ ಹಿಡಿಸಿ ಈಗ ದೆಹಲಿಯಲ್ಲಿರುವ ಎಸ್.ಎಂ.ಕೃಷ್ಣಗೆ ಈಗಲೂ ರಾಜ್ಯ ರಾಜಕೀಯವನ್ನು ನಿಯಂತ್ರಿಸಬೇಕೆಂಬ ಚಟ ಬಂದಿದೆ.



ಪರಮೇಶ್ವರ್ ಕೂಡಾ ಕೃಷ್ಣರ ಹಿಡಿತದಲ್ಲಿದ್ದಾರೆಂಬುದು ಮತ್ತೊಮ್ಮೆ ಸಾಬೀತಾಗುತ್ತಿದೆ.

ಅಹಿಂದ ವರ್ಗಕ್ಕೆ ಅನ್ಯಾಯ


ಹತ್ತು ಮಂದಿ ಉಪಾಧ್ಯಕ್ಷರು, ಇಪ್ಪತ್ತು ಜನರಲ್ ಸೆಕ್ರೆಟರಿಗಳು, ಮೂವತ್ತಾರು ಕಾರ್ಯದರ್ಶಿಗಳು ಹಾಗೂ ನಲವತ್ತು ಮಂದಿ ವರ್ಕಿಂಗ್ ಕಮಿಟಿ ಸದಸ್ಯರಿರುವ ಒಟ್ಟಾರೆ ನೂರಾ ಆರು ಮಂದಿಯ ಈ ಪಟ್ಟಿ ಗೊಂದಲದ ಗೂಡಿನಂತಿದೆ. ಬಹಳ ಮುಖ್ಯವಾಗಿ ದುರ್ಬಲ ವರ್ಗಗಳಿಗೆ ಕಡಿಮೆ ಪ್ರಾತಿನಿಧ್ಯ ನೀಡಲಾಗಿದೆ. ಒಕ್ಕಲಿಗರಿಗೆ 4 ಪ್ರಧಾನ ಕಾರ್ಯದರ್ಶಿ, ಆರು ಕಾರ್ಯದರ್ಶಿ ಹಾಗೂ ಎರಡು ಉಪಾಧ್ಯಕ್ಷ ಸ್ಥಾನ ಹಂಚಲಾಗಿದೆ. ಬ್ರಾಹ್ಮಣರಿಗೆ ಒಂದು ಉಪಾಧ್ಯಕ್ಷ ಸ್ಥಾನ ಮತ್ತು ಮೂರು ಸೆಕ್ರೆಟರಿ ಹುದ್ದೆ ನೀಡಲಾಗಿದೆ. ಇನ್ನು ಲಿಂಗಾಯತರಲ್ಲಿ ಇಪ್ಪತ್ತೆರಡು ಜನರನ್ನು ವಿವಿಧ ಆಯಕಟ್ಟಿನ ಸ್ಥಾನಗಳಲ್ಲಿ ನೇಮಿಸಲಾಗಿದೆ. ಉಳಿದಂತೆ ಕುರುಬ, ಗೊಲ್ಲ ಹಾಗೂ ನಾಯಕ ಸಮುದಾಯದವರಿಗೆ ಇವರ ವ್ಯಾಪ್ತಿ ದೊಡ್ಡದಿದ್ದಾಗಲೂ ತಲಾ ಒಂದೊಂದು ಸ್ಥಾನ ಮಾತ್ರ ನೀಡಿ ಮೂಲೆಗುಂಪು ಮಾಡಲಾಗಿದೆ. ವಿಪರ್ಯಾಸವೇನೆಂದರೆ ಸಾಕಷ್ಟು ದೊಡ್ಡಸಂಖ್ಯೆಯಲ್ಲಿರುವ ತಿಗಳರಿಗೆ, ಉಪ್ಪಾರರು, ಗಾಣಿಗರು, ಸವಿತ ಸಮಾಜದವರಿಗೆ, ಅಗಸ ಪಂಗಡದವರಿಗೆ ಒಂದೇಒಂದು ಪದಾಧಿಕಾರಿ ಸ್ಥಾನವೂ ಸಿಕ್ಕಿಲ್ಲ.




ಪಕ್ಷವನ್ನು ಕಟ್ಟಿ ಬೆಳೆಸಬೇಕೆಂಬ ಗುರಿ ಇದ್ದರೆ ಕಾಂಗ್ರೆ ನಾಯಕರು ಹೀಗೆ ಮಾಡಬಾರದಿತ್ತು. ಕೆಲವೆಲ್ಲ ಎಷ್ಟು ಅಧ್ವಾನವಾಗಿದೆಯೆಂದರೆ ಪ್ರೊ.ಬಿ.ಕೆ.ಚಂದ್ರಶೇಖರ್‌ಗೆ ಪಕ್ಷದ ಉಪಾಧ್ಯಕ್ಷ ಸ್ಥಾನವಲ್ಲದೆ ನಾಲ್ಕು ಇತರ ಕಮಿಟಿಗಳಲ್ಲೂ ಸೇರಿಸಲಾಗಿದೆ. ಸಮನ್ವಯ ಸಮಿತಿಗಳಲ್ಲಿ ಬಿಕೆಸಿ ಯಾಕೆ ಬೇಕಿತ್ತೆಂಬ ಪ್ರಶ್ನೆ ಈಗ ಇತರ ನಾಯಕರನ್ನೂ ಕಾಡುತ್ತಿದೆ.

ಸಿದ್ದು ಮಾತಿಗೆ ನಿರ್ಲಕ್ಷ್ಯ?

ನಿತ್ರಾಣಗೊಂಡು, ಸ್ಫೂರ್ತಿಯನ್ನೇ ಕಳೆದುಕೊಂಡಿದ್ದ ರಾಜ್ಯ ಕಾಂಗ್ರೆಸ್‌ಗೆ ಜೀವ ಬಂದದ್ದೇ ಸಿದ್ದರಾಮಯ್ಯನವರ ಪಕ್ಷ ಪ್ರವೇಶದಿಂದ. ಕರ್ನಾಟಕದ ಕೆಲವೇ ಕೆಲವು ಮಾಸ್ ಲೀಡರ್‌ಗಳಲ್ಲಿ ಒಬ್ಬರಾಗಿರುವ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಬಂದ ಮೇಲೂ ವರ್ಷಾನುಗಟ್ಟಲೆ ಅವರಿಗೆ ಯಾವುದೇ ಸ್ಥಾನ ನೀಡದೆ ಸತಾಯಿಸಲಾಗಿತ್ತು. ಕೊನೆಗೊಮ್ಮೆ ಪಕ್ಷದ ಅಧ್ಯಕ್ಷರನ್ನಾಗಿ ಮಾಡುವ ಸುದ್ದಿ ಇತ್ತಾದರೂ ಆರ್.ವಿ. ದೇಶಪಾಂಡೆ ಹಾಗೂ ಡಿ.ಕೆ.ಶಿವಕುಮಾರ್ ಅಧ್ಯಕ್ಷ-ಕಾರ್ಯಾಧ್ಯಕ್ಷರಾಗಿ ಬಂದು ಕುಳಿತರು. ಇದ್ದುದ್ದರಲ್ಲಿ ಡಿಕೆ ಒಂದಷ್ಟು ಕೆಲಸ ಮಾಡಿದರಾದರೂ ಆ ಅವಧಿಯಲ್ಲಿ ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಹೇಳಿಕೊಳ್ಳುವಂತ ಸಾಧನೆ ಮಾಡಲಾಗಿರಲಿಲ್ಲ. ನಂತರ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿ ಮುಂಚೂಣಿಗೆ ಬಂದರು. ವಿಧಾನಸಭಾ ಅಧಿವೇಶನಗಳಲ್ಲಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತಗಳ ಮುಖವಾಡವನ್ನೂ ತೆರೆದಿಡುವಲ್ಲಿ ಯಶಸ್ವಿಯೂ ಆದರು. ಗಣಿಧಣಿಗಳ ವಿರುದ್ಧ ಪಾದಯಾತ್ರೆ ಸಂಘಟಿಸಿ ಜನಪ್ರಿಯತೆ ಗಳಿಸಿದ್ದರು. ಆದರೂ ಈ ಕಾಂಗ್ರೆಸ್ ಎಂಬುದು ಎಚ್ಚರಗೊಳ್ಳಲಿಲ್ಲ. ಒಂದು ಕಡೆ ಪಕ್ಷವನ್ನು ಮುನ್ನಡೆಸಲು ಡೈನಾಮಿಕ್ ಲೀಡರ್‌ಗಾಗಿ ಕಾರ್ಯಕರ್ತರು ಕಾಯುತ್ತಿದ್ದಾಗ ಅಷ್ಟೇನು ಚರಿಷ್ಮಾ ಇಲ್ಲದ ಪರಮೇಶ್ವರ ಕೆಪಿಸಿಸಿ ಅಧ್ಯಕ್ಷರಾಗಿ ಬಂದರು. ಈಗ ನೋಡಿದರೆ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿಯು ಆಕಳಿಕೆ ಬರಿಸುವಂತೆ ಸಿದ್ಧವಾಗಿದೆ. ಸಿದ್ದರಾಮಯ್ಯ ಹದಿನೈದು ಜನರ ಪಟ್ಟಿಯೊಂದನ್ನು ನೀಡಿ ಅವರನ್ನು ಪಕ್ಷದ ವಿವಿಧ ಸ್ಥಾನಗಳಿಗೆ ನೇಮಿಸುವಂತೆ ಕೋರಿದ್ದಾರೆನ್ನಲಾಗಿದೆ. ಆದರೆ ಅವರ ಪೈಕಿ ಸತೀಶ ಜಾರಕಿ ಹೊಳಿ ಹಾಗೂ ಡಾ.ಎಚ್.ಸಿ. ಮಹದೇವಪ್ಪನವರಿಗೆ ಮಾತ್ರ ಸ್ಥಾನ ನೀಡಲಾಗಿದ್ದು ಉಳಿದವರನ್ನು ಮೂಲೆಗುಂಪು ಮಾಡಲಾಗಿದೆ. ಕೋದಂಡರಾಮಯ್ಯ, ಅಹಿಂದ ನಾಯಕ ಬಿ.ಎಸ್. ಶಿವಣ್ಣ ಮುಂತಾದವರನ್ನು ವಿನಾಕಾರಣ ನಿರ್ಲಕ್ಷಿಸಿರುವುದು ಎದ್ದು ಕಾಣುತ್ತಿದೆ. ಇದರಿಂದ ಸಿದ್ದರಾಮಯ್ಯ ಎಷ್ಟು ಸಿಟ್ಟಿಗೆದ್ದಿದ್ದಾರೆಂದರೆ ಕೆಪಿಸಿಸಿಯ ಹೊಸ ಪದಾಧಿಕಾರಿಗಳ ಮೊದಲ ಸಭೆಗೆ ಅವರು ಹೋಗದೆ ದೂರ ಉಳಿದರು. ಈ ಸುದ್ದಿ ಹೈಕಮಾಂಡ್‌ಗೂ ತಲುಪಿದ್ದು ಮಾತುಕತೆಗಾಗಿ ಸಿದ್ದರಾಮಯ್ಯರನ್ನು ದೆಹಲಿಗೆ ಕರೆಸಿಕೊಳ್ಳುತ್ತಿದ್ದಾರೆ.





ತೂಕವಿಲ್ಲದ ಪದಾಧಿಕಾರಿಗಳು

ಕರ್ನಾಟಕ ಕಾಂಗ್ರೆಸ್ ತನ್ನ ಸಮಾಧಿಯನ್ನು ತಾನೇ ಹೇಗೆ ತೋಡಿಕೊಳ್ಳುತ್ತಿದೆಯೆಂಬುದಕ್ಕೆ ಹೊಸ ಪದಾಧಿಕಾರಿಗಳಾಗಿರುವ ಕೆಲವರ ಹಿನ್ನೆಲೆಯನ್ನು ನೋಡಬಹುದು. ಜಿ.ಪರಮೇಶ್ವರರ ಗನ್‌ಮ್ಯಾನ್ ಆಗಿದ್ದ ಬಿ. ಬಸವ ರಾಜು ಈಗ ಸೆಕ್ರೆಟರಿ! ಎಸ್.ಎಂ.ಕೃಷ್ಣರ ಅಳಿಯ ಸಿದ್ದಾರ್ಥನ ಕಾಫಿ ತೋಟದಲ್ಲಿ ಮ್ಯಾನೇಜರ್ ಆಗಿದ್ದ ಹಾಲಪ್ಪ ಎಂಬುವವರಿಗೂ ಪದಾಧಿಕಾರಿ ಸ್ಥಾನ ಕೊಟ್ಟು ಕೂರಿಸಲಾಗಿದೆ!! ಪರಮೇಶ್ವರರ ಕ್ಲಾಸ್‌ಮೇಟ್ ಆಗಿದ್ದರೆಂಬ ಒಂದೇ ಅರ್ಹತೆಯಿಂದ ಎಚ್.ಟಿ. ಮೋಹನ್‌ಗೂ ಸ್ಥಾನ ಸಿಕ್ಕಿದೆ. ಬೆಂಗಳೂರು ಕಾರ್ಪೋರೇಷನ್ ಎಲೆಕ್ಷನ್‌ನಲ್ಲಿ ಎರಡು ಬಾರಿ ಸೋತಿರುವ ಬಿ.ಸಿ. ಚಂದ್ರಶೇಖರ್ ಕೂಡ ಈಗ ಕೆಪಿಸಿಸಿ ಪದಾಧಿಕಾರಿ. ಆಸ್ಕರ್ ಫರ್ನಾಂಡಿಸರ ಪತ್ನಿ ಒಡವೆ ಖರೀದಿಸುವ ಅಂಗಡಿ ಎಂಬ ಕಾರಣಕ್ಕೆ ಆಭರಣ ವ್ಯಾಪಾರಿ ಕೆ.ಪಿ.ನಂಜುಂಡಿಗೂ ಸ್ಥಾನಮಾನ. ಚನ್ನಸ್ವಾಮಿ ಎಂಬುವವರು ಆಂಧ್ರಪ್ರದೇಶದ ಕಾಂಗ್ರೆ ಸಚಿವನ ನೆಂಟನೆಂಬ ಕಾರಣಕ್ಕೆ ಪದಾಧಿಕಾರಿ ಹುದ್ದೆ ನೀಡಲಾಗಿದೆ. ಇದಿಷ್ಟೇ ಅಲ್ಲದೆ ಶರ್ಮ ಟ್ರಾನ್ಸ್‌ಪೋರ್ಟ್‌ನ ಮಾಲೀಕ ಸುರೇಶ್ ಶರ್ಮ, ಆರೆಸ್ಸೆಸ್ ಹಿನ್ನೆಲೆಯ ಹಿರಿಯಣ್ಣಸ್ವಾಮಿ ಮುಂತಾದವರು ಈ ಪಟ್ಟಿಯಲ್ಲಿ ತೂರಿಕೊಂಡುಬಿಟ್ಟಿದ್ದಾರೆ.

ಆಶ್ಚರ್ಯ ಅಂದರೆ ಜನಸಾಮಾನ್ಯರಿರಲಿ, ಕಾಂಗ್ರೆಸ್ ಕಾರ್ಯಕರ್ತರನ್ನು ಹತ್ತಿರ ಸೇರಿಸದ ಶೋಕಿಲಾಲ ಬಿ.ಎಲ್.ಶಂಕರ್ ಈಗ ಉಪಾಧ್ಯಕ್ಷ. ಮೂಡಿಗೆರೆ ತಾಲ್ಲೂಕಿನ ಶಂಕರ್ ಅಲ್ಲದೆ ಡಿ.ಕೆ.ತಾರಾದೇವಿ ಹಾಗೂ ಚಂದ್ರಪ್ಪ ಮೂವರಿಗೆ ಸ್ಥಾನ ಸಿಕ್ಕಿದೆ.


ಇನ್ನು ಜನರಲ್ ಸೆಕ್ರೆಟರಿಗಳಾಗಿರುವ ಗೋವಿಂದರಾಜ್, ಮಾಗಡಿ ಕಮಲಮ್ಮ ಮುಂತಾದವರು ಪಕ್ಷ ಕಟ್ಟಬಲ್ಲ ಸಾಮರ್ಥ್ಯ ಇಲ್ಲದವರು. ಆಶ್ಚರ್ಯ ಏನೆಂದರೆ ವಿ.ಎಸ್. ಉಗ್ರಪ್ಪ, ಹ್ಯಾರೀಸ್, ಎಸ್.ಟಿ. ಸೋಮಶೇಖರ್ ಇನ್ನೂ ಮುಂತಾದ ಹುರುಪಿನ ನಾಯಕರನ್ನು ಪರಿಗಣಿಸಿಯೇ ಇಲ್ಲ.

ಒಟ್ಟಿನಲ್ಲಿ ಹನ್ನೊಂದು ವರ್ಷಗಳ ನಂತರ ಕೆಪಿಸಿಸಿ ಪುನರ್ರಚನೆ ಆಗಿದೆಯಾದರೂ ಇದರಿಂದ ಕಾಂಗ್ರೆಸ್‌ಗೆ ಚೈತನ್ಯ ಬರುವಂತೆ ಕಾಣುತ್ತಿಲ್ಲ. ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕದ ವಾಸ್ತವ ಪರಿಸ್ಥಿತಿಗಳು ನಿಜವಾಗಲೂ ಗೊತ್ತಿದ್ದಿದ್ದರೆ ಈ ಪದಾಧಿಕಾರಿಗಳ ಪಟ್ಟಿ ಇಷ್ಟು ಅಸಂಬದ್ಧವಾಗಿರುತ್ತಿರಲಿಲ್ಲ.

ಚೀಟರ್ ವೆಂಕಟೇಶ ಗೌಡನೂ ಕಾರ್ಯದರ್ಶಿ!

ಹೊಸ ಪದಾಧಿಕಾರಿಗಳ ಪಟ್ಟಿಯಲ್ಲಿರುವ ಹೆಸರುಗಳ ಪೈಕಿ ನಿಷ್ಠಾವಂತ, ಸಜ್ಜನ ಕಾಂಗ್ರೆಗಳನ್ನು ರೊಚ್ಚಿಗೆಬ್ಬಿಸುತ್ತಿರುವ ಮೊದಲ ಹೆಸರೆಂದರೆ

ಕೆ.ಆರ್.ವೆಂಕಟೇಶ್ ಗೌಡನದ್ದು.



ವಂಚನೆ, ಕ್ರಿಮಿನಲ್ ಚಟುವಟಿಕೆ ಹಾಗೂ ಪುಂಡಾಟಿಕೆಯ ಹಿನ್ನೆಲೆಯಿರುವ ಈ ವೆಂಕಟೇಶ್ ಗೌಡ ಕೆಪಿಸಿಸಿ ಕಾರ್ಯದರ್ಶಿಯಾಗಿ ಪಟ್ಟಿಯಲ್ಲಿ ಸೇರಿಕೊಂಡಿರುವುದನ್ನು ನೋಡಿ ಅನೇಕರಿಗೆ ದಿಗ್ಭ್ರಮೆಯಾಗಿದೆ.

ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ್‌ಗೆ ಹಾಗೂ ರಾಜ್ಯ ಕಾಂಗ್ರೆಸ್ ಪಾರ್ಟಿಗೆ ಮುಂದೆ ಕೆಟ್ಟ ಹೆಸರು ತರಲಿರುವ ವೆಂಕಟೇಶ್ ಗೌಡನನ್ನು ಕಾರ್ಯದರ್ಶಿ ಸ್ಥಾನದಿಂದ ಆಚೆಗೆ ಓಡಿಸಬೇಕೆಂದು ಕೆಲವರು ಈಗಾಗಲೇ ಹೈಕಮಾಂಡ್‌ಗೆ ದೂರು ನೀಡಿದ್ದಾರೆ.




ಚೆಕ್ ಬೌನ್ಸ್ ಕೇಸುಗಳು, ಹಣಕಾಸಿನ ವಂಚನೆ, ಅಮಾಯಕ ಮಹಿಳೆಯರನ್ನು ವಂಚಿಸಿರುವ ಅನೇಕ ಪ್ರಕರಣಗಳು ಈ ವೆಂಕಟೇಶ್ ಗೌಡನ ವಿರುದ್ಧ ಇದೆ. ಇವನು ಶಿವಮೊಗ್ಗ ಹರಿಹರದಲ್ಲಿ ಇಬ್ಬಿಬ್ಬರನ್ನು ಮದುವೆಯಾಗಿ ಕೈಕೊಟ್ಟಿದ್ದಾನೆ. ಕನಿಷ್ಠ ಅರ್ಧ ಡಜನ್ ಮಹಿಳೆಯರಿಗೆ ಮದುವೆಯ ನಿರೀಕ್ಷೆ ಹುಟ್ಟಿಸಿ ಬಳಸಿಕೊಂಡು ವಂಚಿಸಿದ್ದಾನೆ. ಹೀಗಿದ್ದಾಗಲೂ ಪರಮೇಶ್ವರ್ ಅದು ಹೇಗೆ ಮತ್ತು ಯಾಕೆ ವೆಂಕಟೇಶ್ ಗೌಡನನ್ನು ಕಾರ್ಯದರ್ಶಿಯನ್ನಾಗಿ ಮಾಡಿದರೆಂಬ ಪ್ರಶ್ನೆ ಕಾರ್ಯಕರ್ತರನ್ನು ಕಾಡುತ್ತಿದೆ.

ಅದೇರೀತಿ ಬೆಂಗಳೂರು ಭೂಗತ ಲೋಕದಲ್ಲಿ ಒಂದು ಕಾಲದಲ್ಲಿ ಮೆರೆಯುತ್ತಿದ್ದ ಕ್ರಿಸ್ಟೋಫರ್ ಚಕ್ರವರ್ತಿ ಅಲಿಯಾಸ್ ಚಕ್ರೆಯ ಪತ್ನಿ ಕ್ವೀನ್ ಎಲಿಜಬೆತ್ ಕೂಡ ಈಗ ಕೆಪಿಸಿಸಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಪರಮೇಶ್ವರ್‌ಗೆ ಉಗ್ರಪ್ಪ ತರದವರು ಬೇಡವಾದರು, ಕೋದಂಡರಾಮಯ್ಯ ತರದ ಸಜ್ಜನರು ಕಾಣದಾದರು, ಆದರೆ ಕ್ರಿಮಿನಲ್ ಹಿನ್ನೆಲೆಯ ವೆಂಕಟೇಶ್ ಗೌಡ ಯೋಗ್ಯರಂತೆ ಕಾಣುತ್ತಾರೆಂದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತೆ ತಲೆ ಎತ್ತಲು ಸಾಧ್ಯವೇ?

ನಿದ್ದೆ ಮಾತ್ರೆಗೆ ನಲುಗಿದನೇ ದೇವಮಾನವ?

ಸಂಪತ್ತು ಲೂಟಿ!



ಲಕ್ಷಾಂತರ ಭಕ್ತಾದಿಗಳ ಆರಾಧ್ಯದೈವ, ದೇವಮಾನವ ಪುಟ್ಟಪರ್ತಿ ಸಾಯಿಬಾಬಾನ, ಅಂತಿಮ ವಿದಾಯಕ್ಕೆ ಕ್ಷಣಗಣನೆ ಆರಂಭವಾಗಿದೆ. ಕಳೆದ ಇಪ್ಪತ್ತೈದು ದಿನಗಳಿಂದಲೂ ಸಾಯಿಬಾಬಾರ ಆರೋಗ್ಯ ಸ್ಥಿತಿಗತಿಯ ಹಿನ್ನೆಲೆಯಲ್ಲಿ ಸತ್ಯಸಾಯಿ ಸೆಂಟ್ರಲ್ ಟ್ರಸ್ಟ್‌ನ ಸದಸ್ಯರ ದುಷ್ಟಕೂಟ ನಡೆಸಿದ ಪ್ರಹಸನಗಳು, ಅದಕ್ಕೆ ಬೆನ್ನೆಲುಬಾಗಿ ನಿಂತ ಆಂಧ್ರ ಪ್ರದೇಶದ ಕಿರಣ್ ಕುಮಾರ್ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ಹೊಣೆಗೇಡಿತನ, ಬಾಬಾರೊಂದಿಗೆ ವ್ಯವಹಾರಿಕ ಸಂಬಂಧಗಳನ್ನಿರಿಸಿಕೊಂಡಿದ್ದ ಮಹಾಮಹಿಮರ ದಿವ್ಯಮೌನ..... ಎಲ್ಲದಕ್ಕೂ ತೆರೆ ಬೀಳಲಿದೆ.

ಈ ಕ್ಷಣಕ್ಕೆ ಲಭ್ಯವಾಗಿರುವ ಮಾಹಿತಿಗಳ ಪ್ರಕಾರ ಸಾಯಿಬಾಬಾರ ದೇಹ ಯಾವ ಚಿಕಿತ್ಸೆಗೂ ಸ್ಪಂದಿಸುತ್ತಿಲ್ಲ, ಅವರ ಕಣ್ಣುಗಳು ನಿಸ್ತೇಜಗೊಂಡಿವೆ. ಕಿಡ್ನಿ, ಹೃದಯಗಳೆರಡೂ ಸ್ಪಂದನೆ ಕಳೆದುಕೊಳ್ಳುತ್ತಿವೆ. ಈ ಪರಿಸ್ಥಿತಿಯನ್ನು 'ಕ್ಲಿನಿಕಲಿ ಡೆಡ್' ಎಂದೇ ಪರಿಗಣಿಸುವುದಾಗಿಯೂ ಅವರಿನ್ನು ಚೇತರಿಸಿಕೊಳ್ಳುವುದು ಕಷ್ಟಸಾಧ್ಯವೆಂದೂ ಅಲ್ಲಿನ ವೈದ್ಯರು ಸ್ಪಷ್ಟಪಡಿಸಿದ್ದಾರೆ.

ಆಂಧ್ರಪ್ರದೇಶ ಸರ್ಕಾರ ಅನಂತಪುರ ಜಿಲ್ಲೆಯ ಮೂಲೆ ಮೂಲೆಗಳಿಂದ ಮೂರುಸಾವಿರ ಪೊಲೀಸರನ್ನು ಪುಟ್ಟಪರ್ತಿಯಲ್ಲಿ ನಿಯೋಜಿಸಿದೆ. ಜಿಲ್ಲೆಯಾದ್ಯಂತ 150 ಚೆಕ್‌ಪೋಸ್ಟ್‌ಗಳ ವಿರ್ಪಾಟು ಮಾಡಿದೆ. ಆ ಮೂಲಕ ಗ್ರಾಮೀಣ ಪ್ರದೇಶಗಳಿಂದ ಆಗಮಿಸಬಹುದಾದ ಭಕ್ತಾದಿಗಳನ್ನು ನಿಗ್ರಹಿಸುವ ಪರೋಕ್ಷ ಸೂಚನೆ ನೀಡಲಾಗಿದೆ. ತತ್‌ಕ್ಷಣವೇ ಬರುವಂತೆ ಸತ್ಯ ಸಾಯಿ ಟ್ರಸ್ಟ್‌ನ ಸದಸ್ಯರಿಗೆ ಸಂದೇಶ ರವಾನಿಸಲಾಗಿದೆ. ಮಂತ್ರಿಗಳಾದ ರಘುವೀರಾ ರೆಡ್ಡಿ, ಗೀತಾರೆಡ್ಡಿ ಇಂದು ಪುಟ್ಟಪರ್ತಿಗೆ ಆಗಮಿಸಲಿದ್ದಾರೆ.

ಎಲ್ಲ ಬೆಳವಣಿಗೆಗಳು ಸಾಯಿಬಾಬಾರ ಭಕ್ತಾದಿಗಳಿಗೆ ಆಘಾತಕರ ಸತ್ಯಾಂಶವನ್ನು ಪ್ರಕಟಿಸಲಿಕ್ಕೆ ಅಲ್ಲಿನ ಸರ್ಕಾರ ಮಾಡಿಕೊಳ್ಳುತ್ತಿರುವ ಪೂರ್ವ ತಯಾರಿಯಂತೆಯೇ ಭಾಸವಾಗುತ್ತಿವೆ. ಬುಧವಾರ ಮಧ್ಯಾಹ್ನ ಬಾಬಾರ ಆರೋಗ್ಯದ ಪರಿಸ್ಥಿತಿ ಕೈ ಮೀರುತ್ತಿದೆಯೆಂಬ ಅಲ್ಲಿನ ವೈದ್ಯರ ಹೇಳಿಕೆಗಳು ಪ್ರಕಟವಾಗುತ್ತಿದ್ದಂತೆ ಇಡೀ ವಾತಾವರಣ ಸಂಕ್ಷೋಭೆಗೊಳಗಾಗಿದ್ದು ಪರಿಸ್ಥಿತಿಯ ನಿಯಂತ್ರಣಕ್ಕೆ ಇನ್ನಿಲ್ಲದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ವಿಪರ್ಯಾಸವೆಂದರೆ ಕಳೆದ ಇಪ್ಪತ್ತೈದು ದಿನಗಳಿಂದ ಬಾಬಾರ ಸ್ಥಿತಿ ಕ್ಷಣಕ್ಷಣಕ್ಕೆ ವಿಷಮಿಸುತ್ತಿದ್ದರೂ ಅವರ ಆರೋಗ್ಯದ ಸ್ಥಿತಿಗತಿಯ ಕುರಿತು ನಂಬಲರ್ಹ ಮಾಹಿತಿಯನ್ನು ಸತ್ಯಸಾಯಿ ಟ್ರಸ್ಟ್‌ನ ಸದಸ್ಯರಾಗಲೀ, ಆಂಧ್ರ ಸರ್ಕಾರವಾಗಲೀ ನೀಡದೆ ಲಕ್ಷಾಂತರ ಜನತೆಗೆ ಹಗಲುಮೋಸ ಎಸಗಿವೆ.

ಆಂಧ್ರ ಸರ್ಕಾರದ ಮಂತ್ರಿ ಶ್ರೀಮತಿ ಗೀತಾ ರೆಡ್ಡಿ, ಸರ್ಕಾರವೇ ನೇಮಿಸಿದ ವೈದ್ಯರ ತಂಡ ಹೊರತುಪಡಿಸಿದರೆ ಮಿಕ್ಕವರ್‍ಯಾರೂ ಬಾಬಾರ ಹತ್ತಿರ ಸುಳಿಯಲಿಕ್ಕೆ ಆಗಿಲ್ಲ, ಈ ತಂಡ ಕೂಡಾ ಟ್ರಸ್ಟ್ ಸದಸ್ಯರ ಆಣತಿಯಂತೆ ಮಾಹಿತಿ ನೀಡಿದೆಯೇ ಹೊರತು ಜನರಿಗೆ ಹೇಳಬಹುದಾದ ಸತ್ಯಾಂಶಗಳನ್ನು ಪ್ರಕಟಿಸಿಲ್ಲ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

ಪ್ರಶಾಂತಿ ನಿಲಯದ ವ್ಯವಹಾರಗಳು ಟ್ರಸ್ಟ್‌ನ ಸುಪರ್ದಿಯಲ್ಲಿರುವುದರಿಂದ ಅಲ್ಲಿನ ಆಗು-ಹೋಗುಗಳಿಗೆ ತಾವೇನೂ ಉತ್ತರದಾಯಿಗಳಲ್ಲ ಎಂಬಂತೆ ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ. ಪುಟ್ಟಪರ್ತಿಯಾಗಲೀ, ಅಲ್ಲಿನ ಪ್ರಶಾಂತಿ ನಿಲಯವಾಗಲಿ, ಬಾಬಾರನ್ನು ಅಕ್ಷರಶಃ ಬಂಧನದಲ್ಲಿಟ್ಟಿರುವ ಸತ್ಯಸಾಯಿ ಟ್ರಸ್ಟ್ ಆಗಲಿ ಈ ನೆಲದ ಕಾನೂನಿಗೆ ಅತೀತ ಪ್ರದೇಶಗಳಲ್ಲ, ಅದು ವ್ಯಾಟಿಕನ್ ಸಿಟಿಯೂ ಅಲ್ಲ, ಈ ದೇಶದ ಕಾಡುಮೇಡುಗಳಿಗೆ, ಗಲ್ಲಿಗಲ್ಲಿಗಳ ಇಂಚಿಂಚಿಗೂ ಅನ್ವಯಿಸುವ ಕಾನೂನು ನಿಯಮಾವಳಿಗಳೇ ಪುಟ್ಟಪರ್ತಿಗೂ, ಅಲ್ಲಿ ನಡೆಯುತ್ತಿರುವ ಪ್ರಹಸನಗಳ ಪರಾಮರ್ಶೆಗೂ ಅನ್ವಯಿಸುತ್ತವೆ.

ಅಸಲಿ ಸಮಸ್ಯೆಯಿರುವುದು ಪುಟ್ಟಪರ್ತಿ ಸಾಯಿಬಾಬಾ ಆಶ್ರಮದೊಂದಿಗೆ ತಳುಕು ಹಾಕಿಕೊಂಡಿರುವ ಗಣ್ಯಾತಿಗಣ್ಯರ ಕಪ್ಪು ವ್ಯವಹಾರಗಳು, ಟ್ರಸ್ಟ್ ಸದಸ್ಯರ ಲೂಟಿಕೋರ ಅಜೆಂಡಾಗಳು. ಇಲ್ಲವಾದರೆ ಯಃಕಶ್ಚಿತ್ ಬಾಬಾರ ಉಪಚಾರದ ಆಗುಹೋಗುಗಳನ್ನು ನೋಡಿಕೊಳ್ಳುವ ಸತ್ಯಜಿತ್ ಎಂಬಾತ ಇಡೀ ಬೆಳವಣಿಗೆಗಳುದ್ದಕ್ಕೂ ಬಾಬಾರ ಆಪ್ತರನ್ನು, ಅಸಂಖ್ಯಾತ ಭಕ್ತರನ್ನು, ಇಡೀ ಸರ್ಕಾರಿ ಯಂತ್ರಾಂಗವನ್ನು ಒಳಗೆ ಬರದಂತೆ ನಿಗ್ರಹಿಸುತ್ತಾನೆಂದರೆ ಅದು ನಂಬಬಹುದಾದ ಮಾತಾ?

ಬಾಬಾ ವೆಂಟಿಲೇಟರ್‌ನಲ್ಲೇ ಉಸಿರಾಡುತ್ತಿದ್ದರೂ, ವಿಶ್ವದಾದ್ಯಂತ ಭಕ್ತರು ಆತಂಕ ವ್ಯಕ್ತಪಡಿಸುತ್ತಿದ್ದರೂ ಟ್ರಸ್ಟ್‌ನ ಆಡಳಿತ ಮಂಡಳಿ ಸದಸ್ಯರು ಮಾತ್ರ ತುಟಿ ಬಿಚ್ಚುತ್ತಿಲ್ಲ, ಡಾಕ್ಟರ್ ಸಫಾಯಿ ಬುಲೆಟಿನ್ ಹೊರತುಪಡಿಸಿದರೆ ಅವರ ಆರೋಗ್ಯದ ಕುರಿತು ಒಂದೇ ಒಂದು ಪ್ರಕಟಣೆಯನ್ನೂ ನೀಡಿಲ್ಲ, ಬಾಬಾರ ಪರಿಸ್ಥಿತಿಗೆ ಕಾರಣವೇನೆಂಬುದರ ಬಗ್ಗೆ ಟ್ರಸ್ಟ್ ಪೂರ್ತಿ ಮೌನವಹಿಸುತ್ತಿದೆ. ಟ್ರಸ್ಟ್‌ನ ಗಣ್ಯರು ತಮ್ಮ ತಪ್ಪನ್ನು ಮುಚ್ಚಿಡಲಿಕ್ಕಾಗಿ ಸಹಾಯಕ ಸತ್ಯಜಿತ್ ಹೆಸರನ್ನು ಮುಂಚೂಣಿಗೆ ತಂದಿದ್ದಾರಾ ಎಂಬ ಅನುಮಾನಗಳೂ ಕೂಡಾ ವ್ಯಕ್ತವಾಗುತ್ತಿವೆ.

ಬಾಬಾ ಅನಾರೋಗ್ಯದಿಂದ ಅಸ್ವಸ್ಥರಾದ ಸುದ್ದಿ ಪ್ರಕಟವಾದ ಕ್ಷಣದಿಂದ ಬಾಬಾರಿಗೆ ಏನು ಕಾಯಿಲೆ? ಯಾವ ರೀತಿಯ ಚಿಕಿತ್ಸೆ ನೀಡುತ್ತಿದ್ದಾರೆ? ಚಿಕಿತ್ಸೆ ನೀಡುತ್ತಿರುವ ವ್ಯಕ್ತಿಗಳು ಯಾರು? ಅದನ್ನು ಹೊರಜಗತ್ತಿಗೆ ತಿಳಿಸದೇ ದೇಶದ ಭದ್ರತೆಗೇ ಧಕ್ಕೆ ತರಬಹುದಾದ ವಿಷಯವೆಂಬಂತೆ ನಿಗೂಢ ಕಾರ್ಯಾಚರಣೆ ಶೈಲಿಯಲ್ಲಿ ನಿರ್ವಹಿಸಿಕೊಂಡು ಬರಲು ಇರುವ ಘನಕಾರಣ ಎಂತಾದ್ದು?

ಪ್ರೊ. ಶ್ಯಾಂಸುಂದರ್ ಬಹಿರಂಗಪಡಿಸಿದ ಪತ್ರದ ಸತ್ಯಾಂಶಗಳು

1968 ರಿಂದಲೂ ಪ್ರಶಾಂತಿ ನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರೊ. ಶ್ಯಾಂ ಸುಂದರ್ ಎಂಬುವವರು ಬಾಬಾರ ಆಪ್ತ ಸಹಾಯಕ ಸತ್ಯಜಿತ್ ಹಾಗೂ ಶೌರಿ ಎಂಬುವರ ಧೋರಣೆ, ಅನುಮಾನಾಸ್ಪದ ಕಾರ್ಯಶೈಲಿಯ ಕುರಿತ ಅಂಶಗಳನ್ನು ಪತ್ರವೊಂದರ ಮುಖಾಂತರ ಬಹಿರಂಗಪಡಿಸಿದ್ದಾರೆ. ಆ ಪತ್ರ ತೆಲುಗು ದಿನ ಪತ್ರಿಕೆ ಆಂಧ್ರ ಜ್ಯೋತಿಯಲ್ಲಿ ಪ್ರಕಟವಾಗಿದೆ.

ಈ ಶೌರಿ ಎಂಬಾತ ಬಾಬಾ ಎಲ್ಲರಿಗೂ ದೇವರಾಗಿರಬಹುದು ನನಗೂ ಸತ್ಯಜಿತ್‌ಗೆ ಮಾತ್ರ ಅಲ್ಲ ಎಂದು ಆಗಾಗ ಹೇಳುತ್ತಿದ್ದನಂತೆ. ಶೌರಿಯ ಸಲಹೆಯ ಮೇರೆಗೆ ಸತ್ಯಜಿತ್ ಹಲವು ವರ್ಷಗಳಿಂದ ಬಾಬಾರಿಗೆ ನಿದ್ರೆ ಮಾತ್ರೆ ನೀಡಿ ಮಲಗಿಸುತ್ತಿದ್ದ. ಇದು ಬಾಬಾರ ಒಪ್ಪಿಗೆಯಿಂದಲೇ ನಡೆಯುತ್ತಿತ್ತೋ ಇಲ್ಲವೋ ಎಂಬುದು ಕೂಡಾ ಗೊತ್ತಿಲ್ಲ.

ಬಾಬಾ ನಿದ್ರೆ ಮಾತ್ರೆ ಸೇವಿಸುತ್ತಿದ್ದರಿಂದಲೇ ಬೆಳಗಿನ ದರ್ಶನಕ್ಕೆ ಬರಲಾಗದೆ ತಡವಾಗಿ ದರ್ಶನ ನೀಡುತ್ತಿದ್ದರು. ಕಾಲಸರಿದಂತೆ ಬಾಬಾರ ಚಲನವಲನವೇ ಮಂದಗತಿಗಿಳಿಯಿತು. ತೇಲುಗಣ್ಣು ಬಿಡುವುದು, ಗಂಟಲು ಕಟ್ಟುವುದು, ಶರೀರ ನಿಸ್ತೇಜವಾಗುವ ಲಕ್ಷಣಗಳು ವ್ಯಕ್ತವಾಗುತ್ತಿದ್ದವು.

ಪೂರ್ಣಚಂದ್ರ ಪ್ಯಾಲೇಸ್‌ನಲ್ಲಾಗಲೀ, ಯಜುರ್ಮಂದಿರದಲ್ಲಾಗಲೀ ಡಾಕ್ಟರ್ ಅಯ್ಯರ್ ರಹಸ್ಯವಾಗಿ ಔಷಧಿಗಳನ್ನು ನೀಡುತ್ತಿದ್ದರು. ನಾನು ಅಕಸ್ಮಾತ್ ಆಗಿ ಬಾಬಾರ ಬಳಿಗೆ ಹೋದರೆ ಔಷಧಿಗಳನ್ನು ನನ್ನ ಕಣ್ಣಿಗೆ ಬೀಳದಂತೆ ಬಚ್ಚಿಡುತ್ತಿದ್ದರು. ಹಾಗೆ ಮುಚ್ಚಿಡುವ ಅಗತ್ಯ ಏನಿತ್ತು? ಅದರ ಹಿಂದಿನ ಉದ್ದೇಶ ಏನು? ಇನ್ನೂ ದಾರುಣವಾದ ಸಂಗತಿ ಏನೆಂದರೆ ಬಾಬಾರ ಆಪ್ತ ಸತ್ಯಜಿತ್ ಅಲ್ಲಿನ ಅಡುಗೆ ಸಿಬ್ಬಂದಿಯನ್ನು ಇನ್ನಿಲ್ಲದಂತೆ ಹಿಂಸಿಸುತ್ತಿದ್ದ. ಕುಶಲ್ ಎಂಬ ಕೆಲಸಗಾರನೊಬ್ಬ ಬೆಳಿಗ್ಗೆಯೇ ಮೇಲಕ್ಕೆ ಹೋಗಿ ಕೆಳಕ್ಕೆ ಬರುವಾಗ ಅಳುತ್ತಾ ಬರುತ್ತಿದ್ದ, ಅವನ ಅಪ್ಪ-ಅಮ್ಮಂದಿರ ಬಳಿ ಇದರ ಬಗ್ಗೆ ಹೇಳಿಕೊಂಡಿದ್ದಾನೆ. ಅವರು ಆಶ್ರಮದ ಆಡಳಿತ ವರ್ಗಕ್ಕೆ ದೂರು ನೀಡಿದರೂ ಪ್ರಯೋಜನವಾಗಲಿಲ್ಲ, ಕುಶಲ್ ಎಂಬಾತ ಕೆಲಸ ಬಿಟ್ಟುಹೋಗುವ ಮುನ್ನ ಹೇಳಿದ್ದೇನೆಂದರೆ ಸತ್ಯಜಿತ್ ತನ್ನ ಪ್ಯಾಂಟನ್ನು ಬಿಚ್ಚುತ್ತಿದ್ದನೆಂದೂ, ಪ್ರತಿಭಟಿಸಿದರೆ ಹೊಡೆಯುತ್ತಿದ್ದನೆಂಬ ಆಘಾತಕಾರಿ ಸತ್ಯವನ್ನು, ಗಿರೀಶ್ ಎಂಬ ಇನ್ನೊಬ್ಬ ಸಿಬ್ಬಂದಿಯ ಜೊತೆಗೂ ಸತ್ಯಜಿತ್ ಇದೇ ಸ್ವರೂಪದ ನಡವಳಿಕೆ ಪ್ರದರ್ಶಿಸಿದ್ದ.

ಬಾಬಾರವರು ಮುಖ ಪಾರ್ಶ್ವವಾಯು ಪೀಡಿತವಾಗಿದ್ದದ್ದು ಬ್ರಾಂಕೈಟಿಸ್‌ನಿಂದ ನರಳುತ್ತಿದ್ದದ್ದು ಹೃದಯದ ತೊಂದರೆ ತುಂಬಾ ದಿನಗಳಿಂದಲೇ ಇರುವ ಸಾಧ್ಯತೆ, ಬಾಬಾರ ಬಳಿಗೆ ಬೇರಾರನ್ನು ಸೇರಿಸದೇ ಸತ್ಯಜಿತ್ ತಾನು ಬಲ್ಲ ಆಪ್ತ ವೈದ್ಯರಿಂದಲೇ ಚಿಕಿತ್ಸೆ ಕೊಡಿಸುತ್ತಿದ್ದದ್ದು... ಹೀಗೆ ಒಟ್ಟು 18 ಅಂಶಗಳ ವಿವರಗಳ ಆ ಪತ್ರ ಬಾಬಾರ ಸುತ್ತಲಿನ ಆಪ್ತ ಸತ್ಯಜಿತ್‌ನ ನಿರ್ಲಕ್ಷ್ಯ ಮನೋಭಾವ, ಆತನ ವಿಕೃತಿಗಳಿಗೆ ಕನ್ನಡಿ ಹಿಡಿಯುತ್ತದೆ.

ಯಾರು ಈ ಸತ್ಯಜಿತ್?

ಬಾಬಾರ ಅನಾರೋಗ್ಯದಿಂದ ಅಸ್ವಸ್ಥರಾದ ದಿನದಿಂದ ಕೇಳಿಬರುತ್ತಿರುವ ಪ್ರಮುಖ ಹೆಸರು ಸತ್ಯಜಿತ್ ಎಂಬಾತನದು. ಪ್ರಸ್ತುತ ಬಾಬಾರನ್ನು ಅಘೋಷಿತವಾಗಿ ಬಂಧಿಯಾಗಿಟ್ಟಿರುವನೆಂದು ಹೇಳಲಾಗುತ್ತಿರುವ ಬಾಬಾರ ಆಪ್ತನೀತ.

ಸತ್ಯಜಿತ್ ಚಿಕ್ಕಂದಿನಲ್ಲೇ ಸತ್ಯಸಾಯಿ ಸ್ಕೂಲ್‌ನಲ್ಲಿ ವಿದ್ಯಾರ್ಥಿಯಾಗಿ ಸೇರ್ಪಡೆಯಾದವ. ಬಾಬಾ ತನ್ನ ಉಪಚಾರಗಳನ್ನು ನೋಡಿಕೊಳ್ಳಲಿಕ್ಕೆ ಚುರುಕಾದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಹಾಗೆ ಆಯ್ಕೆಯಾದವನೇ ಸತ್ಯಜಿತ್.

ಬಾಬಾರ ಪ್ರೀತಿಗೆ ಪಾತ್ರನಾಗಿ ಅತ್ಯಂತ ಆಪ್ತನಾಗಿ ಬದಲಾದ ಸತ್ಯಜಿತ್ ಮೊದಲು ಬಾಬಾರ ಕಾರು ವಾಹನ ಚಾಲಕನಾಗಿದ್ದ. ಕ್ರಮೇಣ ಅವರ ಅಂತರಂಗಿಕ ವ್ಯವಹಾರಗಳಲ್ಲೂ ಸ್ಥಾನ ಸಂಪಾದಿಸಿದ. 2005 ರಲ್ಲಿ ಬಾಬಾರ ಸೊಂಟದ ಮೂಳೆ ಪೆಟ್ಟಾದ ನಂತರ ಸ್ನಾನ ಮಾಡಿಸುವುದರಿಂದ ಬಾಬಾ ವಿಶ್ರಮಿಸುವವರೆಗೆ ಎಲ್ಲವನ್ನೂ ಈ ಸತ್ಯಜಿತ್ ನೋಡಿಕೊಳ್ಳುತ್ತಿದ್ದ.

ಬಾಬಾ ಕೂಡಾ ಈತನ ಮೇಲೆ ಪೂರ್ತಿ ಅವಲಂಬಿತರಾಗಿದ್ದರು. ಅವರಿಗೆ ಅನಾರೋಗ್ಯವಾದಾಗ ಆ ವಿಷಯವನ್ನು ಹೊರಗೆ ತಿಳಿಸದೇ ಬೆಂಗಳೂರಿನ ಕಾರ್ಡಿಯಾಲಜಿಸ್ಟ್ ಒಬ್ಬರಿಂದ ಚಿಕಿತ್ಸೆ ಕೊಡಿಸುತ್ತಿದ್ದ. ಟ್ರಸ್ಟ್‌ನ ಸದಸ್ಯರು ಈ ಬಗ್ಗೆ ಆಕ್ಷೇಪಿಸಿದರೂ, ಬಾಬಾ ಈತನನ್ನೇ ಸಮರ್ಥಿಸಿಕೊಳ್ಳುತ್ತಿದ್ದರಿಂದ ಟ್ರಸ್ಟ್ ಸದಸ್ಯರೂ ಸುಮ್ಮನಾಗಿದ್ದಾರೆ.

ಆಗಿನಿಂದಲೂ ಸತ್ಯಬಾಯಿ ನಿವಾಸಿಸುವ ಪ್ರತ್ಯೇಕ ಮಂದಿರವನ್ನು ತನ್ನ ಕಣ್ಣಳತೆಯಲ್ಲೇ ನಿಭಾಯಿಸುತ್ತಿದ್ದ. ಬಾಬಾರ ಸಲುಗೆಯಿಂದ ಇತರರ ಮೇಲೂ ಪ್ರಾಬಲ್ಯ ಸಾಧಿಸುವಂತಾದ.

ಇಡೀ ವಿದ್ಯಮಾನದಲ್ಲಿ ಸತ್ಯಜಿತ್ ಏಕೈಕ ಖಳನಂತೆ ಗೋಚರಿಸುತ್ತಿದ್ದರೂ ಈತನ ಹಿಂದೆ ಮುಖ ಮರೆಸಿಕೊಂಡಿರುವ ಬೃಹತ್ ಖಳರ ಪಡೆಯೇ ಇದೆ ಎಂದು ಹೇಳಲಾಗುತ್ತಿದೆ.

ಬಾಬಾರ ಆಸ್ತಿಯ ಸುತ್ತ ಚೋರರ ಪಡೆ

ಬಾಬಾ ಅಸ್ವಸ್ಥರಾದ ನಂತರ ಅವರ ಪರಿಸ್ಥಿತಿಯ ನೈಜ ಚಿತ್ರಣವಾಗಲೀ, ಭಕ್ತರ ಆವೇದನೆಯಾಗಲಿ ಮುಖ್ಯವಾಗಲೇ ಇಲ್ಲ, ಮಹತ್ವ ಪಡೆದುಕೊಂಡದ್ದು ಬಾಬಾ ಹೊಂದಿರುವ ಲಕ್ಷಾಂತರ ಕೋಟಿ ಮೌಲ್ಯದ ಆಸ್ತಿಯದು.

ಒಂದು ಅಂದಾಜಿನ ಪ್ರಕಾರ ಟ್ರಸ್ಟ್ ಹೊಂದಿರುವ ವಿವರಗಳ ಮಾಹಿತಿ ಹೀಗಿದೆ.

* ಪುಟ್ಟಪರ್ತಿಯಲ್ಲಿನ ಸ್ಕೂಲು, ಪ್ರಶಾಂತಿ ನಿಲಯ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಇತರೆ ಕಟ್ಟಡಗಳು ರೂ. 4000 ಕೋಟಿ
* ಪುಟ್ಟಪರ್ತಿ ವಿಮಾನ ನಿಲ್ದಾಣ ರೂ. 300 ಕೋಟಿ
* ಬೆಂಗಳೂರಿನಲ್ಲಿನ ಮಂದಿರ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ರೂ. 5000 ಕೋಟಿ
* ಮಹಾರಾಷ್ಟ್ರದ ಆಸ್ತಿಗಳು ರೂ. 10,000 ಕೋಟಿ
* ಕೊಡೈಕೆನಾಲ್‌ನಲ್ಲಿ ರೂ. 1,000 ಕೋಟಿ
* ದೆಹಲಿಯಲ್ಲಿ ರೂ. 1,000 ಕೋಟಿ

(ಬೇರೆ ದೇಶಗಳಲ್ಲಿ ಇರುವ ಧ್ಯಾನ ಮಂದಿರಗಳ ಮೌಲ್ಯವೇ ಹಲವು ಸಾವಿರ ಕೋಟಿಗಳ ಲೆಕ್ಕದಲ್ಲಿದೆ)

ಬಂಗಾರದ ಬೆಟ್ಟ

ಪ್ರಶಾಂತಿ ನಿಲಯ ಒಂದು ಬಂಗಾರದ ಬೆಟ್ಟ ಎಂದೇ ಎಲ್ಲರೂ ಹೇಳುತ್ತಾರೆ. ಬಾಬಾರಿಗೆ ನಗದು ರೂಪದಲ್ಲಿ ಬಂದ ಕಾಣಿಕೆಗಳಿಗಿಂತ ಬಂಗಾರದ ರೂಪದಲ್ಲಿ ಬಂದ ಕಾಣಿಕೆಗಳೇ ಹೆಚ್ಚು. ವಜ್ರ-ವೈಢೂರ್ಯಗಳಂತೂ ಲೆಕ್ಕವಿಲ್ಲದಷ್ಟು. ಲೆಕ್ಕಪತ್ರವಿಲ್ಲದ ಬಂಗಾರ ಎಂದೋ ಕರಗಿಹೋಗಿದೆ. ಇನ್ನು ಸುಮಾರು 10 ಟನ್ನುಗಳಷ್ಟು ಬಂಗಾರವನ್ನು ಭದ್ರಪಡಿಸಿಟ್ಟಿದ್ದಾರೆಂದು ತಿಳಿದುಬಂದಿದೆ. ಬಾಬಾ ಆಸ್ತಿಯ ಮೇಲೆ ಕಣ್ಣಿಟ್ಟಿರುವ ಸೂತ್ರಧಾರರ ಗಮನವೆಲ್ಲಾ ಈ ಬಂಗಾರದ ಮೇಲಿದೆ.

ಬಾಬಾ ಆಸ್ಪತ್ರೆ ಸೇರಿದ ನಂತರ ಟ್ರಸ್ಟ್‌ನ ಕೆಲಸದಸ್ಯರು ಅಲ್ಲಿನ ಹಣವನ್ನು ಅತ್ಯಂತ ರಹಸ್ಯವಾಗಿ, ಜೋಪಾನವಾಗಿ, ಬಿಗಿ-ಭದ್ರತೆಯೊಂದಿಗೆ ಸಾಗಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಪ್ರಶಾಂತಿ ನಿಲಯಕ್ಕೆ ಸಮೀಪದಲ್ಲೇ ಇರುವ ಐಟಿ ಕೋರ್ ಬಿಲ್ಡಿಂಗ್‌ನಲ್ಲೇ ಈ ವ್ಯವಹಾರಗಳು ನಡೆಯುತ್ತಿವೆ. ಇಲ್ಲಿನ ಚಟುವಟಿಕೆಗಳು ತೀವ್ರಗೊಂಡಿವೆ.

ಸುಮಾರು 165 ದೇಶಗಳಲ್ಲಿನ ಹಲವು ವ್ಯಕ್ತಿಗಳ ಖಾತೆಗಳಿಗೆ ಆನ್‌ಲೈನ್‌ನಲ್ಲೇ ಹಣ ಸಂದಾಯವಾಗುತ್ತಿದೆ. ಈ ಬಿಲ್ಡಿಂಗ್ ಶತ್ರುಗಳಿಂದ ಬೇಧಿಸಲಾಗದಂತದ್ದು. ಕಪ್ಪುಹಣವಾಗಲೀ, ಹವಾಲಾ ಹಣವಾಗಲೀ, ಯಾವ ದೇಶದ ಕರೆನ್ಸಿ ಆಗಲೀ ಇಲ್ಲಿಂದ ಕ್ಷಣಾರ್ಧದಲ್ಲಿ ಆನ್‌ಲೈನ್‌ನಲ್ಲಿ ಸರಬರಾಜುಗುತ್ತದೆ. ಮಾರ್ಚ್ 28 ರಂದು ಬಾಬಾ ಆಸ್ಪತ್ರೆ ಸೇರುತ್ತಿದ್ದಂತೆ ಐಟಿ ಕೋರ್ ಬಿಲ್ಡಿಂಗ್‌ಅನ್ನು ಲೂಟಿಯ ಸೂತ್ರಧಾರಿಗಳು ಪೂರ್ತಿಯಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡು ತಮ್ಮ ನೆಚ್ಚಿನ ಬಂಟರ ಮೂಲಕ ಅಕೌಂಟ್ ಸೆಟ್ಲ್ ಮಾಡಿಕೊಳ್ಳುತ್ತಿದ್ದಾರೆ.

ಈ ಲೂಟಿಕೋರರು ಈಗ ಲಪಟಾಯಿಸುತ್ತಿರುವುದು ಬಾಬಾರಿಗೆ ಭಕ್ತರು ನೀಡಿದ ಸಂಪತ್ತನ್ನು ಮಾತ್ರವಲ್ಲ, ಅದೆಷ್ಟೋ ಗಣ್ಯರು ಅಡಗಿಸಿಟ್ಟಿರುವ ಕಪ್ಪುಹಣವನ್ನೂ ಕೂಡಾ. ಇದು ದಿಗ್ಭ್ರಮೆಯ ಸಂಗತಿ ಅನಿಸಬಹುದು. ಪೊಲೀಸರು, ತೆರಿಗೆ ಆದಾಯ ಅಧಿಕಾರಿಗಳು, ವಿಜಿಲೆನ್ಸ್, ಜಾರಿ ನಿರ್ದೇಶಕನಾಲಯದ ಅಧಿಕಾರಿಗಳು ಪ್ರಶಾಂತಿ ನಿಲಯದತ್ತ ಕಣ್ಣೆತ್ತಿಯೂ ನೋಡುವ ಸಾಹಸ ಮಾಡಲಾರರು. ಹೀಗಾಗಿ ಟ್ರಸ್ಟ್‌ನ ಕೆಲಸದಸ್ಯರು ಪ್ರಶಾಂತಿ ನಿಲಯವನ್ನು ಹವಾಲಾ ಕೇಂದ್ರವನ್ನಾಗಿ ಪರಿವರ್ತಿಸಿದ್ದಾರೆಂಬ ಆರೋಪಗಳು ಕೇಳಿಬರುತ್ತಲೇ ಇವೆ.


ಭಾರೀ ಕುಳಗಳು, ಪ್ರಮುಖ ನಾಯಕರು ತಮ್ಮ ಕಪ್ಪುಹಣವನ್ನು ಅಡಗಿಸಿಡಲು ಪುಟ್ಟಪರ್ತಿಯನ್ನು ಅತ್ಯಂತ ಸುರಕ್ಷಿತ ತಾಣವನ್ನಾಗಿ ಆಯ್ಕೆ ಮಾಡಿಕೊಂಡು ಕೋಟಿಗಳ ಲೆಕ್ಕದಲ್ಲಿ ಹಣವನ್ನು ಜಮಾ ಮಾಡುವುದು, ಅಗತ್ಯವೆನಿಸಿದಾಗ ಕ್ಯಾಶ್ ಮಾಡಿಸಿಕೊಳ್ಳುವುದು ಜರುಗುತ್ತಲೇ ಇದೆ. ಇದೊಂದು ಹವಾಲಾ ಬಜಾರ್! ಪುಟ್ಟಪರ್ತಿಯ ವ್ಯವಹಾರಗಳನ್ನು ಬಹಳ ವರ್ಷಗಳಿಂದ ಹತ್ತಿರದಿಂದ ಪರಿಶೀಲಿಸಿದ ಒಬ್ಬ ಪೊಲೀಸ್ ಅಧಿಕಾರಿಯ ಮಾತಿನಲ್ಲಿ ಹೇಳುವುದಾದರೆ... 'ಇದೊಂದು ಮಿನಿಸ್ವಿಸ್ ಬ್ಯಾಂಕ್!' ಬೇರೆಬೇರೆ ರಾಜ್ಯದ ಕೇಂದ್ರದ ಮಾಜಿ ಮಂತ್ರಿಗಳು ತಮ್ಮ ಖಾತೆಗಳನ್ನು ಇಲ್ಲಿ ನಿರ್ವಹಿಸುತ್ತಿದ್ದಾರೆನ್ನಲಾಗಿದೆ.

ಟ್ರಸ್ಟ್‌ನ ಕೆಲ ಸದಸ್ಯರೇ ಇದಕ್ಕೆ ಮಧ್ಯವರ್ತಿಗಳಾಗಿರುವುದರಿಂದ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲ ಉನ್ನತ ಅಧಿಕಾರಿಗಳ ಜೊತೆ ಸೂಕ್ತ ಬಿಗಿ ಭದ್ರತೆಯೊಂದಿಗೆ ಲೆಕ್ಕಾಚಾರಗಳನ್ನು ಪರಿಸಮಾಪ್ತಿ ಮಾಡಿಕೊಳ್ಳುತ್ತಿದ್ದಾರೆ. ಈ ವ್ಯವಹಾರಗಳ ಕಾರಣಕ್ಕೆ ಬಾಬಾರ ನೈಜಸ್ಥಿತಿ ಹೊರಜಗತ್ತಿಗೆ ತಿಳಿಯಲು ಕಾಲವಿಳಂಬ ಮಾಡಲಾಗುತ್ತಿದೆ. ಸತ್ಯ ಹೊರಬೀಳಲಿಕ್ಕೆ ತುಂಬಾ ಸಮಯವೇನೂ ಬೇಕಾಗಿಲ್ಲ

● ಎಂ.ಎನ್.ಪಾ

ಸಿಇಸಿ ವರದಿಯ ಸುತ್ತ

ಕರ್ನಾಟಕದ ಅಕ್ರಮ ಗಣಿಗಾರಿಕೆಯು 'ಒಲೆ ಹತ್ತಿ' ಉರಿಯುತ್ತಿರುವ ಕಥೆಯಲ್ಲ, ಇದು 'ಧರೆ ಹತ್ತಿ' ಉರಿಯುತ್ತಿರುವ ಕಥೆ. ಯಾರು ಇಂತಹ ಅಕ್ರಮಗಳ ಮೇಲೆ, ಕಾನೂನಿನ ಉಲ್ಲಂಘನೆಯ ಮೇಲೆ, ಅನೀತಿಯುತ ಕಾರ್ಯಗಳ ಮೇಲೆ, ಪರಿಸರ ನಾಶದ ಮೇಲೆ ಅಂಕುಶ ಹಾಕಬೇಕಾಗಿತ್ತೋ ಅವರು ಅಂಕುಶವನ್ನು ಪ್ರಯೋಗಿಸುತ್ತಿಲ್ಲ.... ಗಣಿಗಾರಿಕೆಯೆಂದರೆ ಅದು ಕೇವಲ ಅದಿರು ತೆಗೆಯುವ ಕೆಲಸ ಮಾತ್ರವಲ್ಲ, ಅಲ್ಲಿ ಪರಿಸರದ ಪ್ರಶ್ನೆ ಅಡಗಿದೆ. ಅಲ್ಲಿ ದುಡಿಯುವ ವರ್ಗದ ಶೋಷಣೆಯ ಸಂಗತಿ ಇದೆ. ಅಲ್ಲಿ ಇಂಟರ್ ಜನರೇಶನ್ ಈಕ್ವಿಟಿಯ ವಿಷಯವಿದೆ. ಇಂದಿನ ತಲೆಮಾರಿನ ಹಿತಾಸಕ್ತಿಯ ಜೊತೆಯಲ್ಲಿ ಮುಂದಿನ ತಲೆಮಾರಿನ ಹಿತಾಸಕ್ತಿಗಳನ್ನು ಪರಿಗಣಿಸುವ ಅಗತ್ಯವಿದೆ. ಈ ಎಲ್ಲ ಜ್ವಲಂತ ಸಂಗತಿಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಳೆದಿರುವ ಸರ್ಕಾರವನ್ನು ಎಚ್ಚರಿಸಬೇಕಾಗಿದೆ. ಯಾರೂ ಕೂಡ ತಮ್ಮ ಮೇಲೆ ತಮ್ಮ ಅಂಕುಶವನ್ನು ಪ್ರಯೋಗಿಸಿಕೊಳ್ಳಲು ಸಿದ್ಧವಿರುವುದಿಲ್ಲ. ಆದರೆ ಈ ಅಂಕುಶವನ್ನು ಪ್ರಯೋಗಿಸುವಂತೆ ಮಾಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ.



ಸುಪ್ರೀಮ್ ಕೋರ್ಟಿನ ಆದೇಶದ ಮೇರೆಗೆ ಕರ್ನಾಟಕದಲ್ಲಿನ ಗಣಿಗಾರಿಕೆ ಬಗ್ಗೆ ತನಿಖೆ ನಡೆಸಿದ ಕೇಂದ್ರ ಉನ್ನತಾಧಿಕಾರ ಸಮಿತಿಯು ತನ್ನ ಎರಡನೆಯ ಮಧ್ಯಂತರ ವರದಿಯನ್ನು ಕೋರ್ಟಿಗೆ ಸಲ್ಲಿಸಿದೆ. ಗಣಿಗಾರಿಕೆ ಅಕ್ರಮಗಳ ಬಗ್ಗೆ ಕರ್ನಾಟಕ ಸರ್ಕಾರದ ಔದಾಸೀನ್ಯ, ಗಣಿ ಕಂಪನಿಗಳ ಅಕ್ರಮಗಳು, ಅಕ್ರಮಗಳ ವಿರಾಟ್ ಸ್ವರೂಪ, ಅದರಿಂದ ದೇಶಕ್ಕೆ ಉಂಟಾದ ನಷ್ಟ, ಶಾಸನಗಳ ಮತ್ತು ಕಾನೂನುಗಳ ಉಲ್ಲಂಘನೆ, ಪರಿಸರದ ಬಗ್ಗೆ ನಿಷ್ಕಾಳಜಿ, ಅರಣ್ಯ ಪ್ರದೇಶದ ಒತ್ತುವರಿ, ಮೀಸಲು ಅರಣ್ಯ ಪ್ರದೇಶವನ್ನು ಮೀಸಲೇತರ ಎಂದು ಘೋಷಿಸುವುದು ಮುಂತಾದ ಸಂಗತಿಗಳ ಬಗ್ಗೆ ವರದಿಯಲ್ಲಿ ಸಮಿತಿಯು ವಿವರಗಳನ್ನು ನೀಡಿದೆ. ಇಲ್ಲಿ ಸಿಇಸಿಯ ಎರಡನೆಯ ವರದಿಯ ಆಯ್ದ ಸಂಗತಿಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಆ ವರದಿಯಲ್ಲದೆ ಎಸ್‌ಪಿಎಸ್ (ಸಮಾಜ ಪರಿವರ್ತನ ಸಮುದಾಯ, ಧಾರವಾಡ) ಸಲ್ಲಿಸಿರುವ ಮೊಕದ್ದಮೆಯಲ್ಲಿ ದಾಖಲಾಗಿರುವ ಕೆಲವು ಸಂಗತಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

1) ಕರ್ನಾಟಕದಲ್ಲಿನ ಗಣಿಗಾರಿಕೆಯಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಕರ್ನಾಟಕ ಲೋಕಾಯುಕ್ತರು 12.12.2008ರಲ್ಲಿ ವರದಿ ನೀಡಿದ್ದಾರೆ. ಅದರಲ್ಲಿ ಗುರುತಿಸಲಾಗಿರುವ ಗಣಿಗಾರಿಕೆಗೆ ಸಂಬಂಧಿಸಿದ ಅಕ್ರಮಗಳನ್ನು ಸಿಇಸಿಯು ದೃಢಪಡಿಸಿದೆ. ಅದರ ಮೇಲೆ ಸರ್ಕಾರವು ಎರಡೂವರೆ ವರ್ಷಗಳಾದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದು ಸಮಿತಿಯು ತನ್ನ ಖೇದವನ್ನು ವ್ಯಕ್ತಪಡಿಸಿದೆ. ಮೂಲ ಗಣಿ ಗುತ್ತಿಗೆದಾರರು ಗಣಿಗಾರಿಕೆಯನ್ನು ಮತ್ತೊಂದು ಕಂಪನಿಗೆ ಉಪಗುತ್ತಿಗೆ ನೀಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಇದರ ಬಗ್ಗೆ ಕರ್ನಾಟಕ ಲೋಕಾಯುಕ್ತರು ವಿವರವಾದ ಮಾಹಿತಿ ಮತ್ತು ಶಿಫಾರಸ್ಸುಗಳನ್ನು ತಮ್ಮ 12.12.2008ರ ವರದಿಯಲ್ಲಿ ನೀಡಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆಯ ಮೂಲ ಈ ಉಪಗುತ್ತಿಗೆ (ಯಾವುದನ್ನು ರೇಸಿಂಗ್ ಕಾಂಟ್ರಾಕ್ಟ್ ಅಂತ ಕರೆಯುತ್ತಾರೆ ಅದು) ವ್ಯವಹಾರ. ಇದರಲ್ಲಿ ಗೂಂಡಾಗಿರಿ, ಮಾಫಿಯಾ ಪಾತ್ರ ಎಲ್ಲ ಇರುತ್ತದೆ. ಇದರಿಂದಾಗಿ ಗಣಿ ಅಕ್ರಮಗಳು 2009 ಮತ್ತು 2010ರಲ್ಲಿ ತೀವ್ರ ಗತಿಯಲ್ಲಿ ನಡೆಯುವುದು ಸಾಧ್ಯವಾಯಿತು. ಲೋಕಾಯುಕ್ತ ವರದಿಯನ್ನು ಆಧರಿಸಿ ಸರ್ಕಾರವು ಈ ಕಾನೂನನ್ನು ಉಲ್ಲಂಘಿಸಿ ನಡೆಯುತ್ತಿರುವ ರೇಸಿಂಗ್ ಕಾಂಟ್ರಾಕ್ಟ್ ಪದ್ಧತಿಯ ವಿರುದ್ಧ 2008-09ರಲ್ಲಿ ಕ್ರಮ ಕೈಗೊಂಡಿದ್ದರೆ ಮತ್ತು ಅದನ್ನು ಹತ್ತಿಕ್ಕಿದ್ದಿದ್ದರೆ ಸಾವಿರಾರು ಕೋಟಿ ನಷ್ಟವನ್ನು ತಡೆ ಹಿಡಿಯಬಹುದಿತ್ತು, ಸರ್ಕಾರವು ಇಂತಹ ಅಕ್ರಮಗಳ ವಿರುದ್ಧ ಎರಡೂವರೆ ವರ್ಷಗಳಾದರೂ ಯಾಕೆ ಕ್ರಮ ಜರುಗಿಸಿಲ್ಲ ಎಂಬ ಪ್ರಶ್ನೆಯನ್ನು ಸಿಇಸಿಯು ತನ್ನ ವರದಿಯಲ್ಲಿ ಮುಖ್ಯವಾಗಿ ಎತ್ತಿದೆ.

2) ನಮ್ಮ ಮುಖ್ಯಮಂತ್ರಿ ಅವರು ಶಾಸನಸಭೆಯಲ್ಲಿ ನೀಡಿರುವ ಹೇಳಿಕೆಯನ್ನು ಉಲ್ಲೇಖಿಸಿ ಸಮಿತಿಯು 2003-04ರಿಂದ 2009-10ರ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆದ ಕಬ್ಬಿಣ ಅದಿರಿನ ಅಕ್ರಮ ರಫ್ತು 304.94 ಲಕ್ಷ ಟನ್ನುಗಳೆಂದೂ, ಅದರಲ್ಲಿ ಶೇ 34ರಷ್ಟು(105.23 ಲಕ್ಷ ಟನ್ನುಗಳು) 2008-09 ಮತ್ತು 2009-2010ರಲ್ಲಿ ನಡೆದಿದೆ ಎಂದೂ ಕಂಡುಹಿಡಿದಿದೆ. ರಾಜ್ಯದ ಮತ್ತು ದೇಶದ ಬೊಕ್ಕಸಕ್ಕೆ ಇದರಿಂದ ಉಂಟಾಗಿರುವ ಒಟ್ಟು ಹಾನಿ ರೂ 15,245 ಕೋಟಿ ಎಂದು ಅದು ಅಂದಾಜು ಮಾಡಿದೆ. ಇದರಲ್ಲಿ 2009 ಮತ್ತು 2010ರಲ್ಲಿ ನಡೆದ ಅಕ್ರಮ ಗಣಿಗಾರಿಕೆಯಿಂದಾದ ನಷ್ಟವೇ ರೂ 5261.50 ಕೋಟಿ. ಕರ್ನಾಟಕ ಲೋಕಾಯುಕ್ತ ವರದಿಯನ್ನು ಆಧರಿಸಿ 2008ರಲ್ಲಿ ಈ ಬಗೆಯ ಕಾನೂನಿನ ಉಲ್ಲಂಘನೆ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದ್ದರೆ ನಮ್ಮ ಸಂಪತ್ತಿನ ಲೂಟಿಯನ್ನು ತಡೆಯಬಹುದಿತ್ತು. ನಮ್ಮ ಸರ್ಕಾರ ಯಾಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂಬ ಪ್ರಶ್ನೆಯು ನಮ್ಮ ಎದುರಿಗೆ ಬಂದು ನಿಲ್ಲುತ್ತದೆ. ಈ ಪ್ರಮಾಣದ ಸಂಪತ್ತಿನ ಲೂಟಿಗೆ ಯಾರು ಈಗ ಹೊಣೆಗಾರರಾಗುತ್ತಾರೆ?

3) ಎಲ್ಲಕ್ಕಿಂತ ಹೆಚ್ಚಾಗಿ ಸಿಇಸಿಯ ಕೆಳಕಂಡ ಮಾತುಗಳು ನಮ್ಮ ರಾಜ್ಯದಲ್ಲಿನ ಗಣಿಗಾರಿಕೆಯ ಅಕ್ರಮಗಳ ವಿರಾಟ್ ದರ್ಶನ ಮಾಡಿಸುತ್ತದೆ.

'ತನ್ನ ಒಂಬತ್ತು ವರ್ಷಗಳ ಅಸ್ತಿತ್ವದಲ್ಲಿ ಸಿಇಸಿಯು ಈ ಅವಧಿಯಲ್ಲಿ ರಾಷ್ಟ್ರದ ಹರಿಯಾಣ, ರಾಜಾಸ್ಥಾನ, ಉತ್ತರಪ್ರದೇಶ, ಮಧ್ಯಪ್ರದೇಶ, ಛತ್ತೀಸಗಡ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಅಕ್ರಮ ಗಣಿಗಾರಿಕೆ ಬಗ್ಗೆ ತನಿಖೆ ನಡೆಸಿದೆ ಮತ್ತು ಅಲ್ಲಿ ಗಣಿ ಅಕ್ರಮಗಳು ವ್ಯಾಪಕವಾಗಿ ನಡೆದಿರುವುದನ್ನು ಕಂಡುಹಿಡಿದಿದೆ. ಆದರೆ ಕರ್ನಾಟಕದಲ್ಲಿ ನಡೆದಿರುವ ಗಣಿ ಅಕ್ರಮಗಳ ವಿರಾಟ್ ಸ್ವರೂಪದ ಮುಂದೆ ಈ ಆರು ರಾಜ್ಯಗಳಲ್ಲಿ ನಡೆದಿರುವ ಒಟ್ಟು ಗಣಿ ಅಕ್ರಮಗಳು ಏನೇನೂ ಅಲ್ಲ'. ನಮ್ಮ ಸರ್ಕಾರಕ್ಕೆ ಇದಕ್ಕಿಂತ ಹೆಚ್ಚಿನ ಸರ್ಟಿಫಿಕೇಟು ಬೇಕೆ?

4) ಅದಿರು ಸಾಗಣೆ, ಲಾರಿಗಳ ಓಡಾಟ, ರಸ್ತೆಗಳ ಸಾಮರ್ಥ್ಯ, ಅರಣ್ಯ ನಾಶ, ಧೂಳು ಮುಂತಾದವುಗಳ ಬಗ್ಗೆ ಸರ್ಕಾರವು ದಿವ್ಯ ನಿರ್ಲಕ್ಷ್ಯ ತಳೆದಿದೆ. ಈ ಎಲ್ಲ ಸಂಗತಿಗಳ ಮೇಲೆ ಸರ್ಕಾರಕ್ಕೆ ಯಾವುದೇ ನಿಯಂತ್ರಣವಿಲ್ಲ. ಖಾಸಗಿ ಗಣಿ ಕಂಪನಿಗಳು ತಮಗೆ ತಾವೇ ಸರ್ವತಂತ್ರ ಸ್ವತಂತ್ರವಾಗಿದ್ದಾವೆ. ಇದರಿಂದ ಇಡೀ ಗಣಿಗಾರಿಕೆಯು ಅನಿಯಂತ್ರಿತವಾಗಿ, ಅಕ್ರಮವಾಗಿ, ಕಾನೂನುಗಳನ್ನು ಉಲ್ಲಂಘಿಸಿ ನಡೆಯುತ್ತಿದೆ.

ಸಮಿತಿಯು ಪ್ರಕಾರ 2009-10ರಲ್ಲಿ ಬಳ್ಳಾರಿ ಗಣಿಗಳಿಂದ ಹೊರತೆಗೆದ ಅದಿರು 500 ಲಕ್ಷ ಟನ್ನುಗಳು. ಐಬಿಎಮ್ ಸಂಸ್ಥೆಯು 2005ರಲ್ಲಿ ನಡೆಸಿದ ಅಧ್ಯಯನದ ಪ್ರಕಾರ ಬಳ್ಳಾರಿ ಗಣಿಗಳಲ್ಲಿನ ಅದಿರು ನಿಕ್ಷೇಪ 11,480 ಲಕ್ಷ ಟನ್ನುಗಳು. ಈಗ ನಡೆದಿರುವ ಗತಿಯಲ್ಲಿ ಅದಿರು ತೆಗೆಯುವ ಕೆಲಸ ಮುಂದುವರಿದರೆ ಇನ್ನು ಕೇವಲ 20 ವರ್ಷಗಳಲ್ಲಿ ನಿಕ್ಷೇಪ ಖಾಲಿಯಾಗಿ ಬಿಡುತ್ತದೆ. ಇದಲ್ಲದೆ ವಾರ್ಷಿಕವಾಗಿ ಶಾಸನಬದ್ಧವಾಗಿ ಅದಿರು ತೆಗೆಯುವ ಪ್ರಮಾಣ 500 ಲಕ್ಷ ಟನ್ನುಗಳು. ಇದಕ್ಕೆ ಅಕ್ರಮವಾಗಿ

ನಡೆಯುವ ಗಣಿಗಾರಿಕೆಯ ಲೆಕ್ಕ ಹಿಡಿದರೆ ಆಗ ನಮ್ಮ ಬಳ್ಳಾರಿ ಗಣಿ ನಿಕ್ಷೇಪವು ಕೇವಲ ಹತ್ತಾರು ವರ್ಷಗಳಲ್ಲಿ ಖಾಲಿಯಾಗಿ ಬಿಡುವ ಸಾಧ್ಯತೆಯಿದೆ. ಈ ಬಗ್ಗೆ ಸರ್ಕಾರಕ್ಕೆ ಯಾವುದೇ ಕಾಳಜಿಯಿಲ್ಲ. ಯಾವುದನ್ನು ನಾವು 'ಇಂಟರ್ ಜನರೇಶನ್ ಈಕ್ವಾಲಿಟಿ'ಯೆಂದು ಕರೆಯುತ್ತೇವೆಯೋ ಅದಕ್ಕೆ ನಮ್ಮ ರಾಜ್ಯದಲ್ಲಿ ರವಷ್ಟೂ ಗಮನ ನೀಡಲಾಗುತ್ತಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದರಿಂದ ನಮ್ಮ ಸರ್ಕಾರದ ನೇತಾರರು ಮುಂದಿನ ತಲೆಮಾರಿನ ಬಗ್ಗೆ ಯೋಚಿಸಿ ಮುತ್ಸದ್ದಿಗಳೆನ್ನಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಮುಂದಿನ ಚುನಾವಣೆ ಬಗ್ಗೆ ಯೋಚಿಸಿ ರಾಜಕಾರಣಿಗಳೆನಿಸಿಕೊಳ್ಳುತ್ತಿದ್ದಾರೆ ಎಂಬುದು ತಿಳಿದುಬರುತ್ತದೆ.

5) ಹಿಂದಿನ ಮದರಾಸು ಸರ್ಕಾರವು 1890ರಲ್ಲಿ 'ಬಳ್ಳಾರಿ ಮೀಸಲು ಅರಣ್ಯ'ವೆಂಬುದನ್ನು ಘೋಷಿಸಿತ್ತು. ಈ ಬಳ್ಳಾರಿ ಮೀಸಲು ಅರಣ್ಯ ಪ್ರದೇಶವು ಆಂಧ್ರಪ್ರದೇಶ ಮತ್ತು ಕರ್ನಾಟಕ ಎರಡೂ ರಾಜ್ಯಗಳ ಪ್ರದೇಶದಲ್ಲಿ ಹರಡಿಕೊಂಡಿದೆ. ಈ ಮೀಸಲು ಅರಣ್ಯ ಪ್ರದೇಶದ ಮಧ್ಯದಲ್ಲಿ ಎರಡೂ ರಾಜ್ಯಗಳ ಗಡಿ ಹಾದು ಹೋಗುತ್ತದೆ. ಈ ಗಡಿರೇಖೆಯನ್ನು ಗಣಿ ಗೂಂಡಾಗಳು ಒತ್ತುವರಿ ಮಾಡಿದ್ದಾರೆ ಮತ್ತು ಗಡಿಯೇ ಕಣ್ಮರೆಯಾಗುವಂತೆ ಮಾಡಿದ್ದಾರೆ. ಅಲ್ಲಿದ್ದ ಗುಡಿ-ಗುಂಡಾರಗಳನ್ನು ನಾಶ ಮಾಡಿದ್ದಾರೆ. ನಮ್ಮ ಗಡಿಯನ್ನು ಒತ್ತುವರಿ ಮಾಡಿದ್ದಾರೆ. ಈ ಅರಣ್ಯ ಪ್ರದೇಶದಲ್ಲಿ ವ್ಯಾಪಕ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಈ ಎರಡೂ ರಾಜ್ಯಗಳ ನಡುವಿನ ಗಡಿಯನ್ನು ಗುರುತಿಸಿ ಗಡಿ ಗುರುತುಗಳನ್ನು ನಿಲ್ಲಿಸುವುದಕ್ಕೆ, ಎರಡೂ ರಾಜ್ಯಗಳ ಅಧಿಕಾರಿಗಳ ಜಂಟಿ ಸಮಿತಿಯು ವರದಿಯೊಂದನ್ನು ಸಿದ್ಧಪಡಿಸಿದೆ. ಈ ವರದಿಯು ಒಂದು ರೀತಿಯಲ್ಲಿ ಸಮರ್ಪಕವಾಗಿದೆ. ಆದರೆ ಆದರ ಬಗ್ಗೆ ಅಂತಿಮ ನಿರ್ಮಾನವನ್ನು ತೆಗೆದುಕೊಳ್ಳುವಲ್ಲಿ ಎರಡೂ ರಾಜ್ಯಗಳು ಮೀನಮೇಷ ಎಣಿಸುತ್ತಿವೆ.



ನಮ್ಮ ಗಡಿಯನ್ನು ಭದ್ರ ಮಾಡಿಕೊಳ್ಳುವುದರ ಬಗ್ಗೆ ನಮ್ಮ ಸರ್ಕಾರಕ್ಕೆ ಖಬರಿಲ್ಲ, ಆದರೆ ದೇಶದ ಗಡಿ ಭದ್ರತೆ ಬಗ್ಗೆ ಈ ಸರ್ಕಾರ ಹೆಚ್ಚು ಮಾತನಾಡುತ್ತದೆ. ಗಡಿಯನ್ನು ನಿಗದಿಪಡಿಸದೆ ಇರುವುದರಿಂದ ಅಲ್ಲಿ ಅಕ್ರಮ ಗಣಿಗಾರಿಕೆ ನಡೆದಿದೆ. ಈ ರೀತಿಯಲ್ಲಿ ಗಡಿಯನ್ನು ನಿಗದಿಪಡಿಸದೆ ಇರುವುದಕ್ಕೆ ಬೇರೇನಾದರೂ ಕಾರಣಗಳಿವೆಯೆ? ಎರಡೂ ರಾಜ್ಯಗಳ ಗಡಿಯನ್ನು ಖಚಿತವಾಗಿ ಒಂದು ಒಪ್ಪಂದದ ಮೂಲಕ ನಿರ್ಧರಿಸಿ ಬಿಟ್ಟರೆ ಅಲ್ಲಿ ಅಕ್ರಮ ಗಣಿಗಾರಿಕೆಯನ್ನು ಸ್ವಲ್ಪ ಮಟ್ಟಿಗಾದರೂ ನಿಲ್ಲಿಸಬಹುದು. ಆದರೆ ನಮ್ಮ ಸರ್ಕಾರ ಅದರ ಬಗ್ಗೆ ಗಮನವನ್ನು ನೀಡುತ್ತಿಲ್ಲ, ಇದರಿಂದಾಗಿ ಅಲ್ಲಿ ಗಣಿ ಅಕ್ರಮಗಳು ಅವ್ಯಾಹತವಾಗಿ ನಡೆದಿವೆ. ಗಡಿಯನ್ನು ರಕ್ಷಿಸುವ ಬಗ್ಗೆ ಸರ್ಕಾರಕ್ಕೆ ಕಾಳಜಿಯಿಲ್ಲ.

'ಕನ್ನಡ, ಕನ್ನಡಿಗ, ಕರ್ನಾಟಕ'ದ ಬಗ್ಗೆ ಸದಾ ಕಿರುಚಾಡುವ ನಮ್ಮ ರಾಜರ್ಷಿಗಳೊಬ್ಬರು ಈ ಗಡಿಯ ಒತ್ತುವರಿ ಬಗ್ಗೆ ದಿವ್ಯಾತ್ರ ಮೌನ ವಹಿಸಿದ್ದಾರೆ. ನ್ಯಾಯಮೂರ್ತಿ ಸೋಮಶೇಖರ್ ಆಯೋಗದ ವರದಿಯು ಸತ್ಯವನ್ನು ಹೇಳುತ್ತಿದೆಯೆಂದು ಬೊಬ್ಬೆ ಹೊಡೆದುಕೊಳ್ಳುವ ಮತ್ತು ಸಾರ್ವಜನಿಕವಾಗಿ ಪ್ರತಿಪಾದಿಸುವ ಈ ರಾಜರ್ಷಿ ಅಕ್ರಮ ಗಣಿಗಾರಿಕೆ ಬಗ್ಗೆ ಸುಪ್ರೀಮ್ ಕೋರ್ಟು ನೇಮಿಸಿರುವ ಉನ್ನತಾಧಿಕಾರ ಸಮಿತಿ ನೀಡಿರುವ ವರದಿಯ ಬಗ್ಗೆ ಚಕಾರವೆತ್ತುತ್ತಿಲ್ಲ. ರಾಜ್ಯದ ರೂ 15,245 ಕೋಟಿ ಸಂಪತ್ತಿನ ಲೂಟಿಯ ಬಗ್ಗೆ, ನಮ್ಮ ಗಡಿ ಪ್ರದೇಶದ ಒತ್ತುವರಿಯ ಬಗ್ಗೆ, ಗಡಿಯನ್ನು ನಿಗದಿಪಡಿಸುವಲ್ಲಿನ ಸರ್ಕಾರದ ನಿರ್ಲಕ್ಷ್ಯದ ಬಗ್ಗೆ ಏನನ್ನೂ ಮಾತನಾಡುತ್ತಿಲ್ಲ. ಇದರಿಂದಾಗಿ ಅವರು 'ಸತ್ಯ'ದ ಆರಾಧಕರೂ ಅಲ್ಲ ಮತ್ತು 'ಸತ್ಯಸಂಧ'ರೂ ಅಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆದರೆ ಅವರು ತಮಗೆ ತಾವೇ 'ಸತ್ಯಸಂಧ'ರೆಂದು ಬಿರುದು ಕೊಟ್ಟುಕೊಳ್ಳುತ್ತಿದ್ದಾರೆ.

6) ಈ ವರದಿಯ ಪ್ರಕಾರ ಕರ್ನಾಟಕದಲ್ಲಿ ನಡೆದಿರುವ ಗಣಿಗಾರಿಕೆಯು ನೂರಕ್ಕೆ ನೂರರಷ್ಟು ಕಾನೂನನ್ನು ಉಲ್ಲಂಘಿಸಿಯೇ ನಡೆದಿದೆ. ಈ ಅಕ್ರಮಗಳಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಗಣಿ ಕಂಪನಿಗಳು ಒಟ್ಟಾಗಿ ಮತ್ತು ಕೂಟವಾಗಿ ಭಾಗವಹಿಸಿರುವ ಸಾಧ್ಯತೆಯಿದೆಯೆಂದು ಸಿಇಸಿ ತಿಳಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯು ಅರಣ್ಯ ಪ್ರದೇಶಕ್ಕೆ ಸೇರಿದ 9,527 ಹೆಕ್ಟೇರ್ ಪ್ರದೇಶದಲ್ಲಿ ನಡೆದಿರುವುದನ್ನು ವರದಿಯು ದೃಢಪಡಿಸಿದೆ. ಇಲ್ಲಿ ಗಣಿಗಾರಿಕೆ ನಡೆಸಿರುವ 148 ಕಂಪನಿಗಳಲ್ಲಿ 98 ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿದ್ದರೆ (9527 ಹೆಕ್ಟೇರು) ಕೇವಲ 50 ಕಂಪನಿಗಳು ಅರಣ್ಯೇತರ ಪ್ರದೇಶದಲ್ಲಿ (1,341 ಹೆಕ್ಟೇರು) ಗಣಿಗಾರಿಕೆ ನಡೆಸಿವೆ. ಇವೆಲ್ಲವೂ ಅಕ್ರಮ ಗಣಿಗಾರಿಕೆಯಲ್ಲಿ ನಿರತವಾಗಿರುವುದನ್ನು ಸಿಇಸಿ ವರದಿ, ಐಬಿಎಮ್ ಸಮೀಕ್ಷೆ, ಕರ್ನಾಟಕ ಲೋಕಾಯುಕ್ತ ವರದಿ ದೃಢಪಡಿಸಿವೆ. ಆದರೂ ಸರ್ಕಾರವು ಗಣಿ ಅಕ್ರಮಗಳು ನಡೆದಿಲ್ಲವೆಂದು ಹೇಳಿಕೊಂಡು ಬರುತ್ತಿದೆ ಮತ್ತು ಅದರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಅದರ ವಿರುದ್ಧ ಕ್ರಮ ಜರುಗಿಸುತ್ತಿಲ್ಲವೆಂದರೆ ಏನು ಅರ್ಥ?

ಸರ್ಕಾರದ ಪ್ರಕಾರ ಅಲ್ಲಿ ಅಕ್ರಮಗಳು ನಡೆದಿಲ್ಲ, ಆದರೆ ಸಿಇಸಿ ವರದಿಯು ನಡೆದಿರುವ ಗಣಿಗಾರಿಕೆಯೆಲ್ಲ ಅಕ್ರಮವೇ ಎನ್ನುತ್ತಿದೆಯಲ್ಲ! ಹೊಸದಾಗಿ ಗಣಿಗಾರಿಕೆಗೆ ಲೈಸೆನ್ಸ್ ನೀಡಿಲ್ಲವೆಂದು ಸರ್ಕಾರವು ಕೂಗಿ ಕೂಗಿ ಘೋಷಿಸುತ್ತಿದೆ. ಆದರೆ ಅಕ್ರಮಗಳ ಬಗ್ಗೆ ಚಕಾರವೆತ್ತುತ್ತಿಲ್ಲ. ಅಕ್ರಮ ಗಣಿಗಾರಿಕೆ ಬಗ್ಗೆ ಇನ್ನೆಷ್ಟು ವರದಿಗಳು, ಸಮೀಕ್ಷೆಗಳು, ಅಧ್ಯಯನಗಳು, ತನಿಖೆಗಳು ಬೇಕು? ಸಿಇಸಿಯು ತನ್ನ ವರದಿಯಲ್ಲಿ 12.12.2008ರಲ್ಲಿ ಕರ್ನಾಟಕ ಲೋಕಾಯುಕ್ತರು ನೀಡಿದ ವರದಿಯಲ್ಲಿರುವ ಎಲ್ಲ ಸಂಗತಿಗಳನ್ನು ಎತ್ತಿ ಹಿಡಿದಿದೆ. ಆದರೆ ಅದರ ಮೇಲೆ ಎರಡೂವರೆ ವರ್ಷಗಳಾದರೂ ಯಾಕೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ? ಈ ಬಗ್ಗೆ ಅದು ಅನುಮಾನ ವ್ಯಕ್ತಪಡಿಸಿದೆ.

7) ಸರ್ಕಾರವು 15.03.2003ರಲ್ಲಿ ಆದೇಶವೊಂದನ್ನು ಹೊರಡಿಸಿ ರಾಜ್ಯದ 11,620 ಚದರ ಕಿಲೋಮೀಟರ್ ಮೀಸಲು ಅರಣ್ಯ ಪ್ರದೇಶವನ್ನು ಮೀಸಲೇತರ ಅರಣ್ಯವನ್ನಾಗಿ ಘೋಷಿಸಿದೆ. ಇದರಲ್ಲಿ ಕಬ್ಬಿಣ ಅದಿರಿನ ಗಣಿ ನಿಕ್ಷೇಪವಿರುವ ಅರಣ್ಯ ಪ್ರದೇಶ 6,832 ಹೆಕ್ಟೇರುಗಳು. ಅದರಲ್ಲಿ 5,357 ಹೆಕ್ಟೇರು ಬಳ್ಳಾರಿ ಜಿಲ್ಲೆಗೆ ಸೇರಿದೆ. ಈ ಪ್ರದೇಶವು ಬಳ್ಳಾರಿ ಜಿಲ್ಲೆಯ ಮೀಸಲು ಅರಣ್ಯ ಪ್ರದೇಶವು 13, 14, 15, ಮತ್ತು 17 ಬ್ಲಾಕುಗಳಲ್ಲಿ ನೆಲೆಗೊಂಡಿದೆ. ಗಣಿಗಾರಿಕೆಗೆ ಸಂಬಂಧಿಸಿದ ಅಕ್ರಮವೆಲ್ಲ ಅಲ್ಲಿಂದ ಶುರುವಾಗಿದೆ. ಈ ಅರಣ್ಯ ಪ್ರದೇಶವನ್ನು ಮೀಸಲೇತರ ಎಂದು ಘೋಷಿಸಿರುವುದೇ ಕಾನೂನಿನ ಪ್ರಕಾರ ತಪ್ಪು, ಇದನ್ನು ಮೊದಲು ಸರಿಪಡಿಸಬೇಕು. ಈ ಒಂದು ತಪ್ಪಿನಿಂದಾಗಿ ನಮ್ಮ ರಾಜ್ಯದಲ್ಲಿ ಗಣಿಗಾರಿಕೆಯು ದೊಡ್ಡ ಪ್ರಮಾಣದಲ್ಲಿ ಅರಣ್ಯ ಪ್ರದೇಶದಲ್ಲಿ ನಡೆದಿದೆ. ಅಲ್ಲಿ ವಿಪರೀತ ಒತ್ತುವರಿ ನಡೆದಿದೆ. ಇದನ್ನು ಸರಿಪಡಿಸುವ ಬಗ್ಗೆ ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

8) ಹಿಂದಿನ ಸಂಡೂರು ಮಹಾರಾಜರು ತಮ್ಮ ತಾಲ್ಲೂಕಿನ ರಾಮಗಡ ಪ್ರದೇಶದಲ್ಲಿ ತಮ್ಮ ಮಾಲೀಕತ್ವದಲ್ಲಿದ್ದ ಸುಮಾರು 2595.40 ಎಕರೆ ಮೀಸಲು ಅರಣ್ಯ ಪ್ರದೇಶವನ್ನು 1980ರಲ್ಲಿ ಸರ್ಕಾರಕ್ಕೆ ಬಿಟ್ಟು ಕೊಟ್ಟಿದ್ದಾರೆ. ಹಾಗೆ ಬಿಟ್ಟು ಕೊಟ್ಟಾಗ ಅದರಲ್ಲಿ ಯಾವುದೇ ಪ್ರತ್ಯೇಕ ಭಾಗಗಳಿರಲಿಲ್ಲ, ಆದರೆ ಬಳ್ಳಾರಿ ಜಿಲ್ಲೆಯ ಫಾರೆಸ್ಟ್ ಸೆಟ್ಲ್‌ಮೆಂಟ್ ಅಧಿಕಾರಿ 24.05.2010ರಲ್ಲಿ ಸಂಡೂರು ತಾಲ್ಲೂಕಿನ ರಾಮಗಡ ಹಳ್ಳಿಯ 2395.40 ಎಕರೆ ಮೀಸಲು ಅರಣ್ಯ ಪ್ರದೇಶದಲ್ಲಿ 265 ಎಕರೆ ಪ್ರದೇಶವನ್ನು ಪ್ರತ್ಯೇಕಗೊಳಿಸಿ ಅದಕ್ಕೆ ಮೀಸಲು ಪ್ರದೇಶದಿಂದ ವಿನಾಯಿತಿ ನೀಡಿದ್ದಾರೆ. ಆದರೆ ಈ 265 ಎಕರೆ ಪ್ರದೇಶದಲ್ಲಿ ಹಚ್ಚ ಹಸಿರು ಅರಣ್ಯವಿದೆ. ಇದನ್ನು ಲೋಕಾಯುಕ್ತ ಅಧಿಕಾರಿಗಳು ತನಿಖೆ ಮಾಡುವಾಗ ಗುರುತಿಸಿದ್ದಾರೆ. ಸಂಡೂರಿನ ಹಿಂದಿನ ಮಹಾರಾಜರು 1980ರಲ್ಲಿ ಸರ್ಕಾರಕ್ಕೆ ರಾಮಗಡ ಪ್ರದೇಶದ ಅರಣ್ಯ ಪ್ರದೇಶವನ್ನು ಬಿಟ್ಟು ಕೊಟ್ಟಾಗ ಅಲ್ಲಿ ಯಾವುದೇ ಖಾಸಗಿ ಮಾಲಿಕರ ಸ್ವತ್ತು ಇರಲಿಲ್ಲ. ಆದರೆ 2010ರಲ್ಲಿ ಅದರಲ್ಲಿನ 265 ಎಕರೆಗೆ ಖಾಸಗಿ ಮಾಲಿಕತ್ವ ನೀಡಲಾಗಿದೆ. ಅಲ್ಲಿ ಅಕ್ರಮ ಗಣಿಗಾರಿಕೆ ದೊಡ್ಡ ಪ್ರಮಾಣದಲ್ಲಿ ನಡೆದಿದೆ.

9) ಒಟ್ಟಾರೆ ಗಣಿಗಾರಿಕೆ ಅನ್ನುವುದು ಅಕ್ರಮಗಳ, ಅನೀತಿಯ, ಕಾನೂನು ಉಲ್ಲಂಘನೆಯ, ಅಪರಾಧಿ ಕೂಟದ ಒಂದು ದಂಧೆಯಾಗಿದೆ. ಸಿಇಸಿ ವರದಿಯ ಪ್ರಕಾರ ಈ ಅಕ್ರಮಗಳಲ್ಲಿ, ಅನೀತಿಯುತ ಕಾರ್ಯದಲ್ಲಿ, ಕಾನೂನಿನ ಉಲ್ಲಂಘನೆಯಲ್ಲಿ, ಪರಿಸರ ನಾಶದಲ್ಲಿ ಅಧಿಕಾರಿಗಳು ಪಾಲುಗೊಂಡಿದ್ದಾರೆ ಮತ್ತು ರಾಜಕಾರಣಿಗಳು ಶಾಮೀಲಾಗಿದ್ದಾರೆ ಹಾಗೂ ಇದರ ಲಾಭ ಪಡೆದುಕೊಂಡು ಗಣಿ ಕಂಪನಿಗಳು ಲೂಟಿಯನ್ನು ನಡೆಸಿವೆ. ಇದೆಲ್ಲ 2008ರಲ್ಲಿನ ಕರ್ನಾಟಕ ಲೋಕಾಯುಕ್ತ ವರದಿಯಲ್ಲಿ ಬಹಿರಂಗಗೊಂಡಿದೆ. ಈಗ ಸುಪ್ರೀಮ್ ಕೋರ್ಟು ನೇಮಿಸಿದ್ದ ಸಿಇಸಿಯು ತನ್ನ 2011ರ ಎರಡನೆಯ ವರದಿಯಲ್ಲಿ ಇದನ್ನೆಲ್ಲ ದೃಢಪಡಿಸಿದೆ.

ಬಸವಣ್ಣ ಹೇಳಿರುವಂತೆ
ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹತ್ತು ಉರಿದರೆ ನಿಲಲುಬಾರದು
ಏರಿ ನೀರುಂಬಡೆ, ಬೇಲಿ ಕೈಯ ಮೇವೊಡೆ
ನಾರಿ ತನ್ನ ಮನೆಯಲ್ಲಿ ಕಳುವೊಡೆ
ತಾಯ ಎದೆ ಹಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ
ಕೂಡಲಸಂಗಮದೇವಾ.



ಕರ್ನಾಟಕದ ಅಕ್ರಮ ಗಣಿಗಾರಿಕೆಯು 'ಒಲೆ ಹತ್ತಿ' ಉರಿಯುತ್ತಿರುವ ಕಥೆಯಲ್ಲ, ಇದು 'ಧರೆ ಹತ್ತಿ' ಉರಿಯುತ್ತಿರುವ ಕಥೆ. ಯಾರು ಇಂತಹ ಅಕ್ರಮಗಳ ಮೇಲೆ, ಕಾನೂನಿನ ಉಲ್ಲಂಘನೆಯ ಮೇಲೆ, ಅನೀತಿಯುತ ಕಾರ್ಯಗಳ ಮೇಲೆ, ಪರಿಸರ ನಾಶದ ಮೇಲೆ ಅಂಕುಶ ಹಾಕಬೇಕಾಗಿತ್ತೋ ಅವರು ಅಂಕುಶವನ್ನು ಪ್ರಯೋಗಿಸುತ್ತಿಲ್ಲ, ನಾವು ಯಾರಿಗೆ ದೂರು ಕೊಡುವುದು ಎಂದು ತಹತಹಿಸುತ್ತಿರುವಾಗ ಸುಪ್ರೀಮ್ ಕೋರ್ಟಿನ ಸಿಇಸಿಯು ಮುಂದೆ ಬಂದಿದೆ ಮತ್ತು ಅಕ್ರಮಗಳ ರಾಶಿಯನ್ನು ಮತ್ತು ಅದಕ್ಕೆ ಸರ್ಕಾರದ ಮೌನ ಸಮ್ಮತಿಯನ್ನು ಬಹಿರಂಗ ಪಡಿಸಿದೆ.

10) ಈ ಹಿನ್ನೆಲೆಯಲ್ಲಿ ಸಿಇಸಿಯು ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಬಳ್ಳಾರಿ ಜಿಲ್ಲೆಯಲ್ಲಿ ತಕ್ಷಣ ಜಾರಿಗೆ ಬರುವಂತೆ ಗಣಿಗಾರಿಕೆಯನ್ನು ನಿಷೇಧಿಸಬೇಕು. ಅದರಲ್ಲಿ ಬಳ್ಳಾರಿ ಮೀಸಲು ಅರಣ್ಯ ಪ್ರದೇಶದ ಮಧ್ಯ ಸಾಗಿರುವ ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ನಡುವಣ ಗಡಿಯನ್ನು ಎರಡೂ ರಾಜ್ಯಗಳ ಅಧಿಕಾರಿಗಳ ಜಂಟಿ ಸಮಿತಿಯು ಸಿದ್ಧಪಡಿಸಿರುವ ವರದಿಯನ್ನು ಒಪ್ಪಿಕೊಂಡು ನಮ್ಮ ಗಡಿಯನ್ನು ಭದ್ರ ಪಡಿಸಿಕೊಳ್ಳಬೇಕು. ಅಲ್ಲಿಯವರೆಗೆ ಎರಡೂ ರಾಜ್ಯಗಳ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ಮೀಸಲು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಯನ್ನು ತಕ್ಷಣ ನಿಲ್ಲಿಸಬೇಕು. ಈ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಶಾಸನವನ್ನು ಉಲ್ಲಂಘಿಸಿದವರಿಗೆ ಶಿಕ್ಷೆಯಾಗಬೇಕು. ನಮ್ಮ ಸಂಪತ್ತನ್ನು ಲೂಟಿ ಮಾಡಿದವರಿಂದ ಅದನ್ನು ದಂಡವಾಗಿ ಪಡೆದುಕೊಳ್ಳಬೇಕು. ಈ ಹಿಂದೆ ಕರ್ನಾಟಕ ಲೋಕಾಯುಕ್ತ ಸಲಹೆ ಮಾಡಿದಂತೆ ಖಾಸಗಿ ಗಣಿಗಾರಿಕೆಯನ್ನು ನಿಷೇಧಿಸಬೇಕು. ನಮ್ಮ ಆಡಳಿತ ಎಷ್ಟೇ ಎಚ್ಚರದಿಂದಿದ್ದರೂ ಖಾಸಗಿ ಗಣಿ ಮಾಲೀಕರ ಅಕ್ರಮ ಗಣಿಗಾರಿಕೆಯನ್ನು ತಡೆಯುವುದು ಅಸಾಧ್ಯ. ಗಣಿಗಾರಿಕೆಯೆಂದರೆ ಅದು ಕೇವಲ ಅದಿರು ತೆಗೆಯುವ ಕೆಲಸ ಮಾತ್ರವಲ್ಲ, ಅಲ್ಲಿ ಪರಿಸರದ ಪ್ರಶ್ನೆ ಅಡಗಿದೆ. ಅಲ್ಲಿ ದುಡಿಯುವ ವರ್ಗದ ಶೋಷಣೆಯ ಸಂಗತಿ ಇದೆ. ಅಲ್ಲಿ ಇಂಟರ್ ಜನರೇಶನ್ ಈಕ್ವಿಟಿಯ ವಿಷಯವಿದೆ. ಇಂದಿನ ತಲೆಮಾರಿನ ಹಿತಾಸಕ್ತಿಯ ಜೊತೆಯಲ್ಲಿ ಮುಂದಿನ ತಲೆಮಾರಿನ ಹಿತಾಸಕ್ತಿಗಳನ್ನು ಪರಿಗಣಿಸುವ ಅಗತ್ಯವಿದೆ. ಈ ಎಲ್ಲ ಜ್ವಲಂತ ಸಂಗತಿಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಳೆದಿರುವ ಸರ್ಕಾರವನ್ನು ಎಚ್ಚರಿಸಬೇಕಾಗಿದೆ. ಯಾರೂ ಕೂಡ ತಮ್ಮ ಮೇಲೆ ತಮ್ಮ ಅಂಕುಶವನ್ನು ಪ್ರಯೋಗಿಸಿಕೊಳ್ಳಲು ಸಿದ್ಧವಿರುವುದಿಲ್ಲ, ಆದರೆ ಈ ಅಂಕುಶವನ್ನು ಪ್ರಯೋಗಿಸುವಂತೆ ಮಾಡಬೇಕಾದ ಜವಾಬುದಾರಿ ನಮ್ಮ ಮೇಲಿದೆ.



• ಟಿ.ಆರ್.ಚಂದ್ರಶೇಖರ


ಗಣಿ ಅಕ್ರಮವನ್ನು ಬಯಲಿಗೆಳೆದ ಸಮಾಜ ಪರಿವರ್ತನ ಸಮುದಾಯ (ಎಸ್‌ಪಿಎಸ್)

ನಮ್ಮ ರಾಜ್ಯದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆದಿರುವುದು ಗುಟ್ಟಾದ ಸಂಗತಿಯೇನಲ್ಲ, ಆದರೆ ಇದನ್ನು ಪರಿಣಾಮಕಾರಿಯಾಗಿ ಮತ್ತು ನಿರಂತರವಾಗಿ ವಿರೋಧಿಸಲು ಯಾವ ರಾಜಕೀಯ ಪಕ್ಷಗಳೂ ಸಿದ್ಧವಿಲ್ಲ. ಎಲ್ಲ ರಾಜಕೀಯ ಪಕ್ಷಗಳ ಮನೆಗಳ ದೋಸೆಯೂ ಗಣಿಗಾರಿಕೆ ದೃಷ್ಟಿಯಿಂದ ತೂತೆ!

ಈ ಬಗ್ಗೆ ನಮ್ಮ ರಾಜ್ಯದ ವಿರೋಧಿ ರಾಜಕೀಯ ಪಕ್ಷಗಳು ಕೇವಲ ಹೆಚ್ಚು ಗದ್ದಲ ಮಾಡಿದ್ದಾವೆ. ಅದಕ್ಕಿಂತ ಹೆಚ್ಚಿಗೆ ಏನನ್ನೂ ಮಾಡಲು ಅವುಗಳಿಗೆ ಸಾಧ್ಯವಾಗಿಲ್ಲ. ಆದರೆ ಪರಿಸರದ ಬಗ್ಗೆ, ಪ್ರಜಾಪ್ರಭುತ್ವದ ಬಗ್ಗೆ, ನಾಗರಿಕ ಹಕ್ಕುಗಳ ಬಗ್ಗೆ ಅತ್ಯಂತ ಕಾಳಜಿಯುಳ್ಳ ಧಾರವಾಡದಲ್ಲಿ ಕ್ರಿಯಾಶೀಲವಾಗಿರುವ ಪುಟ್ಟ ಎನ್‌ಜಿಒ 'ಸಮಾಜ ಪರಿವರ್ತನ ಸಮುದಾಯ' (ಎಸ್‌ಪಿಎಸ್) ಎಂಬ ಸರ್ಕಾರೇತರ ಸಮಾಜ ಸೇವಾ ಸಂಸ್ಥೆಯು ಅಕ್ರಮ ಗಣಿಗಾರಿಕೆ ಬಗ್ಗೆ ಸುಪ್ರೀಮ್ ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೂಡಿದೆ.

ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ನಡೆದಿರುವ ಅಕ್ರಮಗಣಿಗಾರಿಕೆ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿ, ಗಣಿ-ಗಡಿ ಬಗ್ಗೆ ನಕ್ಷೆಗಳನ್ನು ಸಿದ್ಧಪಡಿಸಿ, ಅಧ್ಯಯನ ವರದಿಗಳನ್ನು ಜೋಡಿಸಿಕೊಂಡು ಸುಪ್ರೀಮ್ ಕೋರ್ಟಿನಲ್ಲಿ ಮೊಕದ್ದಮೆಯನ್ನು ಸಮಾಜ ಪರಿವರ್ತನ ಸಮುದಾಯವು ಹೂಡಿದೆ. ಅದರ ಪರಿಣಾಮ ಸಿಇಸಿ ವರದಿ.

ಇಂದು ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆ ಬಗ್ಗೆ ಕ್ರಮತೆಗೆದುಕೊಳ್ಳುವ ಬಗ್ಗೆ ಸರ್ಕಾರಗಳ ಮೇಲೆ ಒತ್ತಡ ಉಂಟಾಗಿದ್ದರೆ ಅದಕ್ಕೆ ಎಸ್‌ಪಿಎಸ್ ಹೂಡಿದ ಮೊಕದ್ದಮೆ ಕಾರಣವಾಗಿದೆ. ಅದರಿಂದಾಗಿ ಅಕ್ರಮಗಳಲ್ಲಿ ತೊಡಗಿರುವ ಜನರ ಸಂದೂಕುಗಳ ಒಳಗಿಂದ ಅಸ್ಥಿಪಂಜರಗಳು ಹೊರಬೀಳತೊಡಗಿವೆ. ಸಮಾಜ ಪರಿವರ್ತನ ಸಮುದಾಯವು ತೆಗೆದುಕೊಂಡ ಕ್ರಮದಿಂದಾಗಿ ಇಂದು ಸುಪ್ರೀಮ್ ಕೋರ್ಟು ಕರ್ನಾಟಕ ಸರ್ಕಾರದ ಮೇಲೆ ಮತ್ತು ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಲೂಟಿಕೋರರ ಮೇಲೆ ಚಾಟಿ ಬೀಸುತ್ತಿದೆ. ಈ ವಿಷಯದಲ್ಲಿ ನಮ್ಮ ರಾಜಕೀಯ ಪಕ್ಷಗಳ ವೈಫಲ್ಯವು ಅಕ್ಷಮ್ಯ. ಆಳುವ ಪಕ್ಷದ ವೈಫಲ್ಯವು ಒಂದು ಬಗೆಯದ್ದಾದರೆ ವಿರೋಧ ಪಕ್ಷಗಳ ವೈಫಲ್ಯ ಮತ್ತೊಂದು ಬಗೆಯದ್ದಾಗಿದೆ. ಒಟ್ಟಾರೆ ಅಕ್ರಮ ಗಣಿಗಾರಿಕೆ ಅಡ್ಡಿ-ಆತಂಕ ಗಳಿಲ್ಲದೆ ನಡೆದಿದೆ.



ರಾಜಕೀಯ ಪಕ್ಷಗಳು ನಿರ್ವಹಿಸಬೇಕಾಗಿದ್ದ ಹೊಣೆಗಾರಿಕೆಯನ್ನು ಮತ್ತು ಸರ್ಕಾರವೊಂದು ನಿಭಾಯಿಸಬೇಕಾಗಿದ್ದ ಜವಾಬ್ದಾರಿಯನ್ನು ಒಂದು ಸಮಾಜ ಸೇವಾ ಸಂಸ್ಥೆಯು ನಿರ್ವಹಿಸುತ್ತಿದೆ. ಅದನ್ನು ಕಟ್ಟಿ ಬೆಳೆಸಿರುವ ಎಸ್. ಆರ್. ಹಿರೇಮಠ್ ಅವರು ಗಣಿಗಾರಿಕೆ ವಿರುದ್ಧ ಪಿಐಎಲ್ (ಪಬ್ಲಿಕ್ ಇನ್‌ಟರೆಸ್ಟ್ ಲಿಟಿಗೇಶನ್) ಸಿದ್ಧಪಡಿಸಲು ಹಗಲು ರಾತ್ರಿ ದುಡಿದಿದ್ದಾರೆ. ಅನೇಕ ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಸರ್ಕಾರಿ ಕಚೇರಿಗಳನ್ನು ಎಡತಾಕಿದ್ದಾರೆ. ಗಣಿ ನಕ್ಷೆಗಳನ್ನು ಸಹಕಾರ್ಯಕರ್ತ ಶ್ರೀ ನಾಗಮೂಳೆ ಅವರ ಜೊತೆಯಲ್ಲಿ ರೂಪಿಸಿದ್ದಾರೆ. ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸುವ ದಿಶೆಯಲ್ಲಿ ಒಂದಷ್ಟು ಕೆಲಸವಾಗಿದ್ದರೆ ಅದು ಎಸ್‌ಪಿಎಸ್‌ನಿಂದ ಮತ್ತು ಅದರ ಸಂಸ್ಥಾಪಕ ಎಸ್. ಆರ್ ಹಿರೇಮಠ ಅವರ ಪರಿಶ್ರಮದಿಂದ ಅನ್ನುವುದನ್ನು ನಾವು ಮರೆಯಬಾರದು.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು, ಮಾಧ್ಯಮ, ಬುದ್ಧಿಜೀವಿಗಳು, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕ ವರ್ಗ ವಿಫಲವಾದಾಗ ಅಲ್ಲಿ ನಾಗರಿಕ ಸಮಾಜ ಏನು ಕಾರ್ಯ ಮಾಡಬೇಕೋ ಅದನ್ನು ಎಸ್‌ಪಿಎಸ್ ಮಾಡುತ್ತಿದೆ. ಈ ನಾಗರಿಕ ಸಮಾಜದ ಅವಿಭಾಜ್ಯ ಅಂಗವಾಗಿರುವ ನಾವು ಈ ಬಗ್ಗೆ ಏನು ಮಾಡಬಹುದು ಎಂಬುದರ ಬಗ್ಗೆ ಯೋಚಿಸುವ ಅಗತ್ಯವಿದೆ.


ಭ್ರಷ್ಟ ವ್ಯವಸ್ಥೆಯನ್ನು ಪೋಷಿಸುವ ಜಾತಿ ರಾಜಕಾರಣ

ದಿವಂಗತ ದೇವರಾಜ ಅರಸು ಅವರು ಹಿಂದುಳಿದ ವರ್ಗಗಳನ್ನು ಮತ್ತು ಜಾತಿಗಳನ್ನು ಸಂಘಟಿಸಿ ಮುಖ್ಯಮಂತ್ರಿಯಾದರು. ಮುಖ್ಯಮಂತ್ರಿಯ ಕುರ್ಚಿಯೊಂದೇ ಅವರ ಗುರಿಯಾಗಿರಲಿಲ್ಲ. ನೂರಾರು ವರ್ಷಗಳಿಂದ ಎಲ್ಲ ರೀತಿಯ ಅವಕಾಶಗಳಿಂದಲೂ ವಂಚಿತವಾದ ಕರ್ನಾಟಕದ ಸಣ್ಣಪುಟ್ಟ ಜಾತಿ ಮತ್ತು ಸಮುದಾಯಗಳನ್ನು ಸಂಘಟಿಸುವ ಮೂಲಕ ನ್ಯಾಯಬದ್ಧವಾಗಿ ಈ ಜಾತಿ ಮತ್ತು ಸಮುದಾಯಗಳಿಗೆ ದೊರಕಬೇಕಾದ ಅವಕಾಶಗಳನ್ನು ಸವಲತ್ತುಗಳನ್ನು ದೊರಕಿಸಿಕೊಡುವ ತಾತ್ವಿಕ ಚಿಂತನೆ ಅರಸು ಅವರಿಗಿತ್ತು. ಹೀಗಾಗಿಯೇ ಅವರ ಸಂಘಟನೆಗೆ ಕೇವಲ ಜಾತಿಯೊಂದೇ ಆಧಾರವಾಗಿರಲಿಲ್ಲ. ವಿಶಾಲ ತಳಹದಿಯ ತಾತ್ವಿಕ ಚಿಂತನೆ ಮತ್ತು ಸಾಮಾಜಿಕ ಕಳಕಳಿ ಎಲ್ಲ ಸೇರಿದ್ದವು. ಕಳೆದ ಮೂರು ದಶಕಗಳಿಗೂ ಮಿಕ್ಕಿದ ರಾಜ್ಯದ ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸುವವರಿಗೆ ಅರಸು ಅವರ ಚಿಂತನೆಯ ಫಲವೇನು ಎಂಬುದು ಸ್ಪಷ್ಟವಾಗುತ್ತದೆ.

ಇವತ್ತು ಯಡಿಯೂರಪ್ಪನವರು ತಮ್ಮ ಮುಖ್ಯಮಂತ್ರಿಯ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕಾಗಿ ವೀರಶೈವರನ್ನು ಸಂಘಟಿಸಿದ್ದು (?) ಮತ್ತು ವೀರಶೈವ ಮಠಾಧೀಶರು 'ನಿರಾಳವಾಗಿ ಅಧಿಕಾರವನ್ನು ನಡೆಸಿ' ಎನ್ನುವ ಅಭಯವನ್ನು ನೀಡಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯ ದೊಡ್ಡ ಪ್ರಹಸನದಂತೆ ಕಾಣಿಸುತ್ತಿದೆ. ಇಷ್ಟೇ ಆದರೆ ನಕ್ಕು ಸುಮ್ಮನಾಗಿಬಿಡಬಹುದಿತ್ತು. ಆದರೆ ಜಾತ್ಯತೀತ ತತ್ವ ಮತ್ತು ಸಮಾನತೆಯ ಅಂಶಗಳನ್ನೇ ಪ್ರಧಾನವಾಗಿ ಮಾಡಿಕೊಂಡಿರುವ ನಮ್ಮ ಸಂವಿಧಾನವನ್ನು ಒಪ್ಪಿಕೊಂಡಿರುವ ತತ್ವಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ಎಂದೇ ಅರ್ಥ; ಇನ್ನೊಂದು ರೀತಿಯಲ್ಲಿ ಇದನ್ನು ನೋಡಿದರೆ ಇದು ಸಂವಿಧಾನ ವಿರೋಧೀ ಕೃತ್ಯವೂ ಆಗುತ್ತದೆ. ನಮ್ಮ ಸಂವಿಧಾನವನ್ನು ಒಪ್ಪಿಕೊಂಡು, ಪ್ರಮಾಣವಚನ ಸ್ವೀಕರಿಸಿ ಅಧಿಕಾರದ ಗದ್ದುಗೆಯನ್ನು ಏರುವ ರಾಜಕಾರಣಿಗಳು ಆ ನೆನಪೇ ಇಲ್ಲದವರಂತೆ ಜಾತಿಯನ್ನು ಸಂಘಟನೆ ಮಾಡುವುದು, ಅದರ ಬೆಂಬಲದಿಂದ ಅಧಿಕಾರದಲ್ಲಿ ಉಳಿಯಲು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಾತಿ ಸಂಘಟನೆಯ ಅಪಾಯಗಳು ನಮ್ಮನ್ನು ಎಲ್ಲಿಗೆ ಕೊಂಡೊಯ್ಯಬಹುದೆಂಬ ಎಚ್ಚರಿಕೆಯ ಗಂಟೆಯನ್ನೂ ಈ ವೀರಶೈವರ ಸಮಾವೇಶ ಬಾರಿಸುತ್ತಿದೆ.

ಜಾತಿಯನ್ನು ಸಂಘಟಿಸುವುದು ಎಂದರೆ ಜಾತ್ಯತೀತ



ನೋಡುವುದು ಮತ್ತು ಆ ಮೂಲಕ ನೂರಾರು ಜಾತಿಗಳಿರುವ ಒಟ್ಟು ಸಮುದಾಯವನ್ನು ಕಡೆಗಣಿಸುವುದು, ಅವಮಾನಿಸುವುದು ಬಹುದೊಡ್ಡ ದ್ರೋಹವಾಗುತ್ತದೆ; ಜನತೆಗೆ, ಸಂವಿಧಾನಕ್ಕೆ ಮಾಡಿದ ಅಪಚಾರ, ಅವಮಾನವೂ ಆಗುತ್ತದೆ. ಸದ್ಯದ ಸಂಕಷ್ಟದಿಂದ ಇಂಥ ರಾಜಕಾರಣಿಗಳು ಪಾರಾಗಬಹುದು. ಆದರೆ ದೀರ್ಘಕಾಲದ, ನ್ಯಾಯಬದ್ಧ ರಾಜಕಾರಣದಲ್ಲಿ ಸ್ಥಿರವಾಗಿ ನಿಂತು ಬೆಳೆಯಲಾರರು. ಉಲ್ಕೆಗಳಂತೆ ದಿಢೀರನೆ ಪ್ರಜ್ವಲಿಸಿ ಹಾಗೆಯೇ ಉರಿದು ಬಿದ್ದು ಹೋಗಬಹುದು. ಇದನ್ನು ಅರಿತರೆ ನಮ್ಮ ರಾಜಕಾರಣಿಗಳು ಇಂಥ ಹೆಜ್ಜೆಯನ್ನು ಇಡುವಾಗ ಒಂದಲ್ಲ ಹತ್ತು ಬಾರಿ ಯೋಚಿಸಬೇಕಾದ ಸನ್ನಿವೇಶ ಎದುರಾಗಬಹುದು.

'ನ್ಯಾಯವಂತನಾದರೆ ಈ ವೇದಿಕೆ ಹತ್ತು, ಇಲ್ಲವಾದರೆ ಇತ್ತ ನೀನು ಸುಳಿಯುವುದೂ ಬೇಡ; ಅದು ಈ ನೆಲವನ್ನು, ಈ ಧರ್ಮವನ್ನು ಕಳಂಕಿತವಾಗಿಸುವುದು' ಎಂದು ಭ್ರಷ್ಟರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, 'ಗಣ್ಯ'ಪಟ್ಟವನ್ನು ಕಟ್ಟಿಕೊಂಡವರಿಗೆ ಎಚ್ಚರಿಕೆಯನ್ನು ನೀಡಬೇಕಾದ ಮಠಾಧೀಶರು (ಹೀಗೆ ಹೇಳಲು ಇರಬೇಕಾದ ನೈತಿಕಶಕ್ತಿ ಎಷ್ಟು ಜನ ಮಠಾಧೀಶರಿಗೆ ಇದೆ ಎನ್ನುವ ಪ್ರಶ್ನೆಯೂ ಇದೆಯಲ್ಲ) ಈ ವೀರಶೈವ ಸಮಾವೇಶದಲ್ಲಿ ಹೇಳಿದ್ದಾದರೂ ಏನು?

"ಯಾವುದೇ ರಾಜಕೀಯ ಪಕ್ಷದ ವೀರಶೈವ ಮುಖಂಡರಿಗೆ ತೊಂದರೆ, ಅನ್ಯಾಯವಾದರೆ ವೀರಶೈವ ಮಠಗಳು, ಸಂಘ ಸಂಸ್ಥೆಗಳು, ಸಮಾಜ ಹಾಗೂ ಮಹಾಸಭೆ ಸಂಘಟಿತವಾಗಿ ಅದನ್ನು ತಡೆಗಟ್ಟಬೇಕು."

ಅನ್ಯಾಯ ಯಾರಿಗೇ ಆದರೂ ಅದನ್ನು ಇಡೀ ಸಮುದಾಯ, ಸಮಾಜ ತಡೆಗಟ್ಟಬೇಕು. ಅದಕ್ಕೆ ಜಾತಿ ಅಡ್ಡಬರಬಾರದು. ಭ್ರಷ್ಟಾಚಾರವನ್ನು ಪ್ರತಿಭಟಿಸಬೇಕು; ಭ್ರಷ್ಟರಿಗೆ, ಅವರು ರಾಜಕಾರಣಿಯಾಗಿರಲಿ, ಪ್ರಭಾವೀ ಉದ್ಯಮಿಗಳಿರಲಿ, ಅಧಿಕಾರಿಗಳಿರಲಿ ಅಂಥವರಿಗೆ ಇಡೀ ಸಮಾಜವೇ ಬಹಿಷ್ಕಾರ ಹಾಕಬೇಕು. ಅದಕ್ಕೆ ಜಾತಿ ಅಡ್ಡಬರಬಾರದು. ಆದರೆ ಈ ಸಮಾವೇಶ ಭ್ರಷ್ಟರನ್ನು ಗೌರವಿಸಿತು. ಭ್ರಷ್ಟರಾಜಕಾರಣವನ್ನು, ಭ್ರಷ್ಟವ್ಯವಸ್ಥೆಯನ್ನು ಪೋಷಿಸುವಂತೆ, ರಕ್ಷಿಸುವಂತೆ ನಡೆದುಕೊಂಡಿತು. ಇದಕ್ಕೆ ಮುಖ್ಯ ಕಾರಣ ಜಾತಿ.

ಎಲ್ಲ ಮನುಷ್ಯರನ್ನೂ ಸಮಾನ ನೆಲೆಯಲ್ಲಿ ನೋಡಿದ, ಜಾತಿಯ ಅಡ್ಡಗೋಡೆಗಳನ್ನು ಬೀಳಿಸುವ ಮೂಲಕ ಮನುಷ್ಯನ ಘನತೆಯನ್ನು ಎತ್ತಿಹಿಡಿಯಲು ಮಹಾನ್ ಕನಸನ್ನು ಕಂಡ ಮತ್ತು ತನ್ನ ಮಿತಿಯಲ್ಲಿಯೇ ಕ್ರಿಯಾಶೀಲನಾದ ಬಸವಣ್ಣನನ್ನು ಸಹಿಸಲಿಲ್ಲ; ಅವನನ್ನು ಕೊಂದು, ಅದಕ್ಕೆ 'ಕೂಡಲ ಸಂಗಮದಲ್ಲಿ ಬಸವಣ್ಣ ಐಕ್ಯರಾದರು' ಎಂದು ಗೌರವದ ಮುಸುಕನ್ನು ಹೊದಿಸಲಾಯಿತು. ಹನ್ನೆರಡನೇ ಶತಮಾನದಲ್ಲಿ ನಡೆದ ಈ ಎಲ್ಲ ಕೃತ್ಯಗಳ ವಿಶ್ಲೇಷಣೆಯನ್ನು ಅರ್ಥಪೂರ್ಣವಾಗಿ ಮಾಡಬೇಕಾದ ಮತ್ತು ಆ ಮೂಲಕ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮುದಾಯ ಇವತ್ತು ಭ್ರಷ್ಟರಿಗೆ 'ಶ್ರೀರಕ್ಷೆ' ನೀಡುವ ಮೂಲಕ ತಾನು ಎಲ್ಲಿ ನಿಂತಿದ್ದೇನೆ ಎಂಬುದನ್ನು ಸಾಬೀತುಪಡಿಸಿದೆ.

ಇದೇ ಸಮಾವೇಶದಲ್ಲಿ ಪಾಲ್ಗೊಂಡು ದಿಟ್ಟವಾಗಿ ಮಠಾಧೀಶರ ಸ್ಥಾನಮಾನಗಳನ್ನು ಸ್ಪಷ್ಟವಾಗಿ ವಿಶ್ಲೇಷಿಸಿದ ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪನವರು ಮಠ ಮತ್ತು ಮಠಾಧೀಶರ ಸೂಕ್ಷ್ಮ ಚಿತ್ರವನ್ನು ಕೊಡುವುದರಿಂದ ಇಲ್ಲಿ ಅದೇ ಚಿತ್ರವನ್ನು ಮತ್ತೆ ಬರೆಯುವ ಅಗತ್ಯವಿಲ್ಲ.

ಆದರೆ ಜಾತ್ಯತೀತ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜಾತಿಗಳ ಸಮಾವೇಶದಲ್ಲಿ ಭಾಗವಹಿಸುವುದೆಂದರೆ ಜಾತಿಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವುದೇ ಆಗಿದೆ– ಇದು ಜಾತ್ಯತೀತ ತತ್ವಕ್ಕೆ ಕೊಡುವ ದೊಡ್ಡ ಪೆಟ್ಟು ಎಂಬ ಪ್ರಾಥಮಿಕ ತಿಳಿವಳಿಕೆ ನಮ್ಮ 'ಪಾಪು'ಗೆ ಇಲ್ಲದಿರುವುದು... ಅಯ್ಯೋ ಪಾಪ! (ಪಾಪು ಅವರನ್ನು ಮಾತ್ರ ದೂಷಿಸುವುದೇಕೆ, ಎಷ್ಟೋ ಜನ ನಿವೃತ್ತ ನ್ಯಾಯಾಧೀಶರೇ ಇದ್ದಾರಲ್ಲ) ಪಾಪು ಇನ್ನೊಂದು ಮಾತನ್ನೂ ತಮ್ಮ ಸುದೀರ್ಘ ಭಾಷಣದಲ್ಲಿ ಹೇಳಿದ್ದಾರೆ: 'ವೀರಶೈವ ಸಮಾಜದಲ್ಲಿರುವ 76 ಒಳಪಂಗಡಗಳು ಒಂದಾಗಬೇಕು.' ಯಾಕೆ ಒಂದಾಗಬೇಕು? ಜಾತಿ ರಾಜಕಾರಣದ ಇನ್ನೊಂದು ವರಸೆಗಾಗಿಯೇ? ಮತ್ತೆ ಯಾವ ಭ್ರಷ್ಟ ರಾಜಕಾರಣಿಯ ಬೆಂಬಲಕ್ಕೆ?

ಧರ್ಮ ಮತ್ತು ರಾಜಕಾರಣ ಒಂದರೊಳಗೊಂದು ಬೆರೆತಿರುವುದು, ತೆರೆಮರೆಯಲ್ಲಿ ಕಾವಿಗಳೇ ಆಡಳಿತ ನಡೆಸುತ್ತಿರುವುದು, ಕಾವಿಗಳನ್ನು ಹಿಡಿಯುವ ಮೂಲಕ ಶಾಸಕರನ್ನು ನಿಯಂತ್ರಿಸುವುದು ಇತ್ಯಾದಿ ಅಂಶಗಳ ರಾಜಕಾರಣ ಕರ್ನಾಟಕದ ಅಷ್ಟೇಕೆ ಭಾರತಕ್ಕೆ ಹೊಸದೇನೂ ಅಲ್ಲ. ಆದರೆ ಇಷ್ಟೊಂದು ನಿರ್ಲಜ್ಜವಾಗಿ ಪರಸ್ಪರ ಕೈಜೋಡಿಸಿ ಬಹಿರಂಗವಾಗಿ ಘೋಷಣೆಗಳನ್ನು ಮಾಡಿರುವುದು ಮಾತ್ರ

ವೀರಶೈವ ಮಹಾಧಿವೇಶನ ಧಾರ್ಮಿಕ ಸಮಾವೇಶವೋ ರಾಜಕೀಯ ಸಮಾವೇಶವೊ?

ಸ್ವಜನಪಕ್ಷಪಾತ, ಬಂಧುಪ್ರೇಮ, ಡೀ-ನೋಟಿಫಿಕೇಷನ್ ಹಗರಣ, ಗಣಿಗಾರಿಕೆಯ ಅಕ್ರಮ-ಇತ್ಯಾದಿ ಆರೋಪಗಳನ್ನು ಎದುರಿಸುತ್ತಿರುವ ಮುಖ್ಯಮಂತ್ರಿಗಳನ್ನು ಸಾರಾಸಗಟಾಗಿ ಬೆಂಬಲಿಸುವ ವೀರಶೈವ ಮಹಾಸಭೆಯ ಒತ್ತಾಸೆ ಸ್ವಾಭಿಮಾನಿ ಸಂಸ್ಕೃತಿಯ ಶರಣ ಪರಂಪರೆಗೆ ಅಪಮಾನಕಾರವಲ್ಲವ?



"Spiritualise the politics" ಎಂದರು ಮಹಾತ್ಮ ಗಾಂಧೀಜಿ. ರಾಜಕೀಯವನ್ನು ದೈವೀಕರಣಗೊಳಿಸಬೇಕೆಂಬುದು ಅವರ ಆಶಯ: ಆದರೆ ಬರುಬರುತ್ತ ರಾಜಕೀಯವು ದೈವೀಕರಣಗೊಳ್ಳುವುದಕ್ಕಿಂತ ಧರ್ಮವೇ ರಾಜಕೀಯದ ಸಂಪರ್ಕದಿಂದ ಕಲುಷಿತಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದಕ್ಕೆ ಸ್ಪಷ್ಟ ನಿದರ್ಶನ 22 ನೆಯ ವೀರಶೈವ ಮಹಾಧಿವೇಶನ. ಸುತ್ತೂರು ಮಠದ ಆಶ್ರಯದಲ್ಲಿ ನಡೆದ ಮೂರು ದಿನಗಳ ಅಧಿವೇಶನ ಇದು ಧಾರ್ಮಿಕ ಸಮಾವೇಶವೋ ರಾಜಕೀಯ-ಅದೂ ಬಿಜೆಪಿ ಪ್ರೋಷಿತ- ಸಮಾವೇಶವೋ ಎಂಬ ಅಭಿಪ್ರಾಯವನ್ನು ಹುಟ್ಟಿಸಿತು. ಜನರಿಗೆ ಧಾರ್ಮಿಕ ಸಂಸ್ಕಾರವನ್ನು ನೀಡುವ ಬದಲು ಮುಖ್ಯಮಂತ್ರಿಗಳನ್ನು ವೈಭವೀಕರಿಸುವ ಹೊಗಳು ಭಟ್ಟಂಗಿ ಕಾರ್ಯಕ್ರಮವಾಗಿ ಈ ಸಮಾವೇಶ ತೋರಿಬಂತು.

ಒಂದು ಬೃಹತ್ ಧಾರ್ಮಿಕ ಸಮುದಾಯವಾಗಿರುವ ಲಿಂಗಾಯತ ಸಮಾಜಕ್ಕೆ ಒಂದು ಶ್ರೇಷ್ಠ ಶರಣ ಪರಂಪರೆ ಇದೆ. ಇದರ ಪ್ರಕಾರ ಜಾತಿ ಮುಖ್ಯವಲ್ಲ ವ್ಯಕ್ತಿಯ ಸಾಧನೆ, ದೃಷ್ಟಿಕೋನ, ತತ್ವ-ಸಿದ್ಧಾಂತಗಳು ಮುಖ್ಯ. 'ಜಾತಿ' ಬಂಧುಗಳ ಅಖಂಡ ಪ್ರೀತಿಗೆ ಪಾತ್ರರಾಗಿರುವ ಶ್ರೀ ಬಿ.ಎಸ್. ಯಡಿಯೂರಪ್ಪನವರು, "ನನಗೆ ಕಿವಿ ಹಿಂಡಿ ಬುದ್ಧಿ ಹೇಳುವ ಅಧಿಕಾರವಿರುವುದು ಮಠಾಧೀಶರಿಗೆ ಮಾತ್ರ" ಎಂದು ಹೇಳಿದ್ದಾರೆ. ಅಂತಹ ಧೈರ್ಯ, ಆತ್ಮಬಲ ಮಠಾಧೀಶರಿಗೆ ಇದ್ದುದಾದರೆ ರಾಜಕೀಯ ವಾತಾವರಣ ಈಗ ಕೆಟ್ಟಷ್ಟು ಖಂಡಿತಾ ಕೆಡುತ್ತಿರಲಿಲ್ಲ. ಜಾತಿಯಿಂದ "ಲಿಂಗಾಯತ"ರಾಗಿರುವ ಶ್ರೀ ಯಡಿಯೂರಪ್ಪನವರ ನಂಬಿಕೆ ಮತ್ತು ಆಚರಣೆಗಳು ತಮ್ಮ ಧರ್ಮಕ್ಕೆ ಸಂಪೂರ್ಣ ಹೊರತಾಗಿ, ಅಕ್ಕಪಕ್ಕ ಇಬ್ಬರು ಮಠಾಧೀಶರನ್ನು ಇರಿಸಿಕೊಂಡು ಅವರು ಮಾಟಮಂತ್ರದ ಭಯವನ್ನು ವ್ಯಕ್ತಪಡಿಸಿದಾಗ ಆ ಗುರುದ್ವಯರು ಕಿವಿ ಹಿಂಡುವುದಿರಲಿ ತಮ್ಮ "ಗುರುಬಲ" ಮಾಟಮಂತ್ರದ ವಿರುದ್ಧ ರಕ್ಷಣೆ ನೀಡುವುದೆಂಬ ಅಭಯವನ್ನೂ ನೀಡಲಿಲ್ಲ. ಅಂದಾಗ ಬುದ್ಧಿ ಹೇಳಬೇಕಾದ ಅನೇಕ ವಿಷಯ ಕುರಿತು ಧ್ವನಿ ಎತ್ತಬಲ್ಲರೆ?

ಒಂದು ಸಮಾಜದ ಹಿತದೃಷ್ಟಿಯಿಂದ ಎಲ್ಲ ಪಕ್ಷಗಳೂ ಬೇಕು, ಎಲ್ಲ ಜಾತಿಮತಧರ್ಮಗಳವರೂ ಬೇಕು. ಆಪರೇಷನ್ ಕಮಲದಂತಹ ವ್ಯಾಪಾರಿ ಚಟುವಟಿಕೆಯನ್ನು ಅನ್ಯ ಪಕ್ಷದವರೂ ಮಾಡಿದರೆ ಆಗ ವ್ಯಾಪಾರಿ ಸರಕಾಗಿರುವ ಶಾಸಕರು 'ಜಾತಿ' ಅಭಿಮಾನ ಬಿಟ್ಟು ಧನಾಭಿಮಾನ ಪ್ರೇರಿತರಾಗಿ ಜಿಗಿದು, ಪಕ್ಷಾಡಳಿತ ಬದಲಾದರೆ 'ಲಿಂಗಾಯತ'ರು ತಮ್ಮ ಪಕ್ಷ ವಿರೋಧಿಗಳು ಎಂಬ ಪೂರ್ವಾಗ್ರಹ ಬೆಳೆಸಿಕೊಂಡ ಅಧಿಕಾರಸ್ಥರಿಂದ ಸಮಾಜಕ್ಕೆ ತೊಂದರೆಯಾಗದೆ? ಬಹಿರಂಗವಾಗಿ ಬಿಜೆಪಿಗೆ ಜಾತಿ ಬೆಂಬಲವನ್ನು ವ್ಯಕ್ತಪಡಿಸಿದ್ದು ಎಷ್ಟರ ಮಟ್ಟಿಗೆ ಸರಿ? ಸ್ವಜನಪಕ್ಷಪಾತ, ಬಂಧುಪ್ರೇಮ, ಡೀ-ನೋಟಿಫಿಕೇಷನ್ ಹಗರಣ, ಗಣಿಗಾರಿಕೆಯ ಅಕ್ರಮ-ಇತ್ಯಾದಿ ಆರೋಪಗಳನ್ನು ಎದುರಿಸುತ್ತಿರುವ ಮುಖ್ಯಮಂತ್ರಿಗಳನ್ನು ಸಾರಾಸಗಟಾಗಿ ಬೆಂಬಲಿಸುವ ವೀರಶೈವ ಮಹಾಸಭೆಯ ಒತ್ತಾಸೆ ಸ್ವಾಭಿಮಾನಿ ಸಂಸ್ಕೃತಿಯ ಶರಣ ಪರಂಪರೆಗೆ ಅಪಮಾನಕಾರವಲ್ಲವೆ? "ಪರಧನ, ಪರಸತಿ, ಪರದೈವವನೊಲ್ಲದ, ಪ್ರಜೆಗಳು ಬಂದರೆ ಗುಡಿತೋರಣವ ಕಟ್ಟಿ, ನಂಟರಿಷ್ಟರು ಬಂದರೆ ಸಮಯವಿಲ್ಲ, ಅತ್ತ ಸರಿಯಿರಿ" ಎಂಬ ಬಸವ ತತ್ವಕ್ಕೆ ಕಳಂಕ ತರುವಂಥದಲ್ಲವೆ?

ಬಸವ ಧರ್ಮದ ಉಳಿವಿಗಾಗಿ ಧ್ರುವೀಕರಣ

"ಗುರು-ವಿರಕ್ತರು ಒಂದೇ ವೇದಿಕೆಯ ಮೇಲೆ ಬಂದುದು, ಭಿನ್ನವಿಚಾರದ ಸ್ವಾಮಿಗಳು ಒಂದುಗೂಡಿದುದು ಮಹತ್ವದ ಸಾಧನೆ; ಇದು ಯಡಿಯೂರಪ್ಪನವರ ಪ್ರಯತ್ನ" ಎಂದು ಒಂದು ಪತ್ರಿಕೆಯಲ್ಲಿ ಬಂದಿದೆ. ಆಂತರಿಕವಾಗಿ ಬಸವ ತತ್ವದ ವಿರೋಧಿಗಳೇ ಆಗಿದ್ದವರು ಈಗ ಬಹಿರಂಗವಾಗಿ ಒಂದು ವೇದಿಕೆಗೆ ಬಂದಿದ್ದಾರೆ ಎಂಬುದು ಸೂರ್ಯಪ್ರಕಾಶದಷ್ಟು ಸತ್ಯ. ಕಿರೀಟ ಮೋಹಿಗಳಾದ ರಂಭಾಪುರಿ ಜಗದ್ಗುರುಗಳು, ಸದಾ ಇನ್ನುಳಿದ ಸ್ವಾಮಿಗಳಿಗಿಂತ ಎತ್ತರದ ಕುರ್ಚಿ ಬೇಕೆನ್ನುತ್ತಿದ್ದವರು. ಪ್ರಸ್ತುತ ಸಭೆಯಲ್ಲಿ ಕಿರೀಟವಿಲ್ಲದೆ ಉಳಿದ ಸ್ವಾಮಿಗಳ ಸಮಾನವಾಗಿ ಕುಳಿತಿದ್ದುದು ಇಂದಿನ ಪರಿಸ್ಥಿತಿಯಲ್ಲಿ ಗಮನಾರ್ಹವಾದರೂ ಹಾನುಗಲ್ ಕುಮಾರ್ ಸ್ವಾಮಿಗಳು ವೀರಶೈವ ಮಹಾಸಭೆಯನ್ನು ಹುಟ್ಟು ಹಾಕಿದ ದೂರಾಲೋಚನೆ, ಪಂಚಪೀಠಗಳವರು ಸೃಷ್ಟಿಸಿದ ಪಂಚಾಚಾರ್ಯರ ಕಲ್ಪನೆ ಒಂದು ನೂರು ವರ್ಷಗಳ ಅವಧಿಯಲ್ಲಿ ವಿಷಗಳ್ಳಿಯಾಗಿ ಬೆಳೆದು ಗುರು ಬಸವಣ್ಣನವರ ಕೊಡುಗೆಯಾದ ಲಿಂಗಾಯತ ಧರ್ಮವನ್ನು ಕಳಾಹೀನ

ಬಹುಶಃ ಇದೇ ಮೊದಲು ಇರಬಹುದು. ಇದು ಕರ್ನಾಟಕದ ಜನತೆಗೆ, ಸಂವಿಧಾನವನ್ನು ಗೌರವಿಸುವ ನಾಗರಿಕರಿಗೆ ಮಾಡಿರುವ ಬಹುದೊಡ್ಡ ಅಪಮಾನ. ಇದನ್ನು ಸೌಮ್ಯ ರೀತಿಯಿಂದಲಾದರೂ ಪ್ರತಿಭಟಿಸಬೇಕಾದದ್ದು ಎಲ್ಲ ನಾಗರಿಕರ ಕರ್ತವ್ಯ.

ದೊಡ್ಡ ಜಾತಿಗಳ ಇಂಥ ಸಮಾವೇಶಗಳು ಭ್ರಷ್ಟರಾಜಕಾರಣಿಗಳ ನಿರ್ಲಜ್ಜ ಸ್ಥಿತಿಯನ್ನು ಮಾನ್ಯ ಮಾಡುತ್ತವೆ. ಸಮಾಜ ದ್ರೋಹಿಗಳ ಕುಕೃತ್ಯಗಳಿಗೆ ಬೆಂಬಲವನ್ನು ನೀಡುತ್ತವೆ. ಹೇಗಾದರೂ ಸರಿ, ಎಲ್ಲಿಯಾದರೂ ಇರಿ, ಏನಾದರೂ ಮಾಡಿ, ನಮ್ಮ ಜಾತಿಯವರಾಗಿ ರಾಜಕಾರಣ ಮಾಡಿ, ನಾವು ನಿಮ್ಮ ಬೆಂಬಲಕ್ಕಿದ್ದೇವೆ ಎಂದು ಹೇಳುವುದು ವಿವಿಧ ರಾಜಕೀಯ ಪಕ್ಷಗಳ ಸಿದ್ಧಾಂತಕ್ಕೆ, ನಂಬಿಕೆಗಳಿಗೆ, ಬಹುತ್ವಕ್ಕೆ, ಸಂವಿಧಾನಕ್ಕೆ, ಜನತೆಗೆ ಮಾಡುವ ಮಹಾನ್ ದ್ರೋಹ. ಇದೇಕೆ ಜಾತಿಗಳ ಮಠಾಧೀಶರಿಗೆ ಅರ್ಥವಾಗುವುದಿಲ್ಲ?

ಇಂಥ ಸಮಾವೇಶಗಳು ಸಣ್ಣಪುಟ್ಟ ಜಾತಿಗಳ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತವೆ. ಅವರ ಅಸ್ತಿತ್ವವನ್ನು ಅಲ್ಲಗಳೆಯುತ್ತವೆ. ಬಲಿಷ್ಠ ಜಾತಿಗಳ ದಬ್ಬಾಳಿಕೆ ಆರಂಭವಾಗಿ ಸಣ್ಣಪುಟ್ಟ ಜಾತಿಗಳ ಜನ ಮೂಲೆಗುಂಪಾಗುತ್ತಾರೆ. ರಾಜಕಾರಣ ಎಂದರೆ ಪ್ರತಿಯೊಬ್ಬರೂ ಭಾಗವಹಿಸಬೇಕಾದ ಕ್ರಿಯೆ. ಹಾಗಾದಾಗಲೇ ನಮ್ಮ ರಾಜಕಾರಣಕ್ಕೆ ಅರ್ಥ ಮತ್ತು ಸಾರ್ಥಕ್ಯ.

ಜಾತಿಕಾರಣ ಬಲವಾಗುತ್ತ ಹೋದರೆ ಆಗಬಹುದಾದ ಅಪಾಯಗಳನ್ನು ಇತ್ತೀಚಿನ ವರ್ಷಗಳ ಭಾರತದ ಇತಿಹಾಸವೇ ಹೇಳುತ್ತದೆ. ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿದ ಗುಂಪಿನಲ್ಲಿ ಸಾಧುಸಂತರೇ ಅಧಿಕ ಸಂಖ್ಯೆಯಲ್ಲಿದ್ದರು; ನಮ್ಮ ಕಾನೂನು ವ್ಯವಸ್ಥೆ, ಪೊಲೀಸು, ಮಿಲಿಟರಿ, ಪ್ಯಾರಾ ಮಿಲಿಟರಿ ಇತ್ಯಾದಿ ಎಲ್ಲವೂ ಇದ್ದು ಯಾವುದೂ ಇಲ್ಲದ ಸ್ಥಿತಿಯೊಂದನ್ನು ನಿರ್ಮಿಸಲಾಗಿತ್ತು. ಇದೆಲ್ಲ ನಮ್ಮ ಸ್ಮೃತಿಪಟಲದಲ್ಲಿ ಒಮ್ಮೆ ಹಾದುಹೋದರೆ ಜಾತಿ ಸಂಘಟನೆ ಮತ್ತು ಸಮಾವೇಶಗಳು ಅಷ್ಟು ಸುಲಭವಾಗಿ ನಡೆಯಲಾರವು. ಆದರೆ ನಮಗೆ ಸ್ಮೃತಿಯೇ ಇಲ್ಲದಿದ್ದರೆ?

ಇನ್ನೊಂದು ಮಾತನ್ನು ಹೇಳಬೇಕು; ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮುಖ್ಯ ಸ್ತಂಭ ಎನಿಸಿರುವ ಮಾಧ್ಯಮ ವಹಿಸುವ ಪಾತ್ರವನ್ನು ನೋಡಿ. ನಮ್ಮ ಸಂವಿಧಾನಕ್ಕೆ ತೀರಾ ವಿರುದ್ಧವಾದ ಇಂಥ ಜಾತಿ ಸಮ್ಮೇಳನಗಳನ್ನು ಟೀಕಿಸಬೇಕಾದ ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳು ಆ ಕೆಲಸವನ್ನು ಮಾಡದೆ ಇಡೀ ಸಮಾವೇಶವನ್ನು ಬಣ್ಣಿಸಿದ್ದು, ತಾರತಮ್ಯ ಜ್ಞಾನವಿಲ್ಲದೆ ತಮ್ಮ ಅಮೂಲ್ಯ ಜಾಗವನ್ನು ಬೇಕಾಬಿಟ್ಟಿಯಾಗಿ ನೀಡಿದ್ದು ಏನನ್ನು ಸೂಚಿಸುತ್ತದೆ? ಈ ಸಮ್ಮೇಳನದ ಹೆಸರಿನಲ್ಲಿ ಪುಟಗಟ್ಟಲೇ ಜಾಹೀರಾತನ್ನು ವ್ಯವಸ್ಥಾಪಕರು ನೀಡಿದ್ದರೆಂಬುದನ್ನು ನೆನೆದಾಗ ಮಾಧ್ಯಮಗಳೂ ಹಂಗಿನಲ್ಲಿ ಕಾರ್ಯನಿರ್ವಹಿಸಬೇಕಾದ ಸ್ಥಿತಿಯಲ್ಲಿವೆಯೇ ಎಂದೆನಿಸುತ್ತದೆ.

• ಜಿ.ಪಿ.ಬಸವರಾಜು

ಮಾಡಲು ಯತ್ನಿಸಿದ್ದು ನಗ್ನ ಸತ್ಯ. ಒಂದು ನೂರು ಬಾರಿ ಸುಳ್ಳನ್ನು ಹೇಳಿದರೆ ಅದು ಸತ್ಯ ಎಂಬ ಭ್ರಮೆ ಜನರ ಮನದಲ್ಲಿ ಮೂಡುವುದು ಎಂಬ ಗೋಬೆಲ್ ತಂತ್ರವನ್ನು ಅನುಸರಿಸುತ್ತ ಲಿಂಗಾಯತರನ್ನು ವೀರಶೈವರೆಂದು ಕರೆದು, ಪ್ರಚಾರ ಮಾಡಿ ವೀರಶೈವ ಮಹಾಸಭೆ ಮತ್ತು ಪಂಚಪೀಠದವರು ಯಶಸ್ವಿಯಾದ ಭ್ರಮೆಯಲ್ಲಿದ್ದಾರೆ.

ಪ್ರಗತಿಪರ ಚಿಂತನೆಯ, ಜಾತ್ಯತೀತ ಪರಿಕಲ್ಪನೆಯ, ಸಾಮಾಜಿಕ ನ್ಯಾಯ- ಸಮಾನತೆಗೆ ಬದ್ಧವಾದ ಬಸವಗುರು ಸಂಸ್ಥಾಪಿತ ಲಿಂಗಾಯತ ಧರ್ಮವು ವರ್ಣಾಶ್ರಮ ಆಧಾರಿತ ವೀರಶೈವ ಪಂಥದಿಂದ ಪೂರ್ತಿ ಬೇರೆಯೇ ಆದ ಪರಿಪೂರ್ಣ ಧರ್ಮ. ವಚನ ಸಾಹಿತ್ಯವನ್ನೇ ತನ್ನ ಸಂವಿಧಾನವನ್ನಾಗಿ ಉಳ್ಳ ಈ ಧರ್ಮವನ್ನು ವೀರಶೈವವಾದಿಗಳಿಂದ ರಕ್ಷಿಸಬೇಕಾದ ಹೊಣೆಗಾರಿಕೆ ನಮ್ಮ ಮುಂದಿದೆ. 12ನೆಯ ಶತಮಾನದಲ್ಲಿ ಹುಟ್ಟಿನಿಂದ ಬ್ರಾಹ್ಮಣರಾಗಿ ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು, ಹುಟ್ಟಿನಿಂದ ಸಮಗಾರರಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಿದಾಗ, ಹೊರಗಿನ ಪುರೋಹಿತಶಾಹಿ ಸಹಿಸಿಕೊಳ್ಳದೆ ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಇಂದು ಒಳಗೆ ಬಂದು ಸೇರಿರುವ ವೀರಶೈವ ಪುರೋಹಿತಶಾಹಿ ಬಸವಕ್ರಾಂತಿಯ ಮೂಲ ಆಶಯವನ್ನೇ ನಾಶ ಮಾಡುತ್ತಿದೆ. ಅಂಥದೊಂದು ಸಂಚು ಈಗ ಜರುಗಿದ ವೀರಶೈವ ಅಧಿವೇಶನ.

ಆದ್ದರಿಂದ ಇಂದು ಬಸವ ತತ್ವ ಮತ್ತು ವಚನ ಸಾಹಿತ್ಯದ ಸಂರಕ್ಷಣೆ, ಲಿಂಗಾಯತ ಸಮಾಜದ ತಾತ್ವಿಕ ಶುದ್ಧೀಕರಣ ಕೇವಲ ಲಿಂಗಾಯತರ ಜವಾಬ್ದಾರಿ ಮಾತ್ರವಾಗಿರದೆ ನಮ್ಮ ದೇಶದ ಸಂವಿಧಾನ ಆಶಿಸುವ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯಗಳ ಪ್ರತಿಷ್ಠಾಪನೆಗಾಗಿ ಪ್ರಗತಿಪರ ಚಿಂತನೆಯುಳ್ಳ ಲಿಂಗಾಯತೇತರರ ಕರ್ತವ್ಯವೂ ಆಗಿದೆ.

•ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ

"ಇತ್ತೀಚೆಗೆ ಮೈಸೂರಿನ ಹತ್ತಿರದ ಸುತ್ತೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ (ಅಭಾವೀಮ) 22ನೆಯ ಮಹಾ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ ನಮ್ಮ ರಾಜ್ಯದ ಕುಂಕುಮಧಾರಿ ಮುಖ್ಯಮಂತ್ರಿ ಅವರಿಗೆ ಪೂರ್ಣ ಬೆಂಬಲ ನೀಡಿ ನಿರ್ಣಯವನ್ನು ಕೈಗೊಳ್ಳಲಾಗಿದೆ. ಇದರಿಂದ ಅಭಾವೀಮ ಸಭೆಯು ರಾಜ್ಯದ ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯಲ್ಲ ಎಂಬುದು ಸಾಬೀತಾಗಿದೆ. ಯಾವ ಸಂಕೋಚವೂ ಇಲ್ಲದೆ ತನ್ನ ಕಚೇರಿಯಲ್ಲಿ ಲಿಂಗಾಯತ ವಿರೋಧಿ ವೈದಿಕವಾದಿ ಯಜ್ಞ-ಯಾಗ ಮಾಡುವ, ದಾನ-ದತ್ತಿ ನೀಡುವ, ಹರಕೆ ಕಟ್ಟಿಕೊಳ್ಳುವ, ದಿನಬೆಳಗಾದರೆ ಗುಡಿ-ಗುಂಡಾರಗಳನ್ನು ವಿಪ್ರರ ಗುಂಪು ಕಟ್ಟಿಕೊಂಡು, ರೇಷ್ಮೆ ಶಾಲು ಹೊದ್ದುಕೊಂಡು ಸುತ್ತುವ ನಮ್ಮ ಕುಂಕುಮಧಾರಿ ಮುಖ್ಯಮಂತ್ರಿ ಅವರಿಗೆ ಬೇಷರತ್ ಬೆಂಬಲ ನೀಡಿರುವುದು ಈ ಮಹಾಸಭೆಯ ನೇತೃತ್ವ ವಹಿಸಿದವರಿಗೆಲ್ಲ ವಚನ ಸಂವಿಧಾನದ-ಲಿಂಗಾಯತ ಪ್ರಣಾಳಿಕೆಯ ರವಷ್ಟೂ ಜ್ಞಾನ ಇಲ್ಲವೆಂಬುದು ಜಗಜ್ಜಾಹೀರಾದಂತಾಗಿದೆ. ಈ ಅಧಿವೇಶನದಲ್ಲಿ ಭಾಗವಹಿಸಿದ್ದ ಮಠಾಧೀಶರು ಲಿಂಗಾಯತ ಪ್ರಣಾಳಿಕೆಯ ದೃಷ್ಟಿಯಿಂದ ಪೊಳ್ಳು ಮತ್ತು ಜೊಳ್ಳು ಎಂಬುದು ಈಗ ಬಹಿರಂಗಗೊಂಡಂತಾಗಿದೆ.

'ಶ್ರೀ ಯಡಿಯೂರಪ್ಪ ಅವರು ಅಪರೂಪದ ಮುಖ್ಯಮಂತ್ರಿ' ಎಂದು ವರ್ಣಿಸುವುದರ ಮೂಲಕ ನಮ್ಮ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಕರ್ನಾಟಕ ಏಕೀಕರಣ ರೂವಾರಿ ದಿ.ಎಸ್.ನಿಜಲಿಂಗಪ್ಪ, ದಕ್ಷ ಆಡಳಿತಗಾರ ದಿ. ವೀರೇಂದ್ರ ಪಾಟೀಲ್, ಸಮಾಜವಾದಿ ದಿ. ಜೆ.ಎಚ್.ಪಟೇಲ್, ವಿಭೂತಿಧಾರಿ ದಿ.ಬಿ.ಡಿ.ಜತ್ತಿ ಅವರಿಗೆಲ್ಲ ಮಹಾಸಭೆಯು ಅವಮಾನ ಮಾಡಿದೆ. ಅವರೆಲ್ಲರ ಪಾದಧೂಳಿಗೂ ಸಮರಲ್ಲದ ಈಗಿನ ಮುಖ್ಯಮಂತ್ರಿ ಅವರಿಗೆ ಸಮುದಾಯದ ಬೆಂಬಲವಿದೆಯೆಂದು ಹೇಳಿ ಮಹಾಸಭೆಯು ನಾಡಿನ ಬಸವಾನುಯಾಯಿಗಳಿಗೆ ಮತ್ತು ಲಿಂಗಾಯತ ಸಂವಿಧಾನಕ್ಕೆ ದ್ರೋಹ ಬಗೆದಿದೆ.

ಇಂತಹ ಒಂದು ಬೆಂಬಲವನ್ನು ಕೊಂಡುಕೊಳ್ಳುವುದಕ್ಕಾಗಿಯೇ ಮಹಾಸಭೆಯ ಅಧಿವೇಶನದ ಉದ್ಘಾಟನೆ ಹಾಗೂ ಸಮಾರೋಪ ಕಾರ್ಯಕ್ರಮಗಳೆರಡರಲ್ಲೂ ನಮ್ಮ ಮುಖ್ಯಮಂತ್ರಿ ಅವರು ಹಾಜರಾತಿ ಹಾಕಿದ್ದಾರೆ. ಗೌರಿ ಲಂಕೇಶ್ ಪತ್ರಿಕೆಯ ಏಪ್ರಿಲ್ ೨೧ರ ಸಂಚಿಕೆಯಲ್ಲಿ ಬರೆದಂತೆ ಅಧಿವೇಶನದಲ್ಲಿ ಏನೆಲ್ಲ ಅನಾಹುತ ನಡೆಯಬಹುದೆಂದು ನಿರೀಕ್ಷಿಸಲಾಗಿತ್ತೋ ಅದೆಲ್ಲ ನಡೆದಿದೆ.

'ಕುರಿ ಕೋಳಿ ಕಿರಿಮೀನು ತಿಂಬವರೆಲ್ಲ ಕುಲಜ ಕುಲಜರೆಂದೆಂಬರು

ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು,

ಅವರೆಂತು ಕೀಳುಜಾತಿಯಾದರು?"

ಎಂಬ ಕಾಳವ್ವೆಯ ವಚನದ ಸಂದೇಶವಾಗಲಿ ಅಥವಾ

'ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ

ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲು

ಅವರ ಲಿಂಗವೆಂಬೆ, ಅವರ ಮುಖಲಿಂಗಿಗಳೆಂಬೆನು'

ಎಂಬ ಬಸವಣ್ಣನ ವಚನದ ಸೂತ್ರವಾಗಲಿ ಅರ್ಥವಾಗದ ಬೋಳೆ ವೀರಶೈವ ಮಹಾಸಭೆಯ ಜನರು ಗೋಹತ್ಯೆ ನಿಷೇಧ ಮಸೂದೆ ಬಗ್ಗೆ ಮಾತನಾಡಿದ್ದಾರೆ. ಅದಕ್ಕೂ ಲಿಂಗಾಯತರ ಮಹಾಧಿವೇಶನಕ್ಕೂ ಏನು ಸಂಬಂಧ? ಲಿಂಗಾಯತರಲ್ಲಿರುವ ಬಡ ಮತ್ತು ಸಣ್ಣ ಸಮುದಾಯಗಳಿಗೆ,

ಬಸವ ವಿರೋಧಿಗೆ ಮಹಾಸಭೆಯ ಬೆಂಬಲ

ರಾಜಕೀಯವಾಗಿ ದುರ್ಬಲರಾಗಿರುವ ಹಡಪದರು, ಸಿಂಪಿಗರು, ನೊಳಂಬರು, ಮಾಳಿಗಳು, ಗಾಣಿಗರು ಮುಂತಾದವರಿಗೆ ಮಹಾಸಭೆಯು ಧ್ವನಿಯಾಗಬೇಕೆಂದು ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಒತ್ತಾಯ ಮಾಡಲಾಗಿತ್ತು. ಈಗ ಮಹಾಸಭೆಯ ನಿರ್ಣಯಗಳಲ್ಲಿ ಅದರ ಬಗ್ಗೆ ಚಕಾರವೂ ಇಲ್ಲ. ಜನರಿಗೆ ಪ್ರತಿಯಾಗಿ ಮಹಾಸಭೆಗೆ ಇಲ್ಲಸಲ್ಲದ ಸಂಗತಿಗಳು ಮುಖ್ಯವಾಗಿಬಿಟ್ಟಿವೆ. ಅಖಿಲ ಭಾರತ ವೀರಶೈವ ಎಂಬುದನ್ನು ಅಖಿಲ ಭಾರತ ಲಿಂಗಾಯತ ಎಂದು ಹೆಸರು ಬದಲಾವಣೆ ಮಾಡಿರೆಂದು ನಾಡಿನ ಲಿಂಗಾಯತರು ಕೂಗಿ ಕೂಗಿ ಕೇಳುತ್ತಿದ್ದರೆ ಅದರ ಬಗ್ಗೆ ಮಹಾಸಭೆಯು ಕಿಮ್ಮತ್ತು ಕೊಟ್ಟಿಲ್ಲ. ಕೊನೆಗೆ 'ವೀರಶೈವ-ಲಿಂಗಾಯತ' ಎಂಬುದನ್ನು 'ಲಿಂಗಾಯತ-ವೀರಶೈವ' ಎಂದಾದರೂ ನಿರ್ಣಯಗಳಲ್ಲಿ ಮೊದಲನೆಯ ಹೆಜ್ಜೆಯಾಗಿ ಬಳಸಬಹುದಾಗಿತ್ತು, ಆದರೆ ನಾಡಿನ ಲಿಂಗಾಯತರ ಕೂಗು ಅರಣ್ಯ ರೋದನವಾಗಿದೆ.



'ಶ್ರೀ ಯಡಿಯೂರಪ್ಪ ಅವರು ನಿಜಕ್ಕೂ ಪುಣ್ಯಶಾಲಿ ಮುಖ್ಯಮಂತ್ರಿ. ಬೆಂಗಳೂರಿನಲ್ಲಿ ನಿರ್ಮಿಸಿರುವ ವೀರಶೈವ ಕಚೇರಿ ಕಟ್ಟಡ ಅವರಿಂದಲೇ ಪೂರ್ಣಗೊಂಡಿದೆ' ಎಂಬ ಮಾತುಗಳು ಅಧಿವೇಶನದಲ್ಲಿ ಕೇಳಿಬಂದಿವೆ. ಇದೇನು ಋಣ ಪರಿಹಾರದ ಅಧಿವೇಶನವೇ? ಕೇವಲ ಹಣಕೊಟ್ಟವರು ಮಾತ್ರ ಲಿಂಗಾಯತರಿಗೆ ಶ್ರೇಷ್ಠರೇ? ಹಣದ ಆಧಾರದಲ್ಲಿ ಒಬ್ಬ ಆಡಳಿತಗಾರನ ಕಾರ್ಯಕ್ಷಮತೆಯನ್ನು ಅಳೆಯುವ ಮಾನದಂಡವನ್ನು ಲಿಂಗಾಯತ ಪ್ರಣಾಳಿಕೆಯು ನೀಡಿದೆಯೇ? ಅವರು ಮಹಾಸಭೆಗೆ ಹಣ ಕೊಟ್ಟಿರಬಹುದು. ಅವರೇನು ತಮ್ಮ ಸ್ವಂತ ಸಂಪಾದನೆಯನ್ನು ಕೊಟ್ಟಿದ್ದಾರೆಯೇ? 'ಉರಿ ಬರಲಿ, ಸಿರಿ ಬರಲಿ, ಬೇಕು ಬೇಡೆನ್ನೆನು, ಆ ನಿಮ್ಮ ಹಾರೆನು, ಮಾನವರ ಬೇಡೆನು, ಆಣೆ ನಿಮ್ಮಾಣೆ' ಎಂದು ಬಸವಣ್ಣ ಹೇಳಿದರೆ 'ಬೇಡುವುದು ನಮ್ಮ ಧರ್ಮ' ಎನ್ನುವಂತೆ ಮಹಾಸಭೆಯು ಲಿಂಗಾಯತತನವನ್ನು ಬಿಟ್ಟುಕೊಟ್ಟು ವೀರಶೈವತನವನ್ನು ಮೆರೆದಿದೆ ಮತ್ತು ಆ ಮೂಲಕ ತನ್ನ ಜೋಭದ್ರತನವನ್ನು ಬಹಿರಂಗವಾಗಿ ಪ್ರದರ್ಶಿಸಿದೆ.

ಒಂದು ಸಮಾಧಾನದ ಸಂಗತಿಯೆಂದರೆ ತಮ್ಮ ರಕ್ತಗತ ಗುಣಕ್ಕೆ ಸರಿಯಾಗಿ ಶ್ರೀಶೈಲ ಮಹಾಪೀಠದ ಸ್ವಾಮೀಜಿ ಅವರು 'ಶ್ರೀ ಯಡಿಯೂರಪ್ಪ ಅವರೇ ಎಲ್ಲ ಸ್ವಾಮೀಜಿಗಳ ಮತ್ತು ವೀರಶೈವ ಸಮಾಜದ ಬೆಂಬಲ ನಿಮಗಿದೆ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದು ಸರಿಯಾದ ಮಾತು. ಅಲ್ಲಿ ಲಿಂಗಾಯತರನ್ನು ಸೇರಿಸಿಲ್ಲವೆಂಬುದು ಮುಖ್ಯ. ಆದರೆ 'ಎಲ್ಲ ಸ್ವಾಮಿಗಳು' ಎಂದರೆ ಯಾರು? ಗದುಗಿನ ಡಾ.ಸಿದ್ಧಲಿಂಗ ಸ್ವಾಮಿಗಳು, ಇಳಕಲ್ಲಿನ ಮಹಾಂತಪ್ಪಗಳು, ಲಿಂಗಾಯತ ಪಂಚಮಶಾಲಿ ಜಯಮೃತ್ಯುಂಜಯ ಸ್ವಾಮಿಗಳು, ಸಾಣೆಹಳ್ಳಿಯ ಪಂಡಿತಾರಾಧ್ಯ ಸ್ವಾಮಿಗಳು, ನಾಗನೂರು ಸಿದ್ಧರಾಮ ಸ್ವಾಮಿಗಳು, ಮಾತೆ ಅನ್ನಪೂರ್ಣ ತಾಯಿ, ಮಾತೆ ಮಹಾದೇವಿ ಮುಂತಾದವರು ಮಹಾಸಭೆಯ ಪರಿಭಾಷೆಯಾದ 'ಎಲ್ಲ ಸ್ವಾಮಿಗಳು' ಎಂಬ ನುಡಿಯಲ್ಲಿದ್ದಾರೆಯೇ? ಖಂಡಿತ ಇಲ್ಲ. ಲಿಂಗಾಯತರು ಮಹಾಸಭೆಯ ಹಿಂದೆ ಇಲ್ಲ. ಅದರ ನಿರ್ಣಯಗಳು ನಾಡಿನ ಲಿಂಗಾಯತರಿಗೆ ಸಮ್ಮತಿಯಿಲ್ಲ, ಉಳ್ಳವರು, ಒಡೆಯರು, ಬಲಾಢ್ಯರು, ವೀರಶೈವರು ಸೇರಿಕೊಂಡು ತಮಗೆ ತಾವು ಮಾಡಿಕೊಂಡ ನಿರ್ಣಯಗಳು ಅವು. ನಾಡಿನ ಲಿಂಗಾಯತರಿಗೂ ಮತ್ತು ಮುಖ್ಯಮಂತ್ರಿ ಅವರಿಗೆ ಬೆಂಬಲ ನೀಡಿದ ಮಹಾಸಭೆಯ ನಿರ್ಣಯಕ್ಕೂ ಸಂಬಂಧವಿಲ್ಲ.

ವೀರಶೈವವು ತನ್ನ ಪಟ್ಟಭದ್ರ ಪುರೋಹಿತಶಾಹಿ ನೀತಿಯನ್ನು ಮುಂದುವರಿಸುವ ಲಕ್ಷಣವನ್ನು ಅಧಿವೇಶನದಲ್ಲಿ ತೋರಿಸಿದೆ. ಈಗ ಅದು 'ವಿಶ್ವ ವೀರಶೈವ ಸಮ್ಮೇಳನ'ವನ್ನು ನಡೆಸಲು ಸಿದ್ಧವಾಗಿದೆ. ಈಗ ಲಿಂಗಾಯತರಿಗಿರುವ ಮಾರ್ಗ ಒಂದೇ. ಈ ಮಹಾಸಭೆಯನ್ನು ಬಹಿಷ್ಕರಿಸಬೇಕು. ಯಾವ ಕಾರಣಕ್ಕೂ ಮಹಾಸಭೆಯು ಲಿಂಗಾಯತ ಎಂಬ ನುಡಿಯನ್ನು ಬಳಸಕೂಡದು. ಏಕೆಂದರೆ ಅಭಾವೀಮ ಸಭೆಯು ಬಸವ ವಿರೋಧಿ-ಲಿಂಗಾಯತ ಸಂವಿಧಾನ ವಿರೋಧಿ ಸಂಘಟನೆಯಾಗಿದೆ. ಮಹಾಸಭೆಯ ಬಸವ ವಿರೋಧಿ ಮತ್ತು ವಚನ ಸಂಸ್ಕೃತಿ ವಿರೋಧಿ ನಿಲುವನ್ನು ಲಿಂಗಾಯತರು ಧಿಕ್ಕರಿಸಬೇಕು. ಲಿಂಗಾಯತ-ಬಸವ ತತ್ವವಾದಿ ಸ್ವಾಮಿಗಳನ್ನು ಮಾತ್ರ ಮನ್ನಿಸಬೇಕು. ಈ ಮಹಾಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಬೆಂಬಲ ನೀಡಿ ನಿರ್ಣಯ ಮಾಡಿದ ಸ್ವಾಮೀಜಿಗಳಿಗೆ ಮತ್ತು ಬಸವ ವಿರೋಧಿ ವೈದಿಕ ಸ್ವಾಮಿಗಳಿಗೆ ಯಾವ ಭಿನ್ನತೆಯೂ ಇಲ್ಲ. ಅಂದಮೇಲೆ ಲಿಂಗಾಯತರು ಅಂತಹ ಸ್ವಾಮಿಗಳನ್ನು ಒಪ್ಪಿಕೊಳ್ಳುವ ಅಗತ್ಯವಿಲ್ಲ. ಕೊನೆಯದಾಗಿ ಇಡೀ ಅಧಿವೇಶನದಲ್ಲಿ ವಚನಗಳಿಗೆ ಯಾರಾದರೂ ಮನ್ನಣೆ ನೀಡಿದರೆ ಎಂದರೆ ಉತ್ತರ ಇಲ್ಲ. ವಚನಗಳನ್ನು ಉಲ್ಲೇಖಿಸಕೂಡದೆಂದು ಯಡಿಯೂರಪ್ಪ ಮತ್ತು ಅವರ ಮಕ್ಕಳಿಗೆ ಆರ್‌ಎಸ್‌ಎಸ್ ನಿಯಮ ಮಾಡಿರುವಂತೆ ಕಾಣುತ್ತಿದೆ. ಅವರ ಮಕ್ಕಳು ಅಧಿವೇಶನದಲ್ಲಿ ಮಾತನಾಡುತ್ತಾ "ದೇಶದ ಒಗ್ಗಟ್ಟಿಗೆ ಧಕ್ಕೆ ಬಂದಿದೆ. ಅದರ ವಿರುದ್ಧ ನಾವು ನಮ್ಮ ಸಮುದಾಯವನ್ನು ಸಂಘಟಿಸಬೇಕು" ಎಂದು ಭಾಷಣ ಮಾಡಿದರು. ಅವರು ನೇರವಾಗಿ ಆರ್‌ಎಸ್‌ಎಸ್ ಕಚೇರಿಯಿಂದ ಸಭೆಗೆ ಬಂದು ಭಾಷಣ ಮಾಡಿದಂತೆ ಕಂಡುಬಂತು. ಈ ವೈದಿಕೀಕರಣಕ್ಕೆ ಕೊನೆ ಹಾಡಬೇಕು. ಇದಕ್ಕೆ ಒಂದೇ ಉತ್ತರ: ವೀರಶೈವವನ್ನು, ಅಭಾವೀಮ ಸಭೆಯನ್ನು, ಅದಕ್ಕೆ ಬೆಂಬಲವಾಗಿ ನಿಂತಿರುವವರನ್ನು ಲಿಂಗಾಯತರು ದೂರವಿರಿಸಬೇಕು. ಸಮಾನತೆ, ಕಾಯಕ, ಘನತೆಯಿಂದ ಕೂಡಿದ ಬದುಕು, ಮಹಿಳೆಯರಿಗೆ ಗೌರವ, ಸೌಹಾರ್ದತೆ, ವೈಚಾರಿಕತೆ, ವೈಜ್ಞಾನಿಕತೆ - ಇವು ನಮ್ಮ ಪ್ರಣಾಳಿಕೆಯ ಮೂಲ ದ್ರವ್ಯವಾಗಬೇಕು.

• ಡಾ.ಟಿ.ಆರ್.ಚಂದ್ರಶೇಖರ

ಲಿಂಗಾಯತರು ಯಾವುದೇ ಪಕ್ಷದ ಗುಲಾಮರಲ್ಲ



ಇದು ಖಂಡಿತವಾಗಿಯೂ ಯಡಿಯೂರಪ್ಪನವರಿಗಾಗಿ ಆಯೋಜಿಸಿರುವ ಸಮಾವೇಶವಲ್ಲ. ಇಲ್ಲಿ ಸಮಾವೇಶಗೊಂಡ ಇಡೀ ಲಿಂಗಾಯತ ಸಮುದಾಯ ಅವರ ಬೆಂಬಲಕ್ಕಿದೆ ಎಂಬುದರಲ್ಲೂ ಅರ್ಥವಿಲ್ಲ.

ಇಡೀ ಸಮುದಾಯ ಒಂದೆಡೆ ಸೇರಿ ಒಟ್ಟಾರೆ ಸ್ಥಿತಿಗತಿಗಳ ಬಗ್ಗೆ ಚರ್ಚಿಸುವ ಉದ್ದೇಶದಿಂದ ಅಧಿವೇಶನ ಕರೆಯುವ ಪರಿಪಾಠ ಬೆಳೆದುಕೊಂಡು ಬಂದಿದೆ. ಇದನ್ನೇ ಯಾರಾದರೂ ಸ್ವವಿಜೃಂಭಣೆಗೆ ಬಳಸಿಕೊಂಡರೆ ಅದಕ್ಕೆ ಸಂಘಟಕರು ಜವಾಬ್ದಾರರಲ್ಲ. ಅಷ್ಟಕ್ಕೂ ಲಿಂಗಾಯತ ಸಮುದಾಯ ಯಾವುದೇ ಒಬ್ಬ ವ್ಯಕ್ತಿಗೆ, ಪಕ್ಷಕ್ಕೆ ಗುಲಾಮತನ ಹೊಂದಿರುವಂಥದ್ದಲ್ಲ.

ಯಡಿಯೂರಪ್ಪನವರು, ವೀರಶೈವರು ಸಾಮೂಹಿಕವಾಗಿ ತನ್ನ ಬೆಂಬಲಕ್ಕಿದ್ದಾರೆಂದು ಹೇಳುವುದು, ಬಿಜೆಪಿ ಹೈಕಮಾಂಡ್ ಅದನ್ನು ನಂಬುವುದು ಸರಿಯಾದುದಲ್ಲ. ಹೈಕಮಾಂಡ್ ಮುಖ್ಯಸ್ಥರು ಕರ್ನಾಟಕದ ಲಿಂಗಾಯತರ ನಾಡಿ ಮಿಡಿತ ಅರಿಯುವ ಪ್ರಯತ್ನ ನಡೆಸಿದರೆ ಎಲ್ಲವೂ ಸ್ಪಷ್ಟವಾಗುತ್ತದೆ.

ತಪ್ಪನ್ನು ಯಡಿಯೂರಪ್ಪನವರು ಮಾಡಿದ್ದರೂ, ಯಾರೇ ಮಾಡಿದ್ದರೂ ತಕ್ಕ ಫಲ ಅನುಭವಿಸಬೇಕಾಗುತ್ತದೆ. ಉಪ್ಪು ತಿಂದೋನು ನೀರು ಕುಡಿಯಲೇಬೇಕು. ಎಲ್ಲದಕ್ಕೂ ಕಾಲವೇ ಉತ್ತರಿಸಲಿವೆ.

-ವಾಗೀಶ್ ಪ್ರಸಾದ್, ಪ್ರಧಾನ ಕಾರ್ಯದರ್ಶಿ, ವೀರಶೈವ ಮಹಾಸಭಾ



ಯಡ್ಡಿ ಕುರ್ಚಿ ಉಳಿಸುವ ಸಮಾವೇಶಕ್ಕೆ 30 ಕೋಟಿ!

• ಲಕ್ಷ್ಮಣ್ ಚೀರನಹಳ್ಳಿ

ಏಕೆಂದರೆ ಕರ್ನಾಟಕದಲ್ಲಿ ಯಾವುದೇ ಒಂದು ಜಾತಿಯ ಸಮಾವೇಶ ಇಷ್ಟು ಅದ್ದೂರಿಯಾಗಿ ನಡೆದಿರಲಿಲ್ಲ. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಮಠದಲ್ಲಿ ನಡೆದ ವೀರಶೈವ ಸಮುದಾಯದ 22ನೇ ಅಧಿವೇಶನವು ಬೇರೆ ಏನು ಸಾಧಿಸದಿದ್ದರೂ ಎರಡು ಮುಖ್ಯ ಸಂದೇಶಗಳನ್ನು ರಾಜ್ಯಕ್ಕೆ ಹಾಗು ದೆಹಲಿಗೆ ರವಾನಿಸಿದೆ. ಒಂದು: ಬಿಜೆಪಿ ಹೈಕಮಾಂಡ್ ಅಷ್ಟು ಸುಲಭಕ್ಕೆ ಯಡಿಯೂರಪ್ಪನನ್ನು ಸಿಎಂ ಕುರ್ಚಿಯಿಂದ ಇಳಿಸಲು ಸಾಧ್ಯವಿಲ್ಲ. ಎರಡು: ರಾಜ್ಯ ರಾಜಕಾರಣದಲ್ಲಿ ಅತ್ಯಂತ ನಿರ್ಲಜ್ಜೆಯಿಂದ ಪ್ರಬಲ ಜಾತಿಯೊಂದು ಧ್ರುವೀಕರಣಗೊಂಡು ಮಿಕ್ಕೆಲ್ಲರಿಗೆ ಎಚ್ಚರಿಕೆ ನೀಡಿದೆ.

ರಾಜಕೀಯ ಸಮಾವೇಶಗಳೇ ಥಂಡಾ!

ವೈಭವ, ರಾಜಕೀಯದಾಟಗಳ ದೃಷ್ಟಿಯಲ್ಲಿ ಈ ಸಮಾವೇಶ ಹಲವು ರಾಜಕೀಯ ಸಮಾವೇಶಗಳನ್ನು ಮೀರಿಸಿತ್ತು. ಅದೇರೀತಿ ಯಡಿಯೂರಪ್ಪನವರ ಹಿಂದೆ ವೀರಶೈವ ಸಮುದಾಯ ಇದೆ ಎಂದು ಬಿಂಬಿಸುವ ರಾಜಕೀಯ ಸಂದೇಶ ನೀಡುವಲ್ಲೂ ಇದು ರಾಜಕೀಯ ಸಮಾವೇಶಗಳನ್ನು ಹಿಂದೆ ಹಾಕಿತು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಲಿಂಗವಂತರಿಗೆ ಅವರವರ ಸ್ಥಾನಮಾನಗಳಿಗೆ ತಕ್ಕಂತ ವ್ಯವಸ್ಥೆ ಮಾಡಲಾಗಿತ್ತು. ಈ ಅಬ್ಬರದ ಸಮಾವೇಶಕ್ಕೆ ಏನಿಲ್ಲವೆಂದರೂ ಮುವತ್ತು ಕೋಟಿಗಳಷ್ಟು ವ್ಯಯಿಸಲಾಗಿದೆ. ಇದೆಲ್ಲಾ ಯಾರ ಹಣ ಎಂದು ಸಾಮಾನ್ಯ ವ್ಯಕ್ತಿಯನ್ನು ಕೇಳಿದರೂ ಇದು ಯಡ್ಡಿಯ ದುಡ್ಡು ಎಂದು ಯಾವುದೇ ಮುಲಾಜಿಲ್ಲದೆ ಹೇಳುತ್ತಾರೆ.

ಬಿಜೆಪಿ ಹೈಕಮಾಂಡ್ V/S ಯಡ್ಡಿ

ಯಡ್ಡಿಯ ಸಿಎಂ ಪಟ್ಟಕ್ಕೆ ಚಟ್ಟ ಸಿದ್ಧವಾಗುತ್ತಿರುವ ಹೊತ್ತಿನಲ್ಲೇ ಕಳೆದ 19 ವರ್ಷಗಳಿಂದ ನಡೆಯದಿದ್ದ ಅಖಿಲ ಭಾರತ ವೀರಶೈವ ಮಹಾಸಭಾದ ಅಧಿವೇಶನವು ಇದ್ದಕ್ಕಿದ್ದಂತೆ ಈಗ ಯಾಕೆ ನಡೆಯಿತು ಎಂಬ ಪ್ರಶ್ನೆಗೆ ಉತ್ತರ ಸುಲಭ. ಯಡ್ಡಿಯ ಮೇಲೆ ಬ್ರಹ್ಮಾಂಡ ಭ್ರಷ್ಟಾಚಾರದ ಆರೋಪಗಳು ಕೇಳಿಬರುತ್ತಿರುವ ಸಂದರ್ಭದಲ್ಲೇ ಈ ಮಹಾಧಿವೇಶನ ನಡೆದಿದೆ. ಮುಖ್ಯಮಂತ್ರಿ ಯಡಿಯೂರಪ್ಪನ ವಿರುದ್ಧ ಭ್ರಷ್ಟಾಚಾರದ ಆರೋಪಗಳು ಮತ್ತು ಭಿನ್ನಮತ ಹೆಚ್ಚಾಗಿದ್ದು ಆತನ ವಿರುದ್ಧ ಮಾಹಿತಿ ಪಡೆಯಲೋ, ಅಭಿಪ್ರಾಯವನ್ನು ಸಂಗ್ರಹಿಸಲೋ ರಾಜ್ಯಕ್ಕೆ ಬರುವ ಹೈಕಮಾಂಡ್‌ನ ಪ್ರತಿನಿಧಿಗಳನ್ನು ಬೆದರಿಸಲು ಯಡ್ಡಿ ಸಂದರ್ಭಕ್ಕೆ ತಕ್ಕಂತಹ ಹಲವಾರು ತಂತ್ರಗಳನ್ನ ಹೆಣೆಯುತ್ತಲೇ ತನ್ನ ಅಧಿಕಾರ ಉಳಿಸಿಕೊಳ್ಳುತ್ತಾ ಸಾಗಿದ್ದಾರೆ. ಅದೆಲ್ಲದರ ಮುಂದುವರೆದ ಭಾಗವಾಗಿಯೇ ಈ ಅಧಿವೇಶನ ಏರ್ಪಡಿಸಲಾಗಿತ್ತು ಮತ್ತು ಅದನ್ನು ಸಮರ್ಥವಾಗಿ ಬಳಸಿಕೊಂಡೂ ಆಗಿದೆ ಎಂಬುದರಲ್ಲಿ ಅನುಮಾನವಿಲ್ಲ.

ಲಂಪಟ ಸಚಿವ ರೇಣುಕಾಚಾರ್ಯ ಮತ್ತು ಭಟ್ಟಂಗಿ ಸಚಿವ ಸೋಮಣ್ಣ ಅವಕಾಶ ಸಿಕ್ಕಾಗಲೆಲ್ಲ ಸಮಾವೇಶದಲ್ಲಿ "ಇದು ರಾಜಕೀಯ ಸಭೆಯಲ್ಲ" ಎಂದು ಪದೇಪದೇ ಹೇಳುತ್ತಿದ್ದರಾದರೂ "ಯಡಿಯೂರಪ್ಪನನ್ನು ಬೆಂಬಲಿಸದಿದ್ದರೆ ರಾಜ್ಯದಲ್ಲಿ ಲಿಂಗಾಯತರಿಗೆ ಉಳಿಗಾಲವಿಲ್ಲ" ಎಂದೂ ಪದೇ ಪದೆ ಹೇಳುತ್ತಿದ್ದದ್ದು ಈ ಸಮಾವೇಶದ ಅಸಲಿ ಉದ್ದೇಶಕ್ಕೆ ಹಿಡಿದ ಕನ್ನಡಿಯಂತಿತ್ತು.

ಅಸಹ್ಯ ಜಾತಿರಾಜಕಾರಣ

ಸುತ್ತೂರಿನಲ್ಲಿ ನಡೆದ ಮಹಾಧಿವೇಶನವು ಪಕ್ಕಾ ಜಾತಿವಾದಿಗಳು ನಡೆಸಿದ ಜಾತಿ ಅಧಿವೇಶನವಾಗಿತ್ತು. ಮಾತ್ರವಲ್ಲ, ಇದೇ ಸಂದರ್ಭದಲ್ಲಿ ಕೊಳೆತು ನಾರುತ್ತಿದ್ದ ಜಾತಿವಾದವನ್ನ ವಿರೋಧಿಸಿದ್ದ ಬಸವಣ್ಣನನ್ನೂ ಬಳಸಿಕೊಂಡು ಅವರಿಗೂ ಅಪಚಾರ ಮಾಡಲಾಯಿತು. ಇದೆಲ್ಲದಕ್ಕೆ ತಕ್ಕಂತೆ ಕುಣಿದಿದ್ದು ಸುತ್ತೂರು ಮಠದ ದೇಶಿಕೇಂದ್ರ ಸ್ವಾಮಿ. ಅದರಲ್ಲಿ ಮೀಡಿಯೇಟರ್ ಆಗಿ ಕೆಲಸ ಮಾಡಿದ್ದು ಯಡ್ಡಿಯ ಪರಿಚಾರಕ ಕಾಪು ಸಿದ್ದಲಿಂಗಸ್ವಾಮಿ.

ಇವತ್ತು ಸಾವಿರಾರು ಬಡ, ಅಸಹಾಯಕ ಲಿಂಗಾಯತರು ಎದುರಿಸುತ್ತಿರುವ ಸಮಸ್ಯೆಗಳನ್ನು ಕಡೆಗಣಿಸಿದ ಸಮಾವೇಶ ಸ್ವಯಂಕೃತಾಪರಾಧದಿಂದಾಗಿ ಇಕ್ಕಟ್ಟಿನಲ್ಲಿ ಸಿಲುಕಿಕೊಂಡು ಆಪತ್ತನ್ನು ಎದುರಿಸುತ್ತಿರುವ ಯಡ್ಡಿಯನ್ನು ರಕ್ಷಿಸುವುದೇ ತಮ್ಮ ಸಮುದಾಯದ ಪರಮ ಕರ್ತವ್ಯ ಎಂದು ಸ್ವಾಮೀಜಿಗಳು ದುರ್ಬೋಧನೆ ಮಾಡುವ ಸ್ಥಿತಿಗೆ ಇಳಿದಿದ್ದಾರೆಂದರೆ ಇದಕ್ಕೆ ಏನನ್ನಬೇಕು?

ಇದ್ದುದರಲ್ಲಿ ಪ್ರಗತಿಪರವಾಗಿ ಮಾತನಾಡುವ ಮುರುಘರಾಜೇಂದ್ರ ಸ್ವಾಮಿಯಂಥವರೂ ಇಂತಹ ಸಮಾವೇಶಗಳಲ್ಲಿ ಭಾಗವಹಿಸುತ್ತಾರೆಂದರೆ ಇದಕ್ಕಿಂತ



ವಿಪರ್ಯಾಸ ಬೇರೊಂದಿಲ್ಲ. ಕೇರಳ ರಾಜ್ಯ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಳೀಮಠ್ ಎಂಬ ಮನುಷ್ಯ ತಾನು ನ್ಯಾಯಮೂರ್ತಿ ಆಗಿದ್ದವ ಅನ್ನುವುದನ್ನೇ ಮರೆತು ಪಕ್ಕಾ ಜಾತಿವಾದಿಯಾಗಿ ಮಾತನಾಡಿದ್ದು ಹೇಸಿಗೆ ಹುಟ್ಟಿಸುವಂತಿತ್ತು.

ಈ ಮಟ್ಟದಲ್ಲಿ ಜಾತಿ ಧ್ರುವೀಕರಣ ಕರ್ನಾಟಕದಲ್ಲಿ ಹಿಂದೆಂದೂ ನಡೆದಿರಲಿಲ್ಲ. ಇಂತಹ ಕುಖ್ಯಾತ ಪ್ರವೃತ್ತಿಗೆ ನಾಂದಿ ಹಾಡಿದ್ದು ಯಡ್ಡಿಯ ನಾಲಾಯಕತನಕ್ಕೆ ಹೇಳಿಮಾಡಿಸಿದಂತಿತ್ತು.

ಭ್ರಷ್ಟ ಯಡ್ಡಿಯ ದುಷ್ಟ ಆಸೆ

ತನ್ನ ಕುರ್ಚಿಯ ಉಳಿವಿಗಾಗಿ ಮಾಡಿಕೊಂಡ ಈ ಸಮಾವೇಶದಲ್ಲಿ ಯಡ್ಡಿ ತನ್ನ ಬಗ್ಗೆ ಮಾತನಾಡದೇ ಇನ್ನಾವುದರ ಬಗ್ಗೆ ಮಾತಾಡಬಲ್ಲ? ಉದ್ಘಾಟನಾ ಕಾರ್ಯಕ್ರಮದಿಂದ ಮೊದಲ್ಗೊಂಡು ಸಮಾರೋಪ ಕಾರ್ಯಕ್ರಮದವರೆಗೂ "ನಾನು ಲಿಂಗಾಯತ, ಅದಕ್ಕಾಗಿಯೇ ನನ್ನನ್ನು ಸಿಎಂ ಕುರ್ಚಿಯಿಂದ ಕೆಳಗಿಳಿಸುತ್ತಿದ್ದಾರೆ" ಎಂದು ಬಿಂಬಿಸಿಕೊಳ್ಳಲು ಹರಸಾಹಸಪಟ್ಟರು. ತೀರಾ ಅಸಹ್ಯವೆನಿಸುವ ಮಟ್ಟಕ್ಕೆ ಇಳಿದು ಮಾತನಾಡಿದ್ದು ಯಡವಟ್ಟು ಯಡ್ಡಿಯ ಹತಾಶೆಯನ್ನ ತೋರುತ್ತಿತ್ತು.

ಯಡ್ಡಿಯ ಭ್ರಷ್ಟಾಚಾರಗಳು ಮಾಧ್ಯಮಗಳಲ್ಲಿ ರಾರಾಜಿಸಿದಾಗ, ವಿರೋಧ ಪಕ್ಷಗಳು ಆತನ ರಾಜೀನಾಮೆ ಒತ್ತಾಯಿಸಿದಾಗಲೆಲ್ಲ "ಕರ್ನಾಟಕದ 6 ಕೋಟಿ ಜನರು ನನ್ನನ್ನ ಬೆಂಬಲಿಸುತ್ತಿದ್ದಾರೆ, ಇವರೆಲ್ಲರ ಶ್ರೀರಕ್ಷೆ ನನಗಿದೆ" ಎಂದು ಬೊಬ್ಬೆ ಹೊಡೆಯುತ್ತಿದ್ದ ಯಡ್ಡಿ ಸುತ್ತೂರು ಸಮಾವೇಶದಲ್ಲಿ "ವೀರಶೈವ ಸಮಾಜ ನನ್ನ ಬೆನ್ನಿಗೆ ಬರಲಿ, ಇಲ್ಲದಿದ್ದರೆ ಲಿಂಗಾಯತರಿಗೆ ಉಳಿಗಾಲವಿಲ್ಲ. ಇನ್ನು ಮುಂದೆ ಇನ್ನೂ ಅಭಿವೃದ್ಧಿ ಮಾಡುತ್ತೇನೆ" ಎಂದು ಯಡ್ಡಿ ಪದೇಪದೇ ಹೇಳುತ್ತಿದ್ದುದು ಆತನ ದುಷ್ಟತನವನ್ನು ಸೂಚಿಸುತ್ತಿದ್ದವಲ್ಲದೆ, ಇಡೀ ಲಿಂಗಾಯತ ಸಮುದಾಯವನ್ನು ತನ್ನ ಭ್ರಷ್ಟಾಚಾರಕ್ಕೆ ಬೆನ್ನೆಲುಬಾಗಿ ಬಳಸಿಕೊಳ್ಳುವ ಕುತಂತ್ರದ ಮಾತುಗಳಾಗಿದ್ದವು. ಇದ್ಯಾವುದೂ ಅಲ್ಲಿದ್ದ ಸ್ವಾಮಿಗಳಿಗಾಗಲಿ, ವೀರಶೈವರಿಗಾಗಲಿ ಅರ್ಥವಾಗದ ವಿಷಯಗಳಾಗಿರಲಿಲ್ಲ. ಬದಲಾಗಿ ಅವರೆಲ್ಲರೂ ಯಡ್ಡಿಯ ದುಷ್ಟತನದಲ್ಲಿ ಭಾಗಿಯಾಗುವ ಹಂಬಲ ಹೊಂದಿದ್ದವರೇ ಆಗಿದ್ದರು ಎಂದರೆ ತಪ್ಪಾಗಲಾರದು.

ಮಾನಗೇಡಿ ಸ್ವಾಮಿಗಳು- ತಿಳಿಗೇಡಿ ಸಾಹಿತಿಗಳು

ದಿಕ್ಕುತಪ್ಪುತ್ತಿರುವ ಸಮಾಜವನ್ನು ತಿದ್ದಿ, ಸಮಾಜಕ್ಕೆ ತಿಳಿವಳಿಕೆ ಹೇಳಿ ಮಾದರಿಯಾಗಬೇಕಾಗಿದ್ದ ಸ್ವಾಮೀಜಿಗಳು ಸ್ವತಃ ಜಾತಿವಾದಿಗಳಾಗಿ, ತಮ್ಮ ಜಾತಿಯವನ ಭ್ರಷ್ಟಾಚಾರವನ್ನು ಬೆಂಬಲಿಸುವ ಮಟ್ಟಕ್ಕೆ ಇಳಿದದ್ದು ಅಸಹ್ಯದ ಸಂಗತಿ. "ಸಿಎಂ ಯಡಿಯೂರಪ್ಪನವರೇ, ತಾವು ಇನ್ಮುಂದೆ ನಿರ್ಭೀತಿಯಿಂದ ಉಳಿಕೆ ಎರಡು ವರ್ಷವನ್ನ ಪೂರೈಸಿ. ನಿಮ್ಮ ಬೆಂಬಲಕ್ಕೆ ಇಡೀ ವೀರಶೈವ ಮಠಾಧಿಪತಿಗಳಾದ ನಾವಿದ್ದೇವೆ" ಎಂದು ಬಹಿರಂಗವಾಗಿ ಚನ್ನಸಿದ್ದರಾಮ ಪಂಡಿತಾರಾಧ್ಯ ಎಂಬ ಸ್ವಾಮಿ ಹೇಳುತ್ತಾರೆಂದರೆ, ಇದಕ್ಕೆ ವೇದಿಕೆಯಲ್ಲಿದ್ದ ಹೊಸಪೇಟೆಯ ಸಂಗನಬಸವ ಸ್ವಾಮೀಜಿ, ಸುತ್ತೂರು ದೇಶಿಕೇಂದ್ರ ಸ್ವಾಮಿಜಿಗಳು ಸಹಮತ ವ್ಯಕ್ತಪಡಿಸಿ ಮಾತನಾಡುತ್ತಾರೆಂದರೆ ಲಿಂಗಾಯತ ಸ್ವಾಮೀಜಿಗಳು ಯಾವ ಲಜ್ಜೆಗೇಡಿ ಮಟ್ಟಕ್ಕೆ ಇಳಿದಿದ್ದಾರೆ ಎಂಬುದನ್ನು ತೋರುತ್ತದೆ.

ತನ್ನ ಅಲುಗಾಡುತ್ತಿರುವ ಕುರ್ಚಿಯನ್ನ ಉಳಿಸಿಕೊಳ್ಳಲು ಯಡ್ಡಿ ಈ ಸಮಾವೇಶಕ್ಕೆ 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು ಸ್ವಾಮಿಗಳು ಪಾತಾಳ ಸ್ಥಿತಿತಲುಪಲೂ ಕಾರಣವಾಗಿದ್ದಿರಬಹುದು. ಅಲ್ಲಿದ್ದ ಬಹುತೇಕ ಕಪಟ ಸ್ವಾಮಿಗಳಿಗೆ ತಮಗೆ ಬೇಕಾದಷ್ಟು ಹಣವನ್ನ ಬಜೆಟ್‌ನಲ್ಲೇ ಪಡೆಯುವ ದೂರಾಲೋಚನೆಯೂ ಇದ್ದಿರಬಹುದು. ಇದು ಬಸವಣ್ಣನಿಗೆ ಮಾಡಿದ ಅಪಚಾರ ಮತ್ತು ದ್ರೋಹವಲ್ಲದೇ ಮತ್ತೇನು?

ಇನ್ನು ಬಿಡುವಾದಾಗಲೆಲ್ಲ ಪ್ರಗತಿಪರತೆಯ ನಾಟಕವಾಡುವ ಬರಹಗಾರರು ಮತ್ತು ಸಾಹಿತಿಗಳು ಈ ಜಾತಿ ಸಮಾವೇಶದಲ್ಲಿ ಭಾಗವಹಿಸಿ ಕವಿತೆಗಿವಿತೆ ವಾಚಿಸಿ ತಾವು ಎಂತಹವರು ಎಂಬುವುದನ್ನ ನಿರೂಪಿಸಿಕೊಂಡಿದ್ದಾರೆ. ಜಾತಿಯ ಗಡಿಗಳನ್ನ ಮೀರಬೇಕಿದ್ದ ಸಾಹಿತಿಗಳು ಲಿಂಗಾಯತ ಅಧಿವೇಶನದಲ್ಲಿ ಬಂದು ಕವಿತೆ ವಾಚಿಸುತ್ತಾರೆಂದರೆ ಇವರ ಮೆದುಳಿನಲ್ಲಿ ಏನಿದೆ?

ನಾಡು ಕಂಡ ಉತ್ತಮ ಸಾಹಿತಿಗಳೂ, ಜಾತ್ಯತೀತರೂ ಆದ ಪಿ.ಲಂಕೇಶ್, ಜಿ.ಎಸ್.ಶಿವರುದ್ರಪ್ಪ, ಎಲ್.ಬಸವರಾಜು, ಡಾ. ಎಂ.ಎಂ.ಕಲಬುರ್ಗಿ ತರಹದವರ ಫೋಟೋಗಳನ್ನು ಲಿಂಗಾಯತ ಸಾಹಿತಿ-ಬರಹಗಾರರ ಕಂಪಾರ್ಟ್‌ಮೆಂಟ್‌ಗಳಲ್ಲಿ ದುರ್ಬಳಕೆ ಮಾಡಿಕೊಂಡಿದ್ದನ್ನು ಯಾರೂ ವಿರೋಧಿಸಲಿಲ್ಲ ಎಂದರೆ ಏನನ್ನಬೇಕು?



ಸಿದ್ದಲಿಂಗಸ್ವಾಮಿಯ ದರ್ಬಾರು

ವರುಣಾ ಕ್ಷೇತ್ರದ ಮುಂದಿನ ಶಾಸಕನಾಗಲು ಹೊರಟಿರುವ ಯಡ್ಡಿಯ ಪರಿಚಾರಕ ಕಾಪು ಸಿದ್ದಲಿಂಗಸ್ವಾಮಿಯ ದರ್ಬಾರು ಸುತ್ತೂರು ಸಮಾವೇಶದಲ್ಲಿ ಎದ್ದು ಕಾಣುತ್ತಿತ್ತು. ಯಡ್ಡಿಯ ಜೊತೆ ವಿಭೂತಿದಾರಿ ಕಾಪು ತನ್ನ ಚಿತ್ರವಿದ್ದ ನೂರಾರು ಕಟೌಟ್‌ಗಳನ್ನು ಸುತ್ತೂರಿನ ಎಲ್ಲಾ ದಿಕ್ಕುಗಳಲ್ಲಿಯೂ ನಿಲ್ಲಿಸಿದ್ದ. ಲಿಂಗಾಯತ ಯುವಕರಿಗೆ ಸಾವಿರಾರು ಟಿ ಶರ್ಟ್‌ಗಳನ್ನ ಹಾಕಿಸಿ ತನ್ನ ಮೂತಿ ಎಲ್ಲೆಲ್ಲೂ ಮಿಂಚುವಂತೆ ನೋಡಿಕೊಂಡಿದ್ದ. ಲಿಂಗಾಯತ ಶಾಸಕರು ಮತ್ತು ಮಂತ್ರಿ ಮಹೋದಯರುಗಳೆಲ್ಲರಿಗೂ ಡಾರ್ಲಿಂಗ್‌ನಂತೆ ವರ್ತಿಸುತ್ತಿದ್ದ.

ಯಡ್ಡಿಗೆ ಸುತ್ತೂರಿನಲ್ಲಿ ಈ ಕಾರ್ಯಕ್ರಮವನ್ನ ನಡೆಸಲು ಐಡಿಯಾ ಕೊಟ್ಟಿದ್ದೇ ಈತನಂತೆ. ಅಧಿವೇಶನಕ್ಕೆ ತಗುಲುವ ಎಲ್ಲಾ ವೆಚ್ಚಕ್ಕಾಗಿ ಯಡ್ಡಿ ಕೊಟ್ಟ 30 ಕೋಟಿಗಳನ್ನ ಈತನೇ ಮುಂದೆ ನಿಂತು ವಿಲೇವಾರಿ ಮಾಡಿದ್ದಾನಂತೆ. ಯಡ್ಡಿಯ ಬಾಲಬಡುಕ ಕಾಪು ಮುಂದಿನ ಚುನಾವಣೆಯಲ್ಲಿ ವರುಣಾ ಕ್ಷೇತ್ರದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನನ್ನು ಸೋಲಿಸಿ ತಾನೇ ಎಮ್ಮೆಲ್ಲೆಯಾಗಲು ಈ ಛಾನ್ಸನ್ನು ಬಳಸಿಕೊಂಡು ಮೆರೆದಾಡಿದ್ದು ಎಲ್ಲರಿಗೂ ಕಂಡು ಅಸಹ್ಯಪಡುವಂತೆ ಮಾಡಿತು.

ಶೋಭಕ್ಕ-ಯಡ್ಡಿ ನಡುವೆ ಕಬೂತರ್ ಕಾಪು!



ಇಡೀ ಸಮಾವೇಶದಲ್ಲಿ ವೇದಿಕೆಯ ಮೇಲಿದ್ದ ಏಕೈಕ ಲಿಂಗಾಯತೇತರ ವ್ಯಕ್ತಿಯೆಂದರೆ ಅದು ಶೋಭಾ ಕರಂದ್ಲಾಜೆ! ಈಯಮ್ಮ ಲಿಂಗಾಯತರ ಸಮಾವೇಶಕ್ಕೆ ಯಾಕೆ ಬಂದಿದ್ದಳೋ ಆ ಯಡ್ಡಿಯೇ ಬಲ್ಲ! ಆದರೆ ಒಂದೇ ವೇದಿಕೆಯ ಮೇಲಿದ್ದ ಯಡ್ಡಿ ಮತ್ತು ಶೋಭಕ್ಕನ ನಡುವೆ ಪತ್ರ ರವಾನೆಯ ವಾಹಕ ಪಾರಿವಾಳದಂತೆ (ಕಬೂತರ್) ಕೆಲಸ ಮಾಡುತ್ತಿದ್ದುದು ಕಾಪು ಸಿದ್ದಲಿಂಗಸ್ವಾಮಿ. ಈ ಕಬೂತರ್ ಕಾಪುಸಿಯ ಈ ಕಾರ್ಯವನ್ನ ನೋಡುತ್ತಿದ್ದ ಸಾವಿರಾರು ಲಿಂಗಾಯತರು ಅಸಹ್ಯಪಟ್ಟುಕೊಂಡಿದ್ದು ಸುಳ್ಳಲ್ಲ.

ವಿಷಯ ಏನಪ್ಪ ಅಂದ್ರೆ ಯಡ್ಡಿಗೆ ಏನನ್ನಾದರೂ ತಿಳಿಸಬೇಕೆಂದಿದ್ದರೆ ಶೋಭಕ್ಕ ಅದನ್ನು ಪತ್ರದಲ್ಲಿ ಬರೆದು ಕಬೂತರ್ ಕಾಪುಸಿಗೆ ಕೊಡುತ್ತಿದ್ದಳು. ಈ ಕಾಪುಸಿ ಅದನ್ನು ಯಡ್ಡಿಗೆ ತಲುಪಿಸುತ್ತಿದ್ದ. ಯಡ್ಡಿ ಬರೆದುಕೊಡುತ್ತಿದ್ದ ಉತ್ತರವನ್ನೂ ಶೋಭಕ್ಕನಿಗೆ ತಲುಪಿಸಿ ಧನ್ಯನಾಗುತ್ತಿದ್ದ.

ಈ ಕಾರ್ಯ ನಾಲ್ಕಾರು ಬಾರಿ ನಡೆಯಿತು. ವೇದಿಕೆಯ ಮುಂದಿದ್ದ ಜನರು 'ಯಡ್ಡಿ ಮತ್ತು ಶೋಭಕ್ಕನ ಪತ್ರ ವ್ಯವಹಾರ ಇಲ್ಲಿಯೂ ಮುಂದುವರೆಯಿತೇ' ಎಂದು ಮಾತನಾಡಿಕೊಳ್ಳುತ್ತಿದ್ದರು. ಕೊನೆಗೆ ಸುತ್ತೂರು ಸ್ವಾಮಿಗೆ ಶಿಫಾರಸ್ಸು ಮಾಡಿ ಶೋಭಕ್ಕನಿಗೆ ಸನ್ಮಾನವನ್ನೂ ಸಹ ಮಾಡಿಸಿದ್ದು ಇದೇ ಕಾಪುಸಿ.

ಈ ಸ್ವಾಮಿಯ ಸ್ವಾಮಿನಿಷ್ಠೆ ಎಂತಹದ್ದು ನೋಡಿ!!

...ತ್ತೂರು ಸುತ್ತಮುತ್ತ ಅಸ್ಪೃಶ್ಯತೆ

...ಶೈವರ ಈ ಅಧಿವೇಶನವು ನಾಡಿನಲ್ಲಿ ಅಸ್ಪೃಶ್ಯತೆಯನ್ನ ...ಡಿಸಲು ಮತ್ತು ಗೋಹತ್ಯೆ ನಿಷೇಧವನ್ನು ಜಾರಿಗೆ ... ನಿರ್ಣಯಗಳನ್ನು ಕೈಗೊಂಡಿದೆ. ಇದಕ್ಕೆ ಕಾರಣ ...ಎಸ್‌ನ ಚಡ್ಡಿ ನಾಯಕ ಮೈ.ಚ.ಜಯದೇವ್‌ನ ... ಸಲಹೆ.

... ಮೈ.ಚ.ಜಯದೇವನಿಗೆ ಮೂಲ ಲಿಂಗಾಯತರು ... ಅವರ ಆಹಾರ ಮತ್ತು ಜೀವನಕ್ರಮ ಎಂತಹದ್ದು ...ವರ ಬಗ್ಗೆ ಪರಿಜ್ಞಾನವೇ ಇಲ್ಲ. ತಮ್ಮ ಮನೆ, ... ಹೊಲಗಳಲ್ಲಿ ಜಾನುವಾರುಗಳನ್ನು ಸಾಕಿಕೊಂಡಿರುವ ... ವೀರಶೈವರು ಗೊಡ್ಡು ದನಗಳನ್ನು ಮಾರದೆ ... ಸಾಧ್ಯವಿಲ್ಲ ಎಂಬುದರ ಅರಿವೂ ಈತನಿಗಿಲ್ಲ. ...ಗೋಹತ್ಯೆ ನಿಷೇಧ ನಮ್ಮ ರಾಜ್ಯದಲ್ಲಿಯೂ ಜಾರಿಗೆ ...ಕು, ಇದನ್ನ ತಡೆ ಹಿಡಿದಿರುವ ಕೇಂದ್ರ ಸರ್ಕಾರದ ... ಹೋರಾಡಬೇಕು ಅಂತೆಲ್ಲ ವರಳಾಡಿದ್ದಾನೆ ಈ ...ನಾಯಕ.

...ನ್ನು ಅಸ್ಪೃಶ್ಯತೆ ವಿಚಾರಕ್ಕೆ ಬಂದರೆ ಈ ಅಧಿವೇಶನ ... ಸುತ್ತೂರಿನ ಸುತ್ತಮುತ್ತಲೇ ಇನ್ನೂ ಅಸ್ಪೃಶ್ಯತೆ ...ತವಾಗಿದೆ. ಇದೇ ಊರಿನ ದಲಿತರನ್ನ ವಿಚಾರಿಸಿದರೆ ...ು ಸಾಮಿಗಳ ಬಣ್ಣ ಬಯಲಾಗುತ್ತದೆ. ಇಲ್ಲಿನ ... ಮತ್ತು ನಾಯಕ ಸಮುದಾಯಗಳ ಮನೆಗಳು, ... ಹೀನಾಯಸ್ಥಿತಿಯಲ್ಲಿವೆ. ಆದರೆ ಸ್ವಾಮೀಜಿಯ ...ಮುವರ ಮತ್ತು ಹತ್ತಿರದ ಸಂಬಂಧಿಕರ ಬಂಗಲೆಗಳು, ...ಮುತರ ಬೀದಿಗಳ ರಸ್ತೆಗಳು ಅದ್ದೂರಿಯಾಗಿವೆ.


...ತ್ತೀಚೆಗೆ ಮೈಸೂರು ಜಿಲ್ಲೆಯಲ್ಲಿ ಹತ್ತಕ್ಕೂ ಹೆಚ್ಚು ... ಮೇಲಿನ ದೌರ್ಜನ್ಯ ಮತ್ತು ಬಹಿಷ್ಕಾರದ ...ಗಳು ನಡೆದಿದ್ದರೂ ಸೊಲ್ಲೆತ್ತದವರು, ಸ್ವತಃ ಲಿಂಗಾಯತ ...ದಾಯವೇ ಬಹಿರಂಗವಾಗಿ ಅಸ್ಪೃಶ್ಯತೆಯನ್ನ ...ಸುತ್ತಿದ್ದರೂ ಸುಮ್ಮನಿರುವವರು ಅಸ್ಪೃಶ್ಯತೆಯನ್ನು ಹೇಗೆ ...ಮಾಡುತ್ತಾರೋ ಆ ಕೂಡಲ ಸಂಗಮ ದೇವನೇ ...

...ಪ್ಪಾರೆಯಾಗಿ ಯಡ್ಡಿಯ 30 ಕೋಟಿಯ ಹಣಕ್ಕೆ ...ಫಲವನ್ನು ಲಿಂಗಾಯತ ಸ್ವಾಮೀಜಿಗಳು ನೀಡಿದ್ದಾರೆ. ...ಮೂಲಕ ಯಡ್ಡಿ ಒಂದೇ ಏಟಿಗೆ ಹಲವು ಲಾಭಗಳನ್ನು ...ಕೊಂಡಾಗಿದೆ. ಕರ್ನಾಟಕ ಕಂಡ ಕಡುಭ್ರಷ್ಟ ...ಮಂತ್ರಿ ವೀರಶೈವರ ಹೆಸರಲ್ಲಿ ತನ್ನೆಲ್ಲ ಹುಳುಕುಗಳನ್ನು ...ಕೊಂಡಿದ್ದಾನೆ.

...ವನ್ನೆಲ್ಲ ಕಂಡು ಕ್ರಾಂತಿಕಾರಿ ಕಾಯಕ ಯೋಗಿ ...ಣ್ಣನವರ ಆತ್ಮ ನಿಜವಾಗಿಯೂ ಒದ್ದಾಡುತ್ತಿರಬಹುದು!

...ಕೈಕ ಬಂಡಾಯಗಾರ ...ಯತ್ನಾಳ್

...ಸಮಾವೇಶದಲ್ಲಿ ಖಡಕ್ಕಾಗಿ ಮಾತನಾಡಿದ್ದು ... ಕೇಂದ್ರ ಸಚಿವ, ಹಾಲಿ ಜೆಡಿಎಸ್ ಮುಖಂಡ ...ಗೌಡ ಪಾಟೀಲ್ ಯತ್ನಾಳ್ ಮಾತ್ರ. ಈತ ... ಸಾವಿರಾರು ಲಿಂಗಾಯತರ ಎದುರಿಗೆ ...ನ್ನ ಜಾಡಿಸಿದರು. "ಭ್ರಷ್ಟಾಚಾರಿಗಳು, ...ರು ನಮ್ಮ ಸಮುದಾಯದವನಾಗಲಿ, ಯಾವುದೇ ...ದಾಯದವನೇ ಆಗಲೀ ಅಂಥವರ ಬೆಂಬಲಕ್ಕೆ ...ಯತ ಸಮುದಾಯವಾಗಲೀ, ಲಿಂಗಾಯತ



ಸ್ವಾಮೀಜಿಗಳಾಗಲೀ ನಿಲ್ಲಬಾರದು. ಅಂಥವರು ನಮ್ಮ ಸಮುದಾಯದ ಹೆಸರನ್ನ ಹಾಳುಮಾಡುವ ದುರುಳರು" ಎಂದು ಯತ್ನಾಳ್ ಯಡ್ಡಿಗೆ ಸಖತ್ತಾಗೆ ಚಾರ್ಜ್ ಮಾಡಿದರು. ಜೊತೆಗೆ "ಭ್ರಷ್ಟರ ಪರ ನಿರ್ಣಯವಾಗಬಾರದು. ನಮ್ಮ ...ದಾಯದ ಬಗ್ಗೆ ಸಮಾಜದಲ್ಲಿ ಗೌರವ ಮೂಡುವಂತಹ ...ಣಯಗಳನ್ನ ಮಾಡಿ" ಎಂದು ಮಹಾಸಭಾದ ಅಧ್ಯಕ್ಷ ...ಣ್ಣ ಖಂಡ್ರೆಗೆ ಎಚ್ಚರಿಕೆ ಕೊಟ್ಟು ಬಂಡಾಯದ ಬಾವುಟ ...ದರು.

...ತರ ಮೈಸೂರಿಗೆ ಬಂದು ಪತ್ರಿಕಾಗೋಷ್ಠಿ ನಡೆಸಿ ...ಮಹಾಧಿವೇಶನವು ಮಹಾ ಭ್ರಷ್ಟ ಯಡ್ಡಿಯ ಪರವಾದ ...ಣಯಗಳನ್ನು ಮಾಡಿದರೆ ಅಖಿಲ ಭಾರತ ವೀರಶೈವ ...ಸಭಾವನ್ನು ಒಡೆದು ಪರ್ಯಾಯ ಸಂಘಟನೆಯನ್ನ ...ಟ್ಟುವೆ" ಎಂದೂ ಎಚ್ಚರಿಸಿದರು ಯತ್ನಾಳ್.

...ದು ಒಂದಷ್ಟು ಲಿಂಗಾಯತರಿಗೆ ಸರಿಯೂ ಎನಿಸಿತು. ... ಹಾಗೆ ಯತ್ನಾಳ್ ವಿಲನ್ ಆಗಿ ಇಲ್ಲಿಯೂ ...ರು. ಆದರೀಗ ಅಧಿವೇಶನದಲ್ಲಿ ಯಡ್ಡಿಯ ಪರ ...ಣಯಗಳನ್ನು ತೆಗೆದುಕೊಂಡಿದ್ದಾಗಿದೆ. ...ಗ ಯತ್ನಾಳ್ ಹಾರಿಸಿದ್ದ ಬಂಡಾಯದ ಬಾವುಟ ...ರಾಗುತ್ತದೆಯೇ?

ರಾಜ್ಯ ಕಂಡ ಕಡುಭ್ರಷ್ಟ ಮುಖ್ಯಮಂತ್ರಿ ಯಡಿಯೂರಪ್ಪನ ರಕ್ಷಣೆಗೆ ನಿಂತಿರುವ ಕೆಲವು ಲಿಂಗಾಯತ-ಮಠಾಧೀಶರ ಅಸಲಿ ಉದ್ದೇಶ ಏನಿರಬಹುದು?

ಸ್ವಜಾತಿ ಪ್ರೇಮ?

ಇದು ಸ್ವಲ್ಪಮಟ್ಟಿಗೆ ನಿಜ ಹೌದು. ಆದರೆ ಕೇವಲ ಸ್ವಜಾತಿ ಪ್ರೇಮವೊಂದೇ ಇದರ ಹಿಂದಿಲ್ಲ. ಅದರ ಜೊತೆಯಾಗಿ ಈ ಮಠಾಧೀಶರ ಕೋಟ್ಯಾಂತರ ರೂಪಾಯಿಗಳ ದಂಧೆಗಳೂ ಕೂಡ ತಳುಕು ಹಾಕಿಕೊಂಡಿವೆ. 'ನೀ ನನಗಿದ್ದರೆ ನಾ ನಿನಗೆ' ಎನ್ನುವಂತೆ ಮುಖ್ಯಮಂತ್ರಿಯ ಅಧಿಕಾರ ಹಿಡಿದಿರುವ ಯಡ್ಡಿಯನ್ನು ಬಳಸಿಕೊಂಡು ತಮ್ಮ ಶಿಕ್ಷಣ ವ್ಯಾಪಾರ, ರಿಯಲ್ ಎಸ್ಟೇಟ್ ಡೀಲ್‌ಗಳು ಹಾಗೂ ಕಪ್ಪುಹಣದ ನಿರ್ವಹಣೆಯನ್ನು ಈ ಮಠಾಧೀಶರು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಯಡ್ಡಿ ತನ್ನ ಅಧಿಕಾರ ಉಳಿಸಿಕೊಳ್ಳಲು ಈ ಮಠಾಧೀಶರ ಬೆಂಬಲ ಪಡೆಯುತ್ತಿದ್ದಾರೆ. ಇವರಿಬ್ಬರ give & take ದಂಧೆಗಾಗಿ 'ಲಿಂಗಾಯತ ಜಾತಿ' ಕಾರ್ಡನ್ನು ಹಾಗೂ ಅಮಾಯಕ ಲಿಂಗಾಯತರಲ್ಲಿ ಜಾತಿ ಭಾವನೆಯನ್ನು ಬಡಿದೆಬ್ಬಿಸಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

ತನ್ನ ಅಧಿಕಾರಕ್ಕೆ ಕುತ್ತು ಬಂದಾಗೆಲ್ಲಾ ಅದು ರಾಜ್ಯದ ಸಮಸ್ತ ಲಿಂಗಾಯತರ ವಿರುದ್ಧ ನಡೆಯುತ್ತಿರುವ ಪಿತೂರಿಯೆಂಬಂತೆ, ಲಿಂಗಾಯತ ಜನಕೋಟಿಗೆ ಆಗುತ್ತಿರುವ ಅನ್ಯಾಯವೆಂಬಂತೆ ಈ ಯಡ್ಡಿ ಚೀರಿಕೊಂಡರೆ ಸುತ್ತೂರು, ಸಿರಿಗೆರೆ, ಸಿದ್ದಗಂಗಾ ಮಠಾಧೀಶರು 'ಹೌದೌದೆನ್ನುವಂತೆ' ತಲೆ ಆಡಿಸುತ್ತಿದ್ದಾರೆ. ಇದೀಗ ಬಿಜೆಪಿ ಹೈಕಮಾಂಡ್ ಅನ್ನು ಬ್ಲಾಕ್‌ಮೇಲ್ ಮಾಡುವ ಹಂತಕ್ಕೆ ಹೋಗಿದೆ.

ಕಳೆದ ಮೂರ್ನಾಲ್ಕು ದಶಕಗಳಿಂದ ಕೇವಲ ರಾಜಕಾರಣಿಯಾಗಿದ್ದ ಯಡ್ಡಿ ಇತ್ತೀಚಿನ ಆರೆಂಟು ವರ್ಷಗಳಲ್ಲಿ ಉದ್ಯಮಪತಿಯಾಗಿಯೂ ಬೆಳೆದಿದ್ದಾರೆ. ಯಡ್ಡಿ ಅಂಡ್ ಸನ್ಸ್ ಈಗ ತಮಗೆ ಸಿಕ್ಕಿರುವ ರಾಜಕೀಯ ಅಧಿಕಾರವನ್ನು ಹಣ ಮಾಡುವ ಉದ್ಯಮವನ್ನಾಗಿ ಬದಲಿಸುತ್ತಿದ್ದಾರೆ. ಈ ದಂಧೆಯಲ್ಲಿ ರಾಜ್ಯದ ಕೆಲವು ಲಿಂಗಾಯತ ಮಠಾಧೀಶರು, ಲಿಂಗಾಯತ ಬ್ಯುಸಿನೆಸ್ ಮೆನ್‌ಗಳು, ಲಿಂಗಾಯತ ರಾಜಕಾರಣಿಗಳು ಹಾಗೂ ಹಿರಿಯ ಅಧಿಕಾರಿಗಳು ಸೇರಿಕೊಂಡಿದ್ದಾರೆ. ಸರಿಯಾಗಿ ಗಮನಿಸಿದರೆ ಇವರೆಲ್ಲಾ ಒಂದೊಂದು ಸಿಂಡಿಕೇಟ್‌ಗಳಾಗಿ ಆಪರೇಟ್ ಮಾಡುತ್ತಿರುವುದು ಕಾಣುತ್ತದೆ. ಈ ಪ್ರತಿ ಸಿಂಡಿಕೇಟ್‌ನಲ್ಲೂ ಯಡ್ಡಿ ಅಂಡ್ ಸನ್ಸ್ ಇದ್ದಾರೆ.

ಸುತ್ತೂರು ಸಿಂಡಿಕೇಟ್

ಈ ಸಿಂಡಿಕೇಟ್‌ನಲ್ಲಿ ಸುತ್ತೂರು ಮಠಾಧೀಶ ಅಂಡ್ ಫ್ಯಾಮಿಲಿ, ಎಂಎಲ್‌ಸಿ ತೋಂಟದಾರ್ಯ, ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಎ. ರಾಮದಾಸ್ ಇದ್ದಾರೆ. ಇವತ್ತು ಕನಿಷ್ಠ ಒಂದೂವರೆ ಸಾವಿರ ಕೋಟಿ ರೂಪಾಯಿನಷ್ಟು ಆಸ್ತಿ ಹೊಂದಿರುವ ಸುತ್ತೂರು ಸ್ವಾಮಿಗೆ ಮೈಸೂರು, ಬೆಂಗಳೂರು, ದೆಹಲಿ ಹಾಗೂ ತಮಿಳುನಾಡಿನಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳಿವೆ. ರಾಜ್ಯದ ಉದ್ದಗಲಕ್ಕೂ ಭೂಕಬಳಿಕೆಯ ಚಾಂಪಿಯನ್ ಎನಿಸಿಕೊಂಡಿರುವ ಸುತ್ತೂರು ಸ್ವಾಮಿಗೆ ಇನ್ನಷ್ಟು ಭೂಮಿ, ಹಣ ಆಸ್ತಿ ಮಾಡಿಕೊಳ್ಳುವ ದುರಾಲೋಚನೆಯಿದೆ. ಯಡ್ಡಿ ಅಂಡ್ ಸನ್ಸ್ ಜೊತೆಗೆ ಜಂಟಿ ಯೋಜನೆಗಳಿಗೂ 'ಸೈ' ಎನ್ನುವ ಸುತ್ತೂರು ಸ್ವಾಮಿ ಜೊತೆ ಶಾಸಕ ತೋಂಟದಾರ್ಯ ಪಾದಸೇವಕನಂತೆ ಇದ್ದಾನೆ. ಸಚಿವರಾದ ರಾಮದಾಸ್ ಹಾಗೂ ಶೋಭಾ ಈ ಸಿಂಡಿಕೇಟ್‌ನ ಮುಖ್ಯ ಸದಸ್ಯರು. ಹಣಕಾಸಿನ ದಂಧೆ ಹೊರತುಪಡಿಸಿದರೆ ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯನವರನ್ನು ರಾಜಕೀಯವಾಗಿ ಮುಗಿಸಬೇಕೆಂಬ ಗುರಿಯೂ ಈ ಸಿಂಡಿಕೇಟ್‌ಗಿದೆ.

ಸಿದ್ದಗಂಗಾ ಸಿಂಡಿಕೇಟ್

ಎಲ್ಲಾ ಬಣ್ಣ ಮಸಿ ನುಂಗಿತು ಎನ್ನುವಂತೆ ತಮ್ಮ ಕೊನೆಗಾಲದಲ್ಲಿ ಭ್ರಷ್ಟ ಮುಖ್ಯಮಂತ್ರಿ ಯಡ್ಡಿಯ ರಕ್ಷಣೆಗೆ ನಿಂತ ಸಿದ್ದಗಂಗಾ ಸ್ವಾಮಿ ಕೆಟ್ಟ ಹೆಸರು ಪಡೆಯುವಂತಾಗಿದೆ. ಹಣ ಮತ್ತು ಲಿಂಗಾಯತ ಜಾತಿ ಎಂದರೆ ತಟಕ್ಕನೆ ಎದ್ದು ನಿಲ್ಲುವ ಸಿದ್ದಗಂಗಾ ಸ್ವಾಮಿಯೇ ಯಡ್ಡಿ ಅಂಡ್ ಸನ್ಸ್‌ಗೆ ಚೋರಪಿಡ್ಕೆ ಬೋಧಿಸಿದ ಪುಣ್ಯಾತ್ಮ. ಈ ಸಿಂಡಿಕೇಟ್‌ನಲ್ಲಿ ಆದರ್ಶ ಡೆವಲಪರ್ಸ್‌ನ ಭೂಗಳ್ಳ ಬಳಿದಾಳೆ ಜಯಶಂಕರ್, ಸಚಿವ ವಿ. ಸೋಮಣ್ಣ ಹಾಗೂ ಯಡ್ಡಿ ಅಂಡ್ ಸನ್ಸ್ ಇದ್ದಾರೆ. ಈ ಸಿಂಡಿಕೇಟ್‌ನಲ್ಲಿ ಪ್ರಮುಖವಾಗಿ ಸಿದ್ದಗಂಗಾ ಮಠದ ದುಡ್ಡು, ಜಯಶಂಕರನ ದುಡ್ಡು ಹಾಗೂ ಯಡ್ಡಿ ಮಕ್ಕಳ ಕಳ್ಳ ಸಂಪಾದನೆಗಳು ರಿಯಲ್ ಎಸ್ಟೇಟ್ ಪ್ರಾಜೆಕ್ಟುಗಳಾಗಿ ಜನ್ಮ ತಾಳುತ್ತಿವೆ. ಈ ಸಿಂಡಿಕೇಟ್‌ನ ವಿ. ಸೋಮಣ್ಣ ನರಿಪಾಲು ಗಿಟ್ಟಿಸುತ್ತಿದ್ದು ವಾಚ್‌ಮ್ಯಾನ್ ರೀತಿ ಇದ್ದಾನೆ. ಹೊಸ ಡೀಲ್‌ಗಳನ್ನು ಕುದುರಿಸುವುದು, ನೋಟಿಫಿಕೇಷನ್ ದಂಧೆ ನಡೆಸುವುದು ಇತನ ಸ್ಪೆಷಾಲಿಟಿ. ಸೋಮಣ್ಣ ಕಳೆದ ವಾರ ಅನೌನ್ಸ್ ಮಾಡಿದ ಹೊಸ ವಸತಿ ಯೋಜನೆಗಳಿಗೆ 6000 ಎಕರೆ ಭೂಸ್ವಾಧೀನವೆಂಬ ಘೋಷಣೆ ಪ್ರಧಾನವಾಗಿ ಲೇಔಟ್ ಕೃಷ್ಣಪ್ಪನವರನ್ನೇ ಟಾರ್ಗೆಟ್ ಮಾಡಿಕೊಂಡಿದೆ. ಕೆಂಗೇರಿಯ ದೊಡ್ಡ ಆಲದ ಮರದ ಬಳಿ ಕೃಷ್ಣಪ್ಪನವರು



ಲೇಔಟ್ ನಿರ್ಮಾಣಕ್ಕಾಗಿ ನೂರಾರು ಎಕರೆ ಭೂಮಿ ಖರೀದಿಸಿದ್ದಾರೆ. ಈಗ ಸೋಮಣ್ಣ ಅದೇ ಜಾಗದಲ್ಲಿ ಸರ್ಕಾರಿ ಲೇಔಟ್ ಮಾಡುತ್ತೇನೆಂದು ಭೂಸ್ವಾಧೀನಕ್ಕೆ ಹೊರಟಿದ್ದಾನೆ. ವಿಜಯನಗರದಲ್ಲಿ ತನ್ನನ್ನು ಸೋಲಿಸಿದ ಕೃಷ್ಣಪ್ಪ ವಿರುದ್ಧ ಸೋಮಣ್ಣನ ಸೇಡಿದು.

RSS ಜಯದೇವ್ ಸಿಂಡಿಕೇಟ್

ಕರ್ನಾಟಕ ಆರ್‌ಎಸ್‌ಎಸ್ ಅನ್ನು ಲಿಂಗಾಯತ ರಾಜಕಾರಣಿಗಳ ಜೇತಕ್ಕೆ ಇಳಿಸಿರುವ ಕೀರ್ತಿ ಮೈ.ಚ. ಜಯದೇವ್‌ಗೆ ಸಲ್ಲಬೇಕು. ಬಿಜೆಪಿ ಭಿನ್ನಮತೀಯರು ಹಾಗೂ ಹೈಕಮಾಂಡ್‌ನ ಅಭಿಪ್ರಾಯಕ್ಕೂ ಬೆಲೆ ನೀಡದೆ ಯಡ್ಡಿಗೆ ಬೆಂಬಲ ನೀಡುತ್ತಿರುವ ಜಯದೇವ್ ಈಗ ಹಿಂದೂ ಧರ್ಮೋದ್ಧಾರಕ್ಕೆ ಎಳ್ಳುನೀರು ಬಿಟ್ಟು ವೀರಶೈವ ಜಾತಿವಾದಿಯಾಗಿದ್ದಾರೆ.

ಈ ಉಪಕಾರಕ್ಕೆ ಪ್ರತಿಯಾಗಿ ಆರ್‌ಎಸ್‌ಎಸ್‌ಗೆ ರಾಜ್ಯದ ಅನೇಕ ಕಡೆ ಭೂಮಿ ಮಂಜೂರು ಮಾಡಿಸಿಕೊಂಡು ಕೋಮುವಾದಿ ಪುಸ್ತಕಗಳನ್ನು ಶಾಲೆಗಳಿಗೆ ಸಪ್ಲೈ ನೀಡಿ ಕೋಟ್ಯಂತರ ರೂಪಾಯಿ ಕೀಳುತ್ತಿದ್ದಾನೆ. ಜಯದೇವ್‌ನಿಂದಾಗಿ ರಾಜ್ಯ ಆರ್‌ಎಸ್‌ಎಸ್ ಮುಂದೆ ಜಾತಿವಾರು ಗುಂಪುಗಳಾಗಿ ವೈಮನಸ್ಸು ಬೆಳೆಸಿಕೊಳ್ಳುವ ಸಾಧ್ಯತೆಗಳಿವೆ.

ವೀರಶೈವ ಮಹಾಸಭಾ ಸಿಂಡಿಕೇಟ್

ಇದರಲ್ಲಿ ಭೀಮಣ್ಣ ಖಂಡ್ರೆ, ವಿವಿಧ ಲಿಂಗಾಯತ ಉದ್ದಿಮೆದಾರರು, ಅಧಿಕಾರಿಗಳಿದ್ದಾರೆ. ಸ್ವತಃ ಯಡ್ಡಿಯ ಅಳಿಯ ಸೋಹನ್‌ನ ತಾಯಿ ವಿನೋದಾ ನಟರಾಜ್ ಮಹಿಳಾ ಘಟಕದ ಗೌರವಾಧ್ಯಕ್ಷೆಯಾಗಿದ್ದಾರೆ. ಯಡ್ಡಿಯ ಪುತ್ರಿ ಅರುಣಾಕುಮಾರಿ ಕಾರ್ಯದರ್ಶಿಯಾಗಿ ಬಂದು ಕುಳಿತಿದ್ದಾಳೆ. ಯಡ್ಡಿ ಸುಪುತ್ರ ಸಂಸದ ರಾಘವೇಂದ್ರ ಈ ವೀರಶೈವ ಯುವ ಘಟಕದ ಅಧ್ಯಕ್ಷ. ಅಂದರೆ ಇಡೀ ವೀರಶೈವ ಮಹಾಸಭೆಯೇ ಈಗ ಯಡ್ಡಿಯ ಕಂಟ್ರೋಲ್‌ನಲ್ಲಿದೆ. ಯಡ್ಡಿಗಿರುವ ಅಧಿಕಾರ ಬಳಸಿಕೊಂಡು ಮಹಾಸಭೆಗೆ ಹಣ-ಭೂಮಿಯ ಲಾಭ ಮಾಡಿಕೊಂಡು ಅದರ ಬದಲಿಗೆ ಯಡ್ಡಿಯ ರಕ್ಷಣೆಗೆ ನಿಲ್ಲುವ ಅಜೆಂಡಾ ... ರದ್ದು....

ಸಿರಾಣಿ ಸಿಂಡಿಕೇಟ್

ಬೃಹತ್ ಕೈಗಾರಿಕಾ ಸಚಿವನಾಗಿರುವ ಮುರುಗೇಶ್ ಸಿರಾಣಿ ಯಡ್ಡಿ ಅಂಡ್ ಸನ್ಸ್‌ಗೆ ಕಳ್ಳ ಹಣವನ್ನು ಬೇರೆಬೇರೆ ಬ್ಯುಸಿನೆಸ್‌ಗಳಲ್ಲಿ ಹೂಡುವ ದಾರಿ ತೋರಿಸುತ್ತಿದ್ದಾನೆ. ಈ ಸಿಂಡಿಕೇಟ್‌ನ ಕೈಗಳು ಈಗ ಹಾಂಕಾಂಗ್, ಸಿಂಗಪೂರ್, ಯೂರೋಪ್‌ಗಳ ತನಕ ಚಾಚಿವೆ. ಸಮಯ ಟಿವಿ ಚಾನಲ್ ಖರೀದಿಸಿದ್ದು ಈ ಸಿಂಡಿಕೇಟ್‌ನ ಹೊಸ ಸಾಧನೆ.

ದೊರೆಸ್ವಾಮಿ ಸಿಂಡಿಕೇಟ್

ಯಡ್ಡಿ ಅಂಡ್ ಸನ್ಸ್ ಶಿಕ್ಷಣ ವ್ಯಾಪಾರ ಹಾಗೂ ರಿಯಲ್ ಎಸ್ಟೇಟ್ ದಂಧೆಯಲ್ಲಿ ಕೈ ಜೋಡಿಸಿರುವ ಸಿಂಡಿಕೇಟೇ ಈ ದೊರೆಸ್ವಾಮಿ ಸಿಂಡಿಕೇಟ್. ಪಿಇಎಸ್ ಶಿಕ್ಷಣ ಸಂಸ್ಥೆಯ ಮಾಲೀಕ ಆಂಧ್ರದ ದೊರೆಸ್ವಾಮಿಗೆ ಯಡ್ಡಿ ಎಂಎಲ್‌ಸಿ ಪದವಿಯನ್ನು ದಯಪಾಲಿಸಿ ತಮ್ಮ ನಂಟನ್ನು ಬಿಗಿ ಮಾಡಿಕೊಂಡಿದ್ದಾರೆ. ಶಿವಮೊಗ್ಗದಲ್ಲಿ ಈ ಸಿಂಡಿಕೇಟ್ ಈಗ ಪ್ರೇರಣ ಟ್ರಸ್ಟ್ ಹೆಸರಿನಲ್ಲಿ ಶಿಕ್ಷಣ ವ್ಯಾಪಾರ ಪ್ರಾರಂಭಿಸಿದೆ. ಬಳ್ಳಾರಿಯ ಗಣಿ ಕಳ್ಳರಿಂದ ಹತ್ತಾರು ಕೋಟಿ ರೂಪಾಯಿಗಳು ಈ ಟ್ರಸ್ಟಿಗೆ ಹರಿದು ಬರುವಂತೆ ಯಡ್ಡಿ ನೋಡಿಕೊಂಡಿದ್ದಾರೆ.

ಸಿರಿಗೆರೆ ಸಿಂಡಿಕೇಟ್

ಆದಿಚುಂಚನಗಿರಿ ಮಠ ಹಾಗೂ ಮೈಸೂರಿನ ಸುತ್ತೂರು ಸ್ವಾಮಿಯನ್ನು ಮೀರಿಸುವಂತೆ ಬೆಳೆಯುವ ಆಕಾಂಕ್ಷೆ ಸಿರಿಗೆರೆ ಸ್ವಾಮಿಗಿರುವಂತಿದೆ. ಹಾಗಾಗಿ ನಿರಂತರವಾಗಿ ಯಡ್ಡಿಗೆ ಬೆಂಬಲ ಸೂಚಿಸುತ್ತಾ ತಮ್ಮ ಶಿಕ್ಷಣ ದಂಧೆ ಮುಂದುವರಿಕೆಗೆ ಯಡ್ಡಿ ಸರ್ಕಾರದ ನೆರವು ಗಿಟ್ಟಿಸುತ್ತಿದ್ದಾರೆ. ರೇಣುಕಾಚಾರ್ಯ ಒಮ್ಮೆ ಯಡ್ಡಿ ವಿರುದ್ಧ ನಿಂತಾಗ ಬಹಿರಂಗ ಸಭೆಯಲ್ಲೇ ಬೈಯ್ದು ವಾರ್ನಿಂಗ್ ನೀಡಿದ್ದರು. ಸಿರಿಗೆರೆ ಸ್ವಾಮಿ ಯಡ್ಡಿಗೆ ಬೆಂಬಲ ಸೂಚಿಸುತ್ತಾ ತಮ್ಮ ಶಿಕ್ಷಣ ದಂಧೆ ಮುಂದುವರಿಕೆಗೆ ಯಡ್ಡಿ ಸರ್ಕಾರದ ನೆರವು ಗಿಟ್ಟಿಸುತ್ತಿದ್ದಾರೆ.

ಕೊಳದ ಮಠ ಸಿಂಡಿಕೇಟ್

ಇದರಲ್ಲಿ ದೊಡ್ಡ ಲೆವೆಲ್‌ನ ದಂಧೆಯಿಲ್ಲ. ಯಡ್ಡಿಗೆ ಆಪತ್ತು ಬಂದಾಗ ಬೀದಿಗಿಳಿದು ಚೀರಾಡುವ ಗುಂಪಿದು. ಅವತ್ತಿನವತ್ತಿನ ಕೆಲಸದ ಖರ್ಚಿಗೆ ಹಣದ ನೀಡಿದರೆ ತೃಪ್ತರಾಗುವ ಜನ ಇವರು.

ರೆಡ್ಡಿ ಸಿಂಡಿಕೇಟ್

ಕಾಯಂ ಮಿತ್ರನೂ ಅಲ್ಲದ ಕಾಯಂ ಶತ್ರುವೂ ಆಗಿರದ ರೆಡ್ಡಿ ಗ್ಯಾಂಗ್ ಈಗ ಯಡ್ಡಿಯ ಜಾತಿ ... ನೋಡಿ ಕಂಗಾಲಾಗಿದೆ. ರೆಡ್ಡಿಗಳಿಗೆ ತಮ್ಮ ... ಉಳಿಸಿಕೊಳ್ಳಲು ಈಗ ಯಡ್ಡಿಯ ನೆರವು ಬೇಕೇಬೇಕು. ಹಾಗಾಗಿ ರೆಡ್ಡಿಗಳು ವೀರಶೈವ ಸಮಾವೇಶಕ್ಕೂ ... ಕೊಡುತ್ತಾರೆ. ಯಡ್ಡಿ ಮಕ್ಕಳ ಶಿಕ್ಷಣ ಸಂಸ್ಥೆಗೂ ಡೊನೇಷನ್ ದಾನ ನೀಡುತ್ತಿದ್ದಾರೆ.

-ಹೀಗೆ ಮಠಾಧೀಶರು, ಉದ್ದಿಮೆದಾರರ ಅಕ್ರಮ ಕೂಟಗಳನ್ನು ಕಟ್ಟಿಕೊಂಡಿರುವ ಯಡ್ಡಿ 'ಲಿಂಗಾಯತ' ಸೆಂಟಿಮೆಂಟನ್ನು ತನ್ನ ಸ್ವಾರ್ಥಕ್ಕಾಗಿ ಬಳಸುತ್ತಿದ್ದಾರೆ.

ಮೇಲೆ ಕಾಣಿಸಿರುವ ಲಿಂಗಾಯತ ಮಠಾಧೀಶರ ಪೈಕಿ ಒಬ್ಬ ಸ್ವಾಮಿಯೂ ಬಡ ಲಿಂಗಾಯತ ವಿದ್ಯಾರ್ಥಿಗಳಿಗೆ ತುತ್ತು ಅನ್ನ ಹಾಕುತ್ತಿಲ್ಲ. ಆದರೂ ಸಮಸ್ತ ಲಿಂಗಾಯತ ಜನಾಂಗದ ಮುಖಂಡರಂತೆ ಪೋಸು ಕೊಡುತ್ತಾ ತಮ್ಮ ದಂಧೆಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಮೊನ್ನೆ ಸುತ್ತೂರಿನಲ್ಲಿ ನಡೆದ ವೀರಶೈವ ಮಹಾಸಭಾದ ಸಮಾವೇಶದಲ್ಲಿ ಭ್ರಷ್ಟನೆಂಬುದು ಗೊತ್ತಿದ್ದರೂ ಯಡ್ಡಿಗೆ ಬೆಂಬಲ ಸೂಚಿಸಿರುವುದೂ ಇದೇ ಕಾರಣಕ್ಕಾಗಿ.

• ಪಾರ್ವತೀಶ

ವೀರಶೈವ ಮಹಾಸಭಾ ...



ಭೀಮಣ್ಣ ಖಂಡ್ರೆ ಅಧ್ಯಕ್ಷತೆಯ ಅಖಿಲ ಭಾರತ ವೀರಶೈವ ಮಹಾಸಭಾದಲ್ಲಿ ಹಣ ದುರುಪಯೋಗದ ಹೊಸ ಹಗರಣ ಬೆಳಕಿಗೆ ಬಂದಿದೆ.

ಮಹಾಸಭಾದ ಪದಾಧಿಕಾರಿಗಳಾದ ಪಾವಟೆ, ಚಂದ್ರಕಾಂತ್ ಬೆಲ್ಲದ್, ರಾಣಿ ಸತೀಶ್ ಮುಂತಾದವರು ಫೆಬ್ರವರಿ 8 ನೇ ತಾರೀಖು ಸಹಕಾರ ಸಂಘಗಳ ಇಲಾಖೆಗೆ ಒಂದು ಲಿಖಿತ ದೂರು ನೀಡಿದ್ದಾರೆ. "ಖಂಡ್ರೆ ಗುಂಪು ಬಸವ ಕಲ್ಯಾಣದಲ್ಲಿ ಮಾರ್ಚ್‌ನಲ್ಲಿ ನಡೆದ ಶರಣ ಹರಳಯ್ಯ, ಮಧುವರಸರ ಮಹಾತ್ಮ ದಿನಾಚರಣೆ ನೆಪದಲ್ಲಿ ಲಕ್ಷಾಂತರ ರೂಪಾಯಿ ಗುಳುಂ ಮಾಡಿರುವ ಬಗ್ಗೆ ದಾಖಲೆ ಸಹಿತ ದೂರು ನೀಡಲಾಗಿದೆ. ಈ ಕಾರ್ಯಕ್ರಮಕ್ಕೆಂದು ಆಜೀವ ಸದಸ್ಯತ್ವಕ್ಕೆ ವಸೂಲಿ ಮಾಡಿದ್ದ ಹಣವನ್ನು ಅಕ್ರಮವಾಗಿ ಬಳಸಿ ಲೆಕ್ಕ ನೀಡಿಲ್ಲ. ಅಲ್ಲದೆ 2010 ರಲ್ಲಿ ನಡೆದ ಮಹಾಸಭೆಯ ಶತಮಾನೋತ್ಸವ ಕಾರ್ಯಕ್ರಮಕ್ಕೆಂದು ಸಂಗ್ರಹಿಸಿದ್ದ 56 ಲಕ್ಷ ರೂಪಾಯಿಗಳಲ್ಲಿ 16 ಲಕ್ಷ ರೂಪಾಯಿಗಳನ್ನು ಖಂಡ್ರೆ, ತನ್ನ ಸ್ವಂತ ಬ್ಯಾಂಕ್ ಖಾತೆಗೆ ಸಾಗಿಸಿರುವುದು ಪತ್ತೆಯಾಗಿದೆ" ಎಂದು ದೂರಿದ್ದಾರೆ.

ಈ ಬಗ್ಗೆ ಈಗ ಸಹಕಾರ ಇಲಾಖೆ ತನಿಖೆ ನಡೆಸುತ್ತಿದೆ. (ಸಂಖ್ಯೆ ಡಿಆರ್: ಎಸ್‌ಒಆರ್/ ವಿಚಾರಣೆ/ 25 ಪಿಟಿ... 2010.11 ದಿನಾಂಕ 22.2.2011) ಇಲಾಖೆಯ ಜಂಟಿ ಆಯುಕ್ತ ಅರುಣ್ ಕುಮಾರ್ ಈಗ ತನಿಖೆ ಆರಂಭಿಸಿದ್ದಾರೆ. ಮಹಾಸಭೆಯ ಅಧ್ಯಕ್ಷ ಖಂಡ್ರೆ, ಸರ್ವಾಧಿಕಾರಿಯಂತೆ ವರ್ತಿಸುತ್ತಾ ಚುನಾವಣೆಯಲ್ಲಿ ಗೆದ್ದು ಬಂದಿರುವ ಪದಾಧಿಕಾರಿಗಳನ್ನೇ ಕಿತ್ತೆಸೆಯುತ್ತಾ ಯಡ್ಡಿ ಹಾಗೂ ತನಗೆ ಸಲಾಂ ಹೊಡೆಯುವವರನ್ನೇ ಸಮಿತಿಗೆ ಸೇರಿಸಿಕೊಳ್ಳುತ್ತಿದ್ದಾರೆ. ಖಂಡ್ರೆಯ ಈ ದಬ್ಬಾಳಿಕೆ ಸಹಿಸಲಾಗದೆ ಖಜಾಂಚಿ ಬಿ.ಎಸ್. ಮುದ್ದಪ್ಪ, ಕಾರ್ಯದರ್ಶಿ ಬಿ. ಮೃತ್ಯುಂಜಯಪ್ಪ, ವಿ.ಎಸ್. ಬಾಗಿ ರಾಜೀನಾಮೆ ಕೊಟ್ಟಿದ್ದಾರೆ.

ಕೋಟ್ಯಂತರ ರೂಪಾಯಿಗಳು ಹರಿದಾಡುವ ವೀರಶೈವ ಮಹಾಸಭೆ ಈಗ ಭ್ರಷ್ಟ ಖಂಡ್ರೆ, ಹಾಗೂ ಕಡುಭ್ರಷ್ಟ ಯಡ್ಡಿ ಫ್ಯಾಮಿಲಿ ಕೈಗೆ ಸಿಕ್ಕಿ ಹೈರಾಣಾಗುತ್ತಿದೆ.

ಸ್ವರ್ಣವಲ್ಲಿ ಸ್ವಾಮಿಯೋ ಸಾಲಮನ್ನಾ ಮಸಲತ್ತೋ!

ಉತ್ತರ ಕನ್ನಡದ ಘಟ್ಟದ ಮೇಲಿನ ಶಿರಸಿ ಸೀಮೆಯೆಂದರೆ ಮೇಲ್ವರ್ಗದ ಹೈಗರ (ಬ್ರಾಹ್ಮಣರ) ಸಾಮ್ರಾಜ್ಯ ವಿಸ್ತರಣೆ. ಇಲ್ಲಿ ಬಹುಸಂಖ್ಯಾತ ಅಬ್ರಾಹ್ಮಣರನ್ನು ಸಾಮಾಜಿಕ -ರಾಜಕೀಯ ಮತ್ತು ಆರ್ಥಿಕವಾಗಿ ಹಣಿವ ಹರಾಮಿ ಹುನ್ನಾರ ಸದಾ ಚಾಲ್ತಿಯಲ್ಲಿರುತ್ತದೆ. ಜಿಲ್ಲೆಯ ರಾಜಕೀಯ -ವಾಣಿಜ್ಯ ಕೇಂದ್ರವಾಗಿರುವ ಶಿರಸಿ ಜಿಲ್ಲಾ ಉಸ್ತುವಾರಿ ಮಂತ್ರಿ ಕಂ ಹೈಗರ ಕುಲತಿಲಕ ಕಾಗೇರಿ ಮಾಣಿಯ 'ಕರ್ಮ'ಭೂಮಿಯೂ ಹೌದು! ಶಿರಸ್ಸಿಯ ಇಬ್ಬರು ಪಕ್ಕಾ ಚೆಡ್ಡಿ ವಟುಗಳು ರಾಜ್ಯ ಮಟ್ಟದ ಎರಡು ನಿಗಮ-ಮಂಡಳಿಯ ಮಜಾದಲ್ಲಿ ಮೆರೆಯುತ್ತಿದ್ದಾರೆ! ಅಷ್ಟೇ ಅಲ್ಲ ಹೈಗರ ಪ್ರಭಾವಿ ಸ್ವರ್ಣವಲ್ಲಿ ಮಠದ ಹೆಡ್ ಕ್ವಾಟರ್ಸ್ ಇದೇ ಶಿರಸಿಯ ಸೋಂದಾದಲ್ಲಿದೆ! ಒಟ್ಟನಲ್ಲಿ ಶಿರಸಿ ಸೀಮೆ ಹಾರವರ ಹಾರಾಟದ ಆಡಂಬೋಲದಂತಾಗಿ ಹೋಗಿದೆ!!

ಈ ಬ್ರಾಹ್ಮಣ ಸೀಮೆಯ ಶಿರಸಿ-ಸಿದ್ದಾಪುರ ಮತ್ತು ಯಲ್ಲಾಪುರದ ಆರ್ಥಿಕ ಜೀವನಾಡಿ ಅಡಿಕೆ. ಅಡಿಕೆ ತೋಟಿಗರಲ್ಲಿ ಮುಕ್ಕಾಲು ಪಾಲಿಗಿಂತ ಹೆಚ್ಚು ಹೈಗರೇ ಇದ್ದಾರೆ. ಹೀಗಾಗಿ ಒಂಚೂರು ಅಡಿಕೆ ಬೆಲೆ ಏರುಪೇರಾದರೂ ಸಾಕು, ಪ್ರಳಯವೇ ಆದಂತೆ ಬೊಬ್ಬೆ



ಬೀಳುತ್ತದೆ. ಅನಾಹುತಕಾರಿ ಗುಟ್ಕಾ ನಿಷೇಧ ಅಥವಾ ಗುಟ್ಕಾ ಪ್ಲಾಸ್ಟಿಕ್ ಪೌಚ್ ಬ್ಯಾನ್ ಎಂದರೆ ಈ ಬ್ರಾಯ್ಲರ-ರಾಜಕೀಯ ಬಲದ ಸಮುದಾಯ ತರಹೇವಾರಿ ಹೋರಾಟ ಹಮ್ಮಿಕೊಳ್ಳುತ್ತದೆ. ಸದ್ರಿ ಸ್ವಜಾತಿ 'ಆಂದೋಲನ'ಕ್ಕೆ ಸಾಕ್ಷಾತ್ ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸ್ವಾಮಿಯೇ ಬೀದಿಗಿಳಿದು 'ಧಾರ್ಮಿಕ ನಾಯಕತ್ವ' ಕೊಡುತ್ತಾರೆ.

ವಿಪರ್ಯಾಸ ನೋಡಿ; ಉತ್ತರ ಕನ್ನಡದ ಬಹು ಸಂಖ್ಯಾತ ರೈತರ ಜೀವನಾಧಾರ ಭತ್ತಕ್ಕೆ ಕುತ್ತು ಬಂದಾಗ ಅಥವಾ ಮೀನುಗಾರರ ಕುಲಕಸುಬಿಗೆ ಕಂಟಕ ಎದುರಾದಾಗ ಯಾವ ಕಾಮಿ ಸ್ವಾಮಿ, ಖಾದಿ ಪುಢಾರಿ ತಲೆಕೆಡಿಸಿಕೊಂಡಿದ್ದಿಲ್ಲ! ಸ್ವತಃ ರೈತ ಮೀನುಗಾರರೂ ತಮ್ಮನ್ನು ಬಚಾಯಿಸಿಕೊಳ್ಳಲಾಗದಂಥ ಅಸಹಾಯಕ ಸ್ಥಿತಿಯಲ್ಲಿದ್ದಾರೆ. ತಮಾಷೆಯೆಂದರೆ ಅಡಿಕೆ ತೋಟಿಗರ ಸಣ್ಣ-ಸಣ್ಣ ಸಮಸ್ಯೆಗೂ ಜಿಲ್ಲೆಯಲ್ಲಿ ಸುನಾಮಿಯೇ ಏಳುತ್ತದೆ!! ಇದರರ್ಥ ಇಷ್ಟೇ: ಹವ್ಯಕರ ಅಡಿಕೆ ಲಾಬಿ ಜೋರಾಗಿದೆ. ಈ ವೈದಿಕ 'ಮಂತ್ರ'ದ ಮಧ್ಯೆ ರೈತ-ಮೀನುಗಾರರ ಅಳಲು ಯಾರಿಗೂ ಕೇಳಿಸುತ್ತಿಲ್ಲ, ಗುಟ್ಕಾ ನಿಷೇಧದ ಹಿಂದೆ ಪ್ರಬಲ ಸಿಗರೇಟು ಲಾಬಿ ಕರಾಮತ್ತಿದೆ ಎಂದರಚುತ್ತಿರುವ ಮಂತ್ರಿ ಕಾಗೇರಿ, ಸಂಸದ ಅನಂತ್ಮಾಣಿ, ಭಾಷಣ ಭೂಪ ಪ್ರಮೋದ್ ಮಾಣಿ... ವಗೈರೆ ಹೈಗರ ಹಿರೇಮಣಿಗಳು ಜಿಲ್ಲೆಯಲ್ಲಿ ಅಡಿಕೆ ಲಾಬಿಯ 'ಸಾಲಮನ್ನಾ' ಮಸಲತ್ತನ್ನು ಬೇಕಂತಲೇ ಮರೆಮಾಚುತ್ತಿದ್ದಾರೆ.



ಮಾರ್ಗರೆಟ್ ಆಳ್ವಾ


ತೋಟಗರು ಅಡಿಕೆಗೆ ಮಾನವಿಲ್ಲದೆ, ತೋಟ ಪಟ್ಟಿಯಲ್ಲಿ ಫಸಲಿಲ್ಲದೆ ಉಪವಾಸ-ವನವಾಸ ಬಿದ್ದಿದ್ದಾರೆಂದು ಬಿಂಬಿಸಿ ಸಹಕಾರಿ ಸಂಸ್ಥೆ ಪಿಎಲ್‌ಡಿ ಬ್ಯಾಂಕ್ ಮುಂತಾದ ಆರ್ಥಿಕ ಸಂಸ್ಥೆಗಳಿಂದ ಪಡೆದ 'ಆಸಾಮಿ ಸಾಲ' ಮನ್ನಾ ಮಾಡಿಸುವ ವ್ಯವಸ್ಥಿತ ತಂತ್ರಗಾರಿಕೆಯನ್ನು ಕೆಲವು ವರ್ಷಗಳಿಂದ ಜಿಲ್ಲೆಯಲ್ಲಿ ಅಡಿಕೆ ಲಾಬಿ ಮಾಡುತ್ತಿದೆ. ದಿಲ್ಲಿಯಲ್ಲಿ ಪವರ್‌ಫುಲ್ ಆಗಿರುವ ಮಾರ್ಗರೆಟ್ ಆಳ್ವರ ಸೆರಗು ಗಟ್ಟಿಯಾಗಿ ಹಿಡಿದುಕೊಂಡರೆ ಆಕೆ ಈ ಸಾಲಮನ್ನಾ ಮಾಡಿಸಬಹುದೆಂದು ಒಂದಿಷ್ಟು ಶಿರಸಿ ಸೀಮೆ ಹೈಗರ ಮುಖಂಡರು ಲೆಕ್ಕಹಾಕಿದ್ದರು. ಕಳೆದ ಲೋಕಸಭಾ ಎಲೆಕ್ಷನ್ ಹೊತ್ತಲ್ಲಿ ಈ ಅಡಿಕೆ ಲಾಬಿ ಆಕೆಗೆ ಗೆಲ್ಲಿಸುವ ಆಸೆ ತೋರಿಸಿ ಆಸಾಮಿ ಸಾಲಮನ್ನಾಕ್ಕೆ ಪ್ರಯತ್ನಿಸುವಂತೆ ಕೇಳಿಕೊಂಡಿತ್ತು, ಹೈಗರ ಮಾತಿಗೆ ಮರುಳಾದ ಮ್ಯಾಗಿ ಆಸಾಮಿ ಸಾಲಮನ್ನಾ ಮಾಡಿಸುವ ಭರವಸೆ ನೀಡಿದ್ದರು.

ಆಸಾಮಿ ಸಾಲಮನ್ನಾ ಮಾಡಿಸಲು ಆಕೆ ಒಂದಿಷ್ಟು ಕಟಪಿಟಿಯೂ ಮಾಡಿದ್ದರು. ಆದರೆ ಅಲ್ಪ ಅಂತರದಲ್ಲಿ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಸೋತ ಮ್ಯಾಗಿಗೆ ಹೈಗರೇ ತನಗೆ ಕೈಕೊಟ್ಟರೆಂಬ 'ಸತ್ಯ' ಅರಿವಾಯ್ತು, ಹೀಗಾಗಿ ಆಕೆ ಆ ಬಳಿಕ ಈ ಸಾಲಮನ್ನಾದತ್ತ ತಲೆಹಾಕಲೇ ಇಲ್ಲ, ಜಿಲ್ಲೆಯ ರಾಜಕೀಯವೇ ಬೇಡವೆಂದು ಉತ್ತರಾಖಂಡದ ರಾಜ್ಯಪಾಲೆಯಾಗಿ ಹೋದ ಮ್ಯಾಗಿ ಹೈಗರ ಲೀಡರ್‌ಗಳು ಅದೆಷ್ಟೇ ಪರಿಪರಿಯಾಗಿ ಬೇಡಿಕೊಂಡರೂ ಅವರಿಗೆ ಅನುಕೂಲವಾಗುವ ಈ ಆಸಾಮಿ ಸಾಲಮನ್ನಾ ಮಾಡಿಸುವ ಕೆಲಸಕ್ಕೆ ಕೈಹಾಕಲಿಲ್ಲ, ಮ್ಯಾಗಿ ತನ್ನನ್ನು ಸೋಲಿಸಿದವರಿಗೆ ಕೈ ತಿರುಗಿಸಿ ಬೆನ್ನು ಮಾಡಿ ಹೋದ ಮೇಲೆ ಶಿರಸಿ ಸೀಮೆಯ ಸ್ವಯಂಘೋಷಿತ ಅಡಿಕೆ ಬೆಳೆಗಾರರ ಹಿತರಕ್ಷಕ ಶಾಂತಾರಾಮ ಹೆಗಡೆ, ಲೇವಾದೇವಿದಾರ ಮಾಜಿ ಶಾಸಕ ಉಮೇಶ್ ಭಟ್ಟ ಮುಂತಾದ ವಿಪ್ರೋತ್ತಮರು ಈ ಆಸಾಮಿ ಸಾಲ ಮನ್ನಾ ತಾವು ಮಾಡಿಸುತ್ತೇವೆಂದು ಧೀರೋದಾತ್ತ ಪೋಸುಕೊಟ್ಟರು.

ಈ ಶಾಂತಾರಾಮ ಹೆಗಡೆ-ಉಮ್ಮಾಣಿ ಭಟ್ಟರು ಸೊಸೈಟಿಗಳಿಂದ, ಕೆಲವು ಹೈಗರ ತೋಟಗರ ಹಿತೈಷಿಗಳಿಂದ ಸುಮಾರು ಅರ್ಧಕೋಟಿಯಷ್ಟು ಹಣ ಸಾಲ ಮನ್ನಾ ಕಾರ್ಯಕ್ರಮಕ್ಕೆಂದು ಸಂಗ್ರಹಿಸಿದ್ದರು. ಇದರಲ್ಲಿ ದೊಡ್ಡದೊಂದು ಪಾಲು ಬೆಂಗಳೂರಲ್ಲಿರುವ ಸಹಕಾರಿ ಇಲಾಖೆಯ ಮಂತ್ರಿ-ಅಧಿಕಾರಿಗಳಿಗೆ 'ಕಾಣಿಕೆ'ಯಾಗಿ ಕೊಡುವ ಪ್ಲಾನ್ ಹಾಕಲಾಗಿತ್ತು, ಲಂಚ ಕೊಟ್ಟು ಸಾಲಮನ್ನಾ ಮಾಡಿಸುವ ಅಸಹ್ಯ-ಅಕ್ರಮ ಪಾತಕಕ್ಕೆ ಈ ಭಟ್ಟ -ಹೈಗರ ಜೋಡಿ ಬೆಂಗಳೂರು ಮಟ್ಟದಲ್ಲಿ ಜೋರಾಗಿ ನಡೆಸಿತ್ತು, ಆದರೆ ಅದ್ಯಾಕೋ ವಿಫಲವಾಯ್ತು, ಅಷ್ಟೇ ಅಲ್ಲ, ಸಾಲ ಮನ್ನಾ ಮಾಡಿಸುವ ಪುಣ್ಯ ಕಾರ್ಯಕ್ಕೆ ಕೈಹಾಕಿದ್ದ ವಿಪ್ರ ನಾಯಕರ ನಡುವೆಯೇ ಭಿನ್ನಾಭಿಪ್ರಾಯ ಮೂಡಿ ಬಹಿರಂಗ ಕಾಳಗವೇ ನಡೆದುಹೋಯ್ತು, 'ಮಾಜಿ ಶಾಸಕ ಉಮೇಶ ಭಟ್ಟ ನಮ್ಮಿಂದ ಲಕ್ಷಾಂತರ ರೂ. ಪಡೆದು ಸಾಲ ಮನ್ನಾ ಮಾಡಿಸುತ್ತೇನೆಂದು ಹೇಳಿದ್ದರು.... ಆದರೆ ಆತ ಈ ಕೆಲಸಕ್ಕೆ ಆದ ಖರ್ಚು-ವೆಚ್ಚ ತೋರಿಸದೆ ಸುಮಾರು 25 ಲಕ್ಷ ಗುಳುಂ ಮಾಡಿದ್ದಾನೆ...' ಎಂದು ಟಿಎಸ್‌ಎಸ್ ಅಧ್ಯಕ್ಷ ಶಾಂತಾರಾಂ ಹೆಗಡೆ ಪತ್ರಿಕಾಗೋಷ್ಠಿ ಕರೆದೇ ತಮ್ಮ ಹುಳುಕು ಹೊರಗೆ ಹಾಕಿಕೊಂಡಿದ್ದರು.

ಈ ಸಾಲಮನ್ನಾಕ್ಕೆಂದು ಸಂಗ್ರಹಿಸಿದ್ದ ಹಣದ ಹಂಚಿಕೆ ಜಗಳ ಶಾಂತಾರಾಂ ಹೆಗಡೆ ಎಂಬ ಶಿರಸಿ ಸೀಮೆಯ ಅಡಿಕೆ ಬೆಳೆಗಾರರ ಹಿತಕಾಯುವ ನೆಪದಲ್ಲಿ ಕೋಟ್ಯಾಧೀಶನಾಗಿರುವ ಚೋರ ಮತ್ತು ಅಧಿಕಾರಸ್ಥರ ಏಜೆಂಟ್ ಉಮೇಶ್ ಭಟ್ಟರ ಅಡ್ಡಕಸುಬನ್ನು ಜಗಜ್ಜಾಹೀರುಗೊಳಿಸಿಬಿಟ್ಟಿತ್ತು. ಈ ಶಾಂತಾರಾಮ ಹೆಗಡೆಯಂತೂ ಅಡಿಕೆ ಬೆಳೆಗಾರರ ಕುಲಕಂಟಕ ತೋಟಿಗರ ಜೀವನಾಧಾರವಾದ ತೋಟಗಾರ್ಸ್ ಸೇಲ್ ಸೊಸೈಟಿ (ಟಿಎಸ್‌ಎಸ್)ಯಲ್ಲಿ ಲಕ್ಷಾಂತರ ರೂ. ಅವ್ಯವಹಾರ ಮಾಡಿ ದುಂಡಗಾಗಿದ್ದಾನೆ. ಈತ ಟಿಎಸ್‌ಎಸ್‌ನಲ್ಲಿ ಕದ್ದ ಕಾಸೇ ಶಿರಸಿ ಸೀಮೆಯ ತೋಟಿಗರ ಸಾಲಮನ್ನಾ ಮಾಡಿಸುವಷ್ಟಿದೆ!!

ಈ ಹೆಗಡೆ-ಭಟ್ಟರ ಜಗಳಬಂದಿಯಿಂದ ರೋಸಿ ಹೋದ ಅಡಿಕೆ ಲಾಬಿ ಹೈಗರು ನೇರವಾಗಿ ಸ್ವರ್ಣವಲ್ಲಿ ಸ್ವಾಮಿ ಗಂಗಾಧರೇಂದ್ರರ ಸನ್ನಿಧಿಗೆ ಹೋದರು. "ಗುರುಗಳೇ ಈ ಶಾಂತಣ್ಣ-ಉಮ್ಮಣ್ಣರಿಂದ ಆಸಾಮಿ ಸಾಲಮನ್ನಾ ಮಾಡ್ಸುಲೆ ಆಗ್ತಿಲ್ಲೆ... ಅವ್ರೆ ಬಡ್ತಿದ್ರು... ಕೊಳಕು ಮಂದಿ... ಇನ್ನು ನೀವೇ ಮುಂದಾಗಿ ಆಸಾಮಿ ಸಾಲ ಮನ್ನಾಕ್ಕೆ ಬೇದ್ರಿ ಹೋರಾಟದಂಗೆ ಪ್ರತಿಭಟನೆ ಮಾಡ... ಇಲ್ಲದಿದ್ರೆ ನಾನಾಗ ಬಚಾವಾಗ್ತಿಲ್ಲೆ..." ಎಂದು ಗೋಗರೆದರು. ಇದಕ್ಕೆ ಸದಾ ಸ್ವ-ಜಾತಿ ಉದ್ಧಾರಕ್ಕೆ ಚಿಂತಿಸುವ ಈ ಕಾವಿಗುರು 'ತಥಾಸ್ತು' ಎಂದರು. ಶಿಷ್ಯ ಗಣ ಸಮುರೋತ್ಸಾಹದಲ್ಲಿ ಶಿರಸಿಯಲ್ಲೊಂದು ತೋಟಿಗರ ಭರ್ಜರಿ ಸಮಾವೇಶ ನಡೆಸಲು ಸ್ಕೆಚ್ ಹಾಕಿತು. ಈ ಸಾಲಮನ್ನಾ ಮಸಲತ್ತಿನ ಸಮಾರಂಭಕ್ಕೆ ಸಿಎಂ ಯಡ್ಡಿಯಾದಿಯಾಗಿ ಕೇಂದ್ರ ಮಂತ್ರಿಗಳು, ಕಾಫಿ ಬೆಳೆಗಾರರ ಸಾಲಮನ್ನಾ ಮಾಡಿಸಿದ 'ಅನುಭವಿ'ಗಳನ್ನೆಲ್ಲ ಕರೆಸಲು ನಿರ್ಧರಿಸಲಾಯ್ತು.



ಕಾಗೇರಿ

ಅಂತೂ ಕಳೆದ ತಿಂಗಳ ಕೊನೆಯಲ್ಲಿ ತೋಟಿಗರ ಬೃಹತ್ ಸಮಾವೇಶ ಶಿರಸಿಯಲ್ಲಿ ಅಡಿಕೆ ಲಾಬಿ ಹಮ್ಮಿಕೊಂಡಿತ್ತು, ಈ ಸಭೆಗೆ ಸಿಎಂ ಸಾಹೇಬರು ಬರಲೇ ಇಲ್ಲ, ಇಡೀ ಸಮಾವೇಶ ಸ್ವರ್ಣವಲ್ಲಿ ಸ್ವಾಮಿ ಸುತ್ತಲೇ ಕೇಂದ್ರೀಕೃತವಾಗಿತ್ತು, ಆತ ಆಡುವ ಮಾತುಗಳು ಅಡಿಕೆ ಬೆಳೆಗಾರರಿಗೆ ಫರ್ಮಾನು ಆಗಿತ್ತು, ಸ್ವಾಮೀಜಿ ಆಸಾಮಿ ಖಾತೆ ಸಾಲ ತುಂಬಬೇಡಿ ಎಂದು ಅಡಿಕೆ ಬೆಳೆಗಾರರಿಗೆ ಕರೆಕೊಡುತ್ತಾರೆಂದೇ ಎಲ್ಲರೂ ನಿರೀಕ್ಷಿಸಿದ್ದರು. ಆದರೆ ಸ್ವಾಮೀಜಿ ನೇರವಾಗಿ ಸಾಲ ತುಂಬಬೇಡಿ ಅಂತೇನೂ ಹೇಳಲಿಲ್ಲ, "ತೋಟ ಪಟ್ಟಿಯಲ್ಲಿ ಫಸಲಿಲ್ಲ..ಬೆಳೆ ನಾಶವಾಗಿದೆ.. ಅಡಿಕೆ ಬೆಲೆಯೂ ಇಲ್ಲ.. ನಮ್ಮ ತೋಟಿಗರು ಎಲ್ಲಿಂದ ಸಾಲ ತುಂಬಿಯಾರು? ಸರ್ಕಾರ ಸಾಲಮನ್ನಾ ಮಾಡಬೇಕು...." ಎಂದು ಸ್ವಾಮೀಜಿ ಅಪ್ಪಣೆ ಕೊಡಿಸಿದರು.

ಸ್ವಾಮೀಜಿಯೇ ಸಾಲಮನ್ನಾ ಮಾಡಿ ಎಂದು ಸರ್ಕಾರಕ್ಕೆ ಕಟುವಾಗಿ ಹೇಳಿದ್ದಾರೆಂದ ಮೇಲೆ ಸಾಲಮನ್ನಾ ಆಗದೇ ಇರುತ್ತದಾ? ಗುರುಗಳೇ ಹೀಗೆ ಹೇಳಿದ ಮೇಲೆ ಆತನ ಪರಮ ಶಿಷ್ಯರು ಸಾಲ ತುಂಬಲು ಮನಸ್ಸು ಮಾಡ್ತಾರಾ? ಸಾಲ ತುಂಬುವ ತಾಕತ್ತಿನವನೂ ಮನ್ನಾ ಆಗ್ತದೆ ಎಂಬ ದೂ(ದು)ರಾಲೋಚನೆಯಿಂದ ಕಟ್‌ಬಾಕಿದಾರನಾಗೇ ಇರ್ತಾನಷ್ಟೇ. ಅದೇ ಈಗ ಶಿರಸಿ ಸೀಮೆಯಲ್ಲಿ ಆಗುತ್ತಿದೆ. ಕಳೆದ ಮೂರ್ನಾಲ್ಕು ವರ್ಷದಿಂದ ಸಾಲಮನ್ನಾ ಆಗುತ್ತೆಂಬ ನಿರೀಕ್ಷೆಯಲ್ಲಿ ಸ್ಥಿತಿವಂತನೂ ಸಾಲ ಮರುಪಾವತಿ ಮಾಡುತ್ತಿಲ್ಲ. ಈಗಂತೂ ಸಾಕ್ಷಾತ್ ಸ್ವಾಮೀಜಿಯೇ ಫೀಲ್ಡಿಗೆ ಇಳಿದಿರುವುದರಿಂದ ಅಡಿಕೆ ಲಾಬಿ ನಿರಾತಂಕವಾಗಿದೆ. ನೂರಾರು ಎಕರೆ ಕಾಫಿ ಪ್ಲಾಂಟೇಷನ್ ಇರುವಾತನದೇ ಲಕ್ಷಾಂತರ ರೂ. ಸಾಲಮನ್ನಾ ಆಗಿರುವುದರಿಂದ ನಮ್ಮ ಆಸಾಮಿ ಸಾಲಮನ್ನಾ ಆಗದೇ ಇರ್ತದಾ ಎಂಬ ಆಶಾವಾದ ಅಡಿಕೆ ತೋಟಿಗರದು.



ಶಾಂತಾರಾಂ ಹೆಗಡೆ

ತೋಟಿಗರಲ್ಲಿ ಒಂದಿಷ್ಟು ಮಂದಿ ನಿಜವಾಗಿಯೂ ಸಂಕಷ್ಟದಲ್ಲಿದ್ದಾರೆ. ಅಡಿಕೆ ಜತೆ ಮಾಯಾ ಬೆಳೆ ವೆನಿಲ್ಲಾ ಬೆಳೆಯಲು ತೋಟಿಗರು ಸಹಕಾರಿ ಸಂಘ, ಟಿಎಸ್‌ಎಸ್, ಪಿಎಲ್‌ಡಿ ಬ್ಯಾಂಕ್‌ಗಳಿಂದ ಆಸಾಮಿಗೆ ಸಾಲ ಎತ್ತಿದ್ದರು. ಆದರೆ ಬೆಳೆ ನಾಶವಾಗಿ ಪ್ರಾಮಾಣಿಕ ತೋಟಿಗರು ತಾಪತ್ರಯಕ್ಕೆ ಬಿದ್ದಿದ್ದರು. ಆಸಾಮಿ ಸಾಲದ ಬಡ್ಡಿ ಡಬ್ಬಲ್, ತ್ರಿಬಲ್ ಆಗಿದೆ. ಈ ಆಸಾಮಿ ಸಾಲ 'ಕೃಷಿ ಸಾಲ' ಅಲ್ಲ, ಹೀಗಾಗಿ ಬಡ್ತಿ ರಿಯಾಯ್ತಿ ಸವಲತ್ತು ಅಥವಾ ಸಾಲಮನ್ನಾ ಸವಲತ್ತು ದಕ್ಕಲ್ಲ, ಈ ಅಮಾಯಕ, ಅಸಹಾಯಕ ತೋಟಿಗರಿಗಿಂತ ಹೆಚ್ಚು ವಂಚಕರ ಆಸಾಮಿ ಸಾಲಗಾರರೂ ಶಿರಸಿ ಸೀಮೆಯಲ್ಲಿದ್ದಾರೆ. ಪ್ರತಿಷ್ಠಿತ ಟಿಎಸ್‌ಎಸ್ ಸಂಸ್ಥೆಯಿಂದ ಲಕ್ಷಾಂತರ ರೂ. ಆಸಾಮಿ ಸಾಲ ಎತ್ತಿರುವ ಕೆಲವು ದಗಾಕೋರರಿಗೆ ಟಿಎಸ್‌ಎಸ್ ಅಧ್ಯಕ್ಷ ಶಾಂತಾರಾಮ ಹೆಗಡೆ ಅಥವಾ ಡೈರೆಕ್ಟರ್‌ಗಳ ಕೃಪಾಕಟಾಕ್ಷವಿದೆ. ಕೆಲವರಂತೂ ತಮ್ಮ ಶೋಕಿ, ಕೃಷಿಯೇತರ ಚಟುವಟಿಕೆಗೆ ಆಸಾಮಿ ಸಾಲ ತೆಗೆದು ಬಳಸಿದ್ದಾರೆ.



ಉಮೇಶ್

ಇವರಿಗೆ ತಿರುಗಿ ಸಾಲ ತುಂಬೊ ತಾಕತ್ತು ಇದೆ. ಆದರೆ ಅಡಿಕೆ ಲಾಬಿಯ ಪ್ರಚಂಡರಿವರು. ಹೀಗಾ... ಬೇಕಂತಲೇ ಸಾಲ ತುಂಬುತ್ತಿಲ್ಲ, ಇಂದಲ್ಲ ನಾಳೆ ... ಸ್ವಾಮೀಜಿ, ಶಾಂತಣ್ಣ ಉಮ್ಮಣ್ಣ ವಗೈರೆ ವಿಪ್ರ ಕುಲೋದ್ಧಾರಕರು ... ಸಾಮಿ ಸಾಲ ಮನ್ನಾ ಮಾಡಿಸ... ಬಿಡುವುದಿಲ್ಲವೆಂದ ಭರವಸೆ ... ಇವರಿಗೆ. ಅಂದರೆ ಸರ್ಕಾರಕ್ಕೆ ... ಟೊಪ್ಪಿಗೆ ಹಾಕಿಯೇ ತೀರಬೇಕೆ... ನೀಚತನ!!

ಹದಿನೈದು-ಇಪ್ಪತ್ತು ಲಕ್ಷ ... ಯಿಗಳಿಗೆ ತನ್ನ ತೋಟದ ಅಡಿಕೆ... ಮೆಣಸು ಇತ್ಯಾದಿ ಉತ್ಪನ್ನ... ಫಲಗುತ್ತಿಗೆ ನೀಡುವ ಕು... ಹೈಗನೂ ಸಾಲ ತುಂಬದೇ ... ದಿವಾಳಿ ಎಂದು ಪೋಸು ಕೊಡು... ಸ್ಕ್ಯಾಂಪಲ್ಲುಗಳು ಶಿರಸಿ-ಯಲ್ಲಾಪುರ-ಸಿದ್ದಾಪು... ಸಾಕಷ್ಟಿದೆ. ಟಿಎಸ್‌ಎಸ್‌ನ ಕೆಲವು ಸಾಲಗಾರರು ... ಶ್ರೀಮಂತರಾಗುವ ಸ್ಕೆಚ್ ಹಾಕೇ ಸಾಲ ಎತ್ತಿದ್ದಾರೆ. ... ಗೊತ್ತಿದ್ದೂ ಟಿಎಸ್‌ಎಸ್ ಆಡಳಿತಗಾರರು ಕಣ್ಣು-... ಮುಚ್ಚಿಕೊಂಡಿದ್ದಾರೆ! ಕೆಲವು ಡೈರೆಕ್ಟರ್ ಮತ್ತು ... ಶಾಂತಣ್ಣ ಸಂಸ್ಥೆಗೆ ಪಂಗನಾಮ ಹಾಕಿ ಸಾಲ ... ಫಲಾನುಭವಿ ಆಗುವುದು ಹೇಗೆಂಬ ಪಾಠವೂ ... ತ್ತಿದ್ದಾರೆ. ಒಟ್ಟನಲ್ಲಿ ಸರ್ಕಾರಕ್ಕೆ ದೊಡ್ಡ ದೋಖಾ ಹಾ... ಅಡಿಕೆ ಲಾಬಿ ಸನ್ನದ್ಧವಾಗಿದೆ.

ಮೊನ್ನೆ ಸ್ವರ್ಣವಲ್ಲಿ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ... 'ಸಾಲಮನ್ನಾ' ಸಮಾವೇಶದಲ್ಲಿ ಸೇರಿದ ಸಾಲ... ಮುಖದಲ್ಲಾಗಲಿ, ಹಾವಭಾವದಲ್ಲಾಗಲಿ ಬೆಳೆ ಹಾ... ಚಹರೆ ಒಂಚೂರು ಇರಲಿಲ್ಲ, ಗುಟ್ಕಾ ಬಂದಾದರೆ ... ಗುಟ್ಕಾಕ್ಕೆ ಬಳಸುವ ಪ್ಲಾಸ್ಟಿಕ್ ಪೌಂಚ್ ಬ್ಯಾನಾದರೆ ... ಬೆಲೆ ಕುಸಿವ ಆತಂಕ ಅವರಲ್ಲಿತ್ತೇ ವಿನಃ ಬೆಳೆ ಹಾನಿ... ಸಾಲದ ಶೂಲಕ್ಕೆ ಬಿದ್ದ ಸಂಕಟವಿರಲಿಲ್ಲ, ಸ್ವಾ... ದಯೆಯಿಂದ ಸಾಲಮನ್ನಾ ಆದರೆ ಆಗಲೆಂಬ ದ... ಇತ್ತಷ್ಟೇ. ಆದರೆ ಸ್ವಾಮೀಜಿ ಮಾತ್ರ "ಈ ವರ್ಷ ... ಪಟ್ಟಿಯಲ್ಲಿ ಫಸಲಿಲ್ಲ... ಅಡಿಕೆಗೆ ಯೋಗ್ಯ ಬೆಲೆ ... ಸಿಗುತ್ತಿಲ್ಲ.... ರೈತರು ಕಂಗಾಲಾಗಿದ್ದಾರೆ..." ... ಅತಿಶಯೋಕ್ತಿ ಬಿತ್ತರಿಸಿದರು. ತನ್ನವರ ಹಿತಕಾಪಾ... ಸರ್ಕಾರಕ್ಕೆ ವಂಚಿಸುವ ಮಾತಾಡಿದರು. ಅಶಕ್ತ-ಅಸಹಾ... ಆಸಾಮಿ ಸಾಲಗಾರರ ಬಗ್ಗೆ ಸ್ವಾ... ವಕಾಲತ್ತು ಮಾಡಿದರೆ ಯ... ಆಕ್ಷೇಪಿಸಲಾರರು. ಆದರೆ ಈ ಬ... ಗುಂಪಲ್ಲಿ ಒಂದಿಷ್ಟು ಗೋಮುಖ... ಗಳು ನುಸುಳಿಕೊಂಡು ಸಾಲ... ಸುಖಕ್ಕೆ ಹಾತೊರೆಯುತ್ತಿರುವುದು ... ಪ್ರಾಂಜಲ ಮನಸ್ಸಿನಿಂದ ಗ... ಬೇಕಿದೆ. ಸರ್ಕಾರಕ್ಕೆ, ಸಹಕಾರಿ ... ಉಂಡೆನಾಮ ತಿಕ್ಕಲೆಂದೇ ... ಎತ್ತಿರುವ ಅಥವಾ ಬುದ್ಧಿಪೂ... ವಾಗೇ ಸಾಲ ಮರುಪಾವತಿ ... ದಿರುವುದು. ಮಸಲತ್ತುಗಾ... ಸ್ವಾಮೀಜಿಗೆ ಕೆಟ್ಟ ಹೆಸರು ಗ್ಯಾರಂಟಿ!!

ಅಡಿಕೆ ಬೆಳೆ ನಾಶ-ಬೆಲೆ ಇಳಿತದಿಂದ ಶಿರಸಿ ಸೀಮೆ... ಬರವಂತೂ ಬಂದಿಲ್ಲ, ದೊಡ್ಡ ಪ್ರಮಾಣದಲ್ಲಿ ... ಹಾನಿಯಾಗಿ ತೋಟಿಗರು ಕಂಗೆಡುವಂಥ ಪರಿಸ್ಥಿತಿ... ಇಲ್ಲ, ಆದರೆ ಅಡಿಕೆ ಲಾಬಿಯ ಲಫಡಾ ಮಂದಿ ಸ್ವ... ಸ್ವಾಮಿಗಳ ದಿಕ್ಕು ತಪ್ಪಿಸಿದ್ದಾರೆ. ಹಾಗಂತ ಶಿರಸಿಯ ... ವಹಿವಾಟು ಇಲ್ಲಿಯ ಬಾರು-ಕ್ಲಬ್‌ಗಳಲ್ಲಿ ಪ್ರತಿದಿನ ಲಕ್ಷಾಂತರ ರೂ. ಟರ್ನ್ ಓವರ್ ಕಂಡವರು ಹೇಳು... ಶಿರಸಿಯೊಂದರಲ್ಲೇ ಬರೋಬ್ಬರಿ ಮೂರು ಡಜನ್ ... ಕ್ಲಬ್‌ಗಳು ನಡೆಯುತ್ತಿವೆ. ಬಾ... ಗಲ್ಲಿಗೊಂದರಂತಿವೆ. ಇ... ಗೌರವಾನ್ವಿತ ಗಿರಾಕಿಗಳು-ಪ್ಲೇಯರ... ಬಹುತೇಕರು ತೋಟಪಟ್ಟಿಯ... ಅಡಿಕೆ ಬೆಳೆಗಾರರು. ಈ 36 ... ಕ್ಲಬ್‌ಗಳಲ್ಲಿ ಪ್ರತಿದಿನ 8-10 ಲ... ವಹಿವಾಟಾಗುತ್ತದಂತೆ.

ಶಿರಸಿ ಸೀಮೆಯ ಅಡಿಕೆ... ಗಾರರು ನಿಜವಾಗಿಯೂ ಸಂಕಷ್ಟ... ಬ್ಯಾಂಕುಗಳಲ್ಲಿ ಸಾಲ ಪಡೆ... ಸಾಧ್ಯವೇ ಇಲ್ಲ, ಶಿರಸಿ ವಿರಿ... ಆರ್ಥಿಕತೆ ನಿಂತಿರುವುದೇ ಅಡಿಕೆ ಮೇಲೆ ಅಲ್ಲವೆ ಸ್ವರ್ಣವಲ್ಲಿ ಸ್ವಾಮೀಜಿ? ಈಗ ... ಸಾಮೀಜಿ ಎಲ್ಲ ಆಸಾಮಿ ಸಾಲಗಾರರೂ ಸಾಚಾ... ಎಲ್ಲರ ಆಸಾಮಿ ಸಾಲವೂ ಮನ್ನಾ ಆಗಬೇಕಾ?

ಇದು ಸ್ವಾಮೀಜಿಯ 'ದಿವ್ಯದೃಷ್ಟಿಗೆ' ಬಿಟ್ಟ ವಿ...

• ನ...

ಭಟ್ಟಂಗಿ ಬಾಬಾ ರಾಮ್‌ದೇವ್ ಹುಟ್ಟಿದ್ದೆಲ್ಲಿಂದ?

ಕೋಳಿಯ ಗುದದ್ವಾರದಿಂದ ಹೊರಬರುವ ಮೊಟ್ಟೆ ತ್ಯಾಜ್ಯವೆಂದಾದರೆ, ಜಗತ್ತಿನ ಪ್ರತಿಯೊಂದು ಜೀವಿಯೂ ತ್ಯಾಜ್ಯವೆ! ತಾಯಿಯ ಗುಪ್ತಾಂಗದ ಮೂಲಕ ಹೊರಬಂದ ಬಾಬಾ ರಾಮ್‌ದೇವ್ ಮತ್ತು ಆತನ ಸರ್ಕಸ್‌ನಲ್ಲಿ ಭಾಗವಹಿಸಿದ 'ಬುದ್ಧಿ'ವಂತರೂ ...ಕರ!! ಹೆಣ್ಣನ್ನು ದೇವತೆಯೆಂದು ಪೂಜಿಸುವ ಈ ಮಂದಿ 'ಯೋನಿದ್ವಾರ'ವನ್ನು ...ಿ ಹೇಗೆ ಕೊಳಕೆನ್ನುತ್ತಾರೆ?

ಯೋಗ ಗುರು ರಾಮ್‌ದೇವ್‌ನ ಸರ್ಕಸ್ ಕಂಪೆನಿ ...ಟಕ್ಕೆ ಕಾಲಿಟ್ಟು ಭರ್ಜರಿ ವ್ಯಾಪಾರ-ವಹಿವಾಟು ...ತ್ತಿದೆ. ಈತನ ಸರ್ಕಸ್‌ಗಳನ್ನು ಮನರಂಜನೆಗಾಗಿ ...ರೂ ನೋಡಬಹುದಾಗಿತ್ತು. ಆದರೆ ಈತನ ಮೇರೆ ...ದ ಹುಚ್ಚಾಟಗಳನ್ನು ಸಹಿಸಿಕೊಳ್ಳುವುದಾದರೂ ಹೇಗೆ? ...ಗಡು ಚಿಂತನೆಗಳನ್ನು ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ...ಗಳೆಂದು ಹೋದಹೋದೆಡೆಯಲ್ಲೆಲ್ಲಾ ರಾಮ್‌ದೇವ್ ...ುತ್ತಿದ್ದಾನೆ. ತಾನು ಬೋಧಿಸುವುದು ಮಾತ್ರ ಸರಿಯಾದ ...ಕ್ರಮವೆಂದೂ, ತನ್ನ ಚಿಕಿತ್ಸಾ ವಿಧಾನವೇ ಜಗತ್ತಿನ ಶ್ರೇಷ್ಠ ಚಿಕಿತ್ಸಾ ವಿಧಾನವೆಂದೂ ಈ "ಮಾನವ ಮೂಳೆ ...ತ ಪೌಡರ್ ಔಷಧಿ" ಖ್ಯಾತಿಯ ಬಾಬಾ ಡಂಗೂರ ...ುತ್ತಿದ್ದಾನೆ.

...ೊನ್ನೆ ಮೂಡಬಿದಿರೆಯಲ್ಲಿ ತನ್ನ ಯೋಗಾ ಸರ್ಕಸ್ ...ತಲು ಅಪಾರ ಜನಸ್ತೋಮ ಸೇರಿದ್ದನ್ನು ಕಂಡು ...ಆದ ರಾಮ್‌ದೇವ್ ಜಗತ್ತಿನ ಬಹುಸಂಖ್ಯಾತರ ...ವಾದ ಕೋಳಿಮೊಟ್ಟೆಯನ್ನು ಹೊಲಸು ಎಂದು ...ನು ಹೊರಡಿಸಿದ್ದಾನೆ. "ಕೋಳಿ ತನ್ನ ಗರ್ಭಕೋಶದಲ್ಲಿ ...ೂಟ್ಟು ತ್ಯಾಜ್ಯ ದ್ವಾರದ ಮೂಲಕ ಹೊರಹಾಕುವ ...ಯನ್ನು ತಿಂದರೆ ಕೋಳಿಯ ಹೊಲಸನ್ನು ತಿಂದ ...ಥೇ, ಕೋಳಿ ಮೊಟ್ಟೆ ತಿನ್ನೀರಾ" ಎಂದು ಜಗತ್ತಿನ ...ಕ್ಕಿಂತಲೂ ಹೆಚ್ಚಿನ ಜನರನ್ನು ಹೊಲಸು ತಿನ್ನುವವರು ... ಅವಮಾನಿಸಿದ್ದಾನೆ ಈ ಢೋಂಗಿ ಬಾಬಾ.

...ಲವು ವರ್ಷಗಳ ಹಿಂದೆ ರಾಜ್ಯ ಸರ್ಕಾರವು ...ೂಟದೊಂದಿಗೆ ಶಾಲಾಮಕ್ಕಳಿಗೆ ಪೌಷ್ಠಿಕ ...ವಾದ ಮೊಟ್ಟೆ ನೀಡುವ ಪ್ರಸ್ತಾಪವಿರಿಸಿದ್ದಾಗ ಅದನ್ನು ...ಧಿಸಿದ್ದ ಜೈನ ಮುನಿ ತರುಣ ಸಾಗರ ಎಂಬ ...ರ್ವ ತಲೆಕೆಟ್ಟ ಸ್ವಾಮಿ "ಮೊಟ್ಟೆ ತಿಂದರೆ ಮಾನವನಲ್ಲಿ ...ಸಗುಣ ಬೆಳೆಯುತ್ತದೆ" ಎಂದಿದ್ದ. ಆ ಮೂಲಕ ...ನ 98%ಕ್ಕಿಂತಲೂ ಹೆಚ್ಚಿನ ಮಾಂಸಾಹಾರಿ ...ವರನ್ನು ಕ್ರೂರಿಗಳೆಂದು ಪರೋಕ್ಷವಾಗಿ ಜರೆದಿದ್ದ. ...ೇ ಅಂದಿನ ರದ್ದಿ ಪೇಪರಿನ ತನ್ನ ಅಂಕಣದಲ್ಲಿ "ಮಾಂಸ ತಿಂದರೆ ಹೊಟ್ಟೆ ಸ್ಮಶಾನವಾಗುತ್ತೆ" ಅಂತ ಗೋಳಾಡಿದ್ದ. ವಿವೇಕವಿರುವವರು ಆತನ ತಲೆಯೇ ಸ್ಮಶಾನವಾಗಿದೆ ಅಂದುಕೊಂಡು ಸುಮ್ಮನಾಗಿದ್ದರು.

ಇಂತಹ ಹುಚ್ಚಾಟಗಳಲ್ಲಿ ಈಗ ಬಾಬಾ ರಾಮ್‌ದೇವ್ ಸರದಿಯಷ್ಟೇ...

ಮೂಡಬಿದಿರೆಯಲ್ಲಿ ಮೊಟ್ಟೆ ತಿನ್ನುವ ಮಂದಿಯೇ ಅಧಿಕವಾಗಿದ್ದ ತನ್ನ ಸಭೆಯಲ್ಲಿ 'ತಲೆ ಕೆಳಗೆ ಕಾಲು ಮೇಲೆ' ಮಾಡುವ ಚಮತ್ಕಾರಗಳನ್ನು ಪ್ರದರ್ಶಿಸಿದ ನಂತರ "ಮೊಟ್ಟೆ ತಿನ್ನುವುದು ಹೊಲಸು ತಿನ್ನುವುದಕ್ಕೆ ಸಮ" ಎಂದು ಭಾಷಣ ನೀಡಿದ ರಾಮ್‌ದೇವ್‌ನ ತಗಡು ಚಿಂತನೆಗಳನ್ನು ಕೇಳಿಸಿಕೊಂಡ ಮೊಟ್ಟೆ ಭಕ್ಷಕರು ಅಹುದಹುದು ಎಂದು ತಲೆದೂಗಿ ತಾವು ಹೊಲಸು ಭಕ್ಷಕರು ಎಂದು ಒಪ್ಪಿಕೊಂಡು ಬಂದಿದ್ದಾರೆ. ಮೊಟ್ಟೆ ತಿನ್ನುವವರು ಕೇವಲ ದಲಿತ, ಶೂದ್ರ, ಅಲ್ಪಸಂಖ್ಯಾತರು ಮಾತ್ರವಲ್ಲ. ಎಂತಹ ಮಡಿ ಬ್ರಾಹ್ಮಣನೂ ಕ್ರೀಡಾಪಟುವಾಗಬೇಕಾದರೆ ಕನಿಷ್ಠ ಮೊಟ್ಟೆಯನ್ನಾದರೂ ತಿನ್ನಬೇಕು. ಸೈನ್ಯದಲ್ಲಿರುವ ಬ್ರಾಹ್ಮಣ ಮೊಟ್ಟೆ ತಿಂದೇ ತಿನ್ನುತ್ತಾನೆ. ಕೇವಲ ಗೆಡ್ಡೆಗೆಣಸು ತಿಂದರೆ ಬಾಬಾನಂತೆ ಯೋಗ ಕ್ಲಾಸು ನಡೆಸಬಹುದಷ್ಟೆ.

ಅಷ್ಟಕ್ಕೂ ಈ ಬಾಬಾ ತರಕಾರಿ ತಿನ್ನುವುದಿಲ್ಲವೇ? ಅವುಗಳಿಗೆ ಬಳಸುವ ಸಾವಯವ ಗೊಬ್ಬರಗಳಿಗೆ ಪ್ರಾಣಿಗಳ 'ಹೊಲಸು' ಬಳಸುವುದಿಲ್ಲವೇ? (ದನದ ಸೆಗಣಿಯಂತೂ ಶ್ರೇಷ್ಠ ಗೊಬ್ಬರ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ!!!) ಇಂತಹ 'ಹೊಲಸು' ಬಳಸಿ ಬೆಳೆಸುವ ತರಕಾರಿ ತಿಂದರೆ ಅದೂ ಹೊಲಸಾಗುವುದಿಲ್ಲವೇ?

ಕೋಳಿಯ ಗುದದ್ವಾರದಿಂದ ಹೊರಬರುವ ಮೊಟ್ಟೆ ತ್ಯಾಜ್ಯವೆಂದಾದರೆ, ಜಗತ್ತಿನ ಪ್ರತಿಯೊಂದು ಜೀವಿಯೂ ತ್ಯಾಜ್ಯವೆ; ರಾಮ್‌ದೇವ್‌ನ ಶಿಬಿರಗಳಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳೂ ಸೇರಿದಂತೆ ಸ್ವತಃ ಬಾಬಾ ರಾಮ್‌ದೇವ್ ಕೂಡಾ! ಕೋಳಿಯ ಗುದದ್ವಾರದಿಂದ ಹೊರಬಂದ ಮೊಟ್ಟೆ ಹೊಲಸೆಂಬುದಾದರೆ ತಾಯಿಯ ಗುಪ್ತಾಂಗದ ಮೂಲಕ ಹೊರಬಂದ ಬಾಬಾ ರಾಮ್‌ದೇವ್ ಮತ್ತು ಆತನ ಸರ್ಕಸ್‌ನಲ್ಲಿ ಭಾಗವಹಿಸಿದ 'ಬುದ್ಧಿ'ವಂತರೂ ಕೊಳಕರ.

ರಾಮ್‌ದೇವ್ ಮತ್ತವನ ಸರ್ಕಸ್ ಶಿಬಿರಾರ್ಥಿಗಳು ತನ್ನಿಂತಾನೇ ಉದ್ಭವವಾದವರೇ? ಇವರ ತಾಯಿ ಇವರನ್ನು ವಾಂತಿ ಮಾಡಿದ್ದೇ? ಹೆಣ್ಣನ್ನು ದೇವತೆಯೆಂದು ಪೂಜಿಸುವ ಈ ಮಂದಿ "ಯೋನಿದ್ವಾರ"ವನ್ನು ಅದು ಹೇಗೆ ಕೊಳಕೆನ್ನುತ್ತಾರೆ? ದುರಂತವೆಂದರೆ, ಈ ಢೋಂಗಿಯ ಮುಂದೆ ಕುರಿಗಳಂತೆ ಕೂತಿದ್ದ "ಬುದ್ಧಿವಂತ"ರಲ್ಲಿ ಇಂಥ ಒಂದೇ ಒಂದು ಪ್ರಶ್ನೆ ಹುಟ್ಟಲಿಲ್ಲ.



ಬಟ್ಟಂಗಿ ಬಾಬಾ ರಾಮ್‌ದೇವ್ "ಪೆಪ್ಸಿ, ಕೋಕ್ ಕುಡಿಯಬೇಡಿ. ಎಳನೀರು, ಮಜ್ಜಿಗೆ, ನಿಂಬೆ ಶರ್ಬತ್ ಕುಡಿಯಿರಿ" ಎಂದು ಫರ್ಮಾನು ಹೊರಡಿಸುತ್ತಾನೆ. ಇದಕ್ಕೆ ಎಲ್ಲರ ಸಹಮತವಿದೆ. ಆದರೆ ಇದೇ ಬಾಬಾ ಮೊನ್ನೆ ಅಣ್ಣಾ ಹಜಾರೆಯವರು ಉಪವಾಸ ತೊರೆಯುವಾಗ "ನಿಂಬೂಸ್" ಎಂಬ ಪೆಪ್ಸಿ ಕಂಪೆನಿಯ, ಎಸೆನ್ಸ್‌ಗಳಿಂದ ತಯಾರಿಸಿದ ಪಾನೀಯ ಕುಡಿಸಿದ್ದನ್ನು ಜಗತ್ತೇ ವೀಕ್ಷಿಸಿದೆ. ಈ ಗೋಸುಂಬೆ ಬಾಬಾ ಯಾರ ಕಿವಿಗೆ ಹೂ ಇಡಹೊರಟಿದ್ದಾನೆ?

ದೈನಿಕ ಆರೋಗ್ಯಕ್ಕೆ ಯೋಗ ಒಂದು ಉತ್ತಮ ಕಸರತ್ತು ನಿಜ. ಆದರೆ ಎಲ್ಲ ರೋಗಗಳಿಗೂ ಅದೇ ಅತ್ಯಂತ ಶ್ರೇಷ್ಠ ಚಿಕಿತ್ಸಾ ವಿಧಾನವೆಂದು ತನ್ನ ವೈದ್ಯರುಗಳನ್ನು, ವೈದ್ಯ ವಿದ್ಯಾರ್ಥಿಗಳನ್ನು, ಇತರೆ ಸಿಬ್ಬಂದಿಯನ್ನು ಬಾಬಾನ ಸರ್ಕಸ್ ಶಿಬಿರಗಳಿಗೆ ಅಟ್ಟಿರುವ ಮಣಿಪಾಲ ವಿಶ್ವವಿದ್ಯಾನಿಲಯದವರು ತಮ್ಮ ವೈದ್ಯಕೀಯ ಕಾಲೇಜುಗಳನ್ನು ಮುಚ್ಚಿ ಇದೇ ಸರ್ಕಸ್ ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಬಹುದಲ್ಲವೇ? ಬಾಬಾನ ಸರ್ಕಸ್ ಶಿಬಿರಗಳಲ್ಲಿ ಸರಣಿಯೋಪಾದಿಯಲ್ಲಿ ಭಾಗವಹಿಸುತ್ತಿರುವ ಮಣಿಪಾಲ ಮತ್ತಿತರ ವೈದ್ಯಕೀಯ ಕಾಲೇಜುಗಳ ವೈದ್ಯರು, ವಿದ್ಯಾರ್ಥಿಗಳು ಆತನ "ಯೋಗದಿಂದ ಬಂಜೆತನ ನಿವಾರಣೆ, ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಶಾಶ್ವತ ಪರಿಹಾರ" ಎಂಬ ಮೂರ್ಖ ಹೇಳಿಕೆಗಳನ್ನು ಆಲಿಸಿಕೊಂಡು ಅಹುದಹುದೆಂದು ತಲೆಯಾಡಿಸುವುದನ್ನು ನೋಡುವಾಗ ಅಯ್ಯೋ ಅನಿಸುತ್ತದೆ. ಎಲ್ಲಕ್ಕೂ ಬಾಬಾನ ಸರ್ಕಸ್‌ನಲ್ಲೇ ಪರಿಹಾರವಿರುವಾಗ ಲಕ್ಷ ಲಕ್ಷ ವ್ಯಯಿಸಿ ವರ್ಷಗಟ್ಟಲೆ ವಿವಿಧ ವೈದ್ಯಕೀಯ ಕೋರ್ಸುಗಳನ್ನು ಇವರುಗಳೆಲ್ಲಾ ಕಲಿಯುವುದಾದರೂ ಯಾಕೆ?

ಆಜಾದಿ ಬಚಾವೊ ಆಂದೋಲನದ ನಾಯಕರಾಗಿದ್ದ ರಾಜೀವ್ ದೀಕ್ಷಿತ್‌ರಿಗೆ ತೀವ್ರ ಹೃದಯದ ಕಾಯಿಲೆಯಿದ್ದಾಗಲೂ "ಯಾವುದೇ ಕಾರಣಕ್ಕೂ ಯೋಗದ ಹೊರತಾದ ಚಿಕಿತ್ಸೆ ಪಡೆಯಬೇಡ. ಯೋಗದಲ್ಲಿ ನಿಮ್ಮ ಕಾಯಿಲೆ ಗುಣವಾಗುತ್ತದೆ" ಎಂದು ಈ ಬಾಬಾ ಅವರ ತಲೆ ತಿಂದುಬಿಟ್ಟಿದ್ದ. ಮೊದಲೇ ಫ್ಯಾಸಿಸಂನ ಸಂಕುಚಿತತೆಯನ್ನು ತಲೆಗೆ ಹತ್ತಿಸಿಕೊಂಡಿದ್ದ ರಾಜೀವ್ ದೀಕ್ಷಿತ್ ಈ ಬಟ್ಟಂಗಿಯನ್ನು ನಂಬಿ ಸೂಕ್ತ ಚಿಕಿತ್ಸೆ ಪಡೆಯದೆ ಹೃದಯಾಘಾತವಾಗಿ ಸತ್ತುಬಿಟ್ಟರು.

ಇತ್ತೀಚೆಗೆ ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ "ನನ್ನ ಯೋಗ ಚಿಕಿತ್ಸೆಯಿಂದ ಕ್ಯಾನ್ಸರ್, ಟಿ.ಬಿ, ಕಿಡ್ನಿ ಕಾಯಿಲೆ, ಅಸ್ತಮಾ, ಹೃದಯದ ಕಾಯಿಲೆ, ಮಧುಮೇಹ, ರಕ್ತದೊತ್ತಡ ಮುಂತಾದ ಎಲ್ಲಾ ಕಾಯಿಲೆಗಳು ಯಾವುದೇ ಹಂತದಲ್ಲೂ ಗುಣಮುಖ ವಾಗುತ್ತದೆ" ಎಂದು ಈ ಬಾಬಾ ಭೋಂಗು ಬಿಟ್ಟಾಗ ಪತ್ರಕರ್ತರೋರ್ವರು "ಸಾಯಿಬಾಬಾ ಸಾವಿನ ದವಡೆಯಲ್ಲಿದ್ದಾರಲ್ಲಾ, ಅವರನ್ನು ರಕ್ಷಿಸಲು ನೀವ್ಯಾಕೆ ಪ್ರಯತ್ನಿಸಬಾರದು" ಎಂದು ಪ್ರಶ್ನಿಸಿದ್ದರು. ಈ ಪ್ರಶ್ನೆಯಿಂದ ತಬ್ಬಿಬ್ಬಾದ ಸರ್ಕಸ್ ಬಾಬಾ "ಅವರು ನನ್ನನ್ನು ಕರೆಯಲಿಲ್ಲ, ಈಗ ಅವರ ಕಾಯಿಲೆಯು ಅಂತಿಮ ಹಂತದಲ್ಲಿರುವುದರಿಂದ ಅವರನ್ನು ರಕ್ಷಿಸಲು ಸಾಧ್ಯವಿಲ್ಲ" ಎಂದು ಬೆವರೊರೆಸಿಕೊಳ್ಳುತ್ತಾ ತಿಪ್ಪೆ ಸಾರಿಸಿದ್ದ.

ಮಂಗಳೂರಿನ ನೆಹರೂ ಮೈದಾನದಲ್ಲಿ ಬಾಬಾನ ಸರ್ಕಸ್ ಶಿಬಿರಗಳಿಗೆ ಹೋಗಿ ಚಕ್ಕಳಮಕ್ಕಳ ಹಾಕಿ ಕೂತು, ಕೈ ಬೆರಳಿನಿಂದ ಮೂಗಿನ ಹೊಳ್ಳೆಗಳನ್ನು ಮುಚ್ಚಿ ಕಣ್ಣುಮುಚ್ಚಿ ಧ್ಯಾನಸ್ಥ ಸ್ವರೂಪದಲ್ಲಿ ಸಪತ್ನೀಕರಾಗಿ ಕೂತಿದ್ದ ಜಿಲ್ಲಾಧಿಕಾರಿ ಸುಭೋದ್ ಯಾದವ್, ಪೊಲೀಸ್ ಕಮೀಷನರ್ ಸೀಮಂತ್ ಕುಮಾರ್ ಸಿಂಗ್‌ರನ್ನು ಕಂಡಾಗ ನಮಗೇ ಮುಜುಗರವಾಗುತ್ತಿತ್ತು. ಕಾಯುವವರೇ ಈ ರೀತಿ ಬಟ್ಟಂಗಿಗಳ ಮುಂದೆ ಕುರಿಗಳಂತಾದರೆ, ಬುದ್ಧಿವಂತರ ಜಿಲ್ಲೆಯ ಜನರೇ ಮತಿಹೀನರಾದರೆ ರಾಮ್‌ದೇವ್‌ನಂಥ ಢೋಂಗಿ ಬಾಬಾಗಳನ್ನು ಬೈದೇನು ಪ್ರಯೋಜನ?


• ಇಸ್ಮತ್ ಫಜೀರ್

...ಕಾರಿಪುರದ ಹುಚ್ಚುರಾಯನ್ನ ತಂದೋರು ನೀವಂತೆ ಸಾರ್!

ಸಾಹಿತ್ಯ ಕ್ಷೇತ್ರದ ಸುದ್ದಿಗಳು ಶಾನೆ ಸ್ವಾರಸ್ಯಕರವಾಗಿವೆಯಂತಲ್ಲಾ. ಸಾಹಿತ್ಯ ...ೇಳನ ಮಾಡಿದರೆ ಕೈ ತುಂಬ ಕಾಸು ಮಾಡಿಕೊಳ್ಳಬಹುದೆಂದು ...ಕೊಂಡ ಸಾಹಿತ್ಯೋಪಜೀವಿಗಳು ಜಿಲ್ಲಾ ಸಾಹಿತ್ಯ, ತಾಲ್ಲೂಕು ಸಾಹಿತ್ಯ ...ೇಳನ ನಡೆಸಲು ಪಂಕಿತ ದಾರಿಗಳನ್ನ ಹುಡುಕಿಕೊಂಡಿದ್ದಾರಂತಲ್ಲಾ. ...ೂರಿನ ಸಾಹಿತ್ಯೋಪಜೀವಿಗಳು ದೇ.ಜವರೇಗೌಡರನ್ನ ಹಿಡಿದು ತಂದು ...ಾಗದ ತಕ್ಕಡಿ ಮೇಲೆ ಕೂರಿಸಿ, ಎಡಭಾಗದ ತಟ್ಟೆಗೆ ರದ್ದಿ ಪುಸ್ತಕವನ್ನೆಲ್ಲಾ ...ಡಿಸಿ ತುಲಾಭಾರ ಮಾಡಿಯೇಬಿಟ್ಟರಂತಲ್ಲಾ. ಸದರಿ ಪುಸ್ತಕದೊಳಗೆ ...ಸವಲಿಂಗಪ್ಪನವರು ಹೇಳಿದ್ದ ಬೂಸಾ ಸಾಹಿತ್ಯವೇ ತುಂಬಿದ್ದು ಅವು ...ೃ ದೇಜಗೌ ತುಲಾಭಾರಕ್ಕೆ ಹೇಳಿ ಮಾಡಿಸಿದಂತಿದ್ದವು. ಅಷ್ಟಕ್ಕೂ ...ಗೌ ಏನು ಎಂದು ಅನಾವರಣಗೊಂಡಿರುವ ಈ ಸಮಯದಲ್ಲಿ ... ಸಾಹಿತ್ಯವೆಲ್ಲಾ ತೂಕಕ್ಕೆ ಯೋಗ್ಯವಾದುದೆಂದು ಬಾಯಿಬಿಟ್ಟು ...ಲಾಗದು. ಇಂತಹ ಕಿಡಿಗೇಡಿ ಕೆಲಸ ಮಾಡಿದ್ದಾರೆಂದು ಚಾರ್ವಾಕ ...ದಾಸರ ಶಿಷ್ಯರು ಆಡಿಕೊಂಡು ಬಿದ್ದು ಬಿದ್ದು ನಕ್ಕರಂತಲ್ಲ. ಸದರಿ ...ರಂಭಕ್ಕೆ ಬಂದಿದ್ದ ಕೆ.ಆರ್.ಪೇಟೆ ಹಳೆ ಗುಮಾಸ್ತರಾದ ಕೃಷ್ಣ "ದೇಜಗೌ ...ಚಾರದ ವಿರುದ್ಧ ಹೋರಾಡಬೇಕು" ಎಂದು ಕರೆಕೊಟ್ಟರಂತಲ್ಲ. ... ದೇಜಗೌ ಅವರ ಮಗನ ಭ್ರಷ್ಟತೆ ಬಗ್ಗೆ ಏನೂ ಹೇಳದೆ ಕೃಷ್ಣ ...ಸಲಿದ್ದಾಗ "ಈ ಪ್ಯಾದೆ ಇನ್ನೂ ಆತ್ಮವಂಚನೆ ಮಾತನ್ನ ಬಿಟ್ಟಿಯಿಲ್ಲವಲ್ಲಾ" ... ಮರ್ಯಾದಸ್ಥರು ಮರುಗಿದರಂತಲ್ಲಾ, ಥೂತ್ತೇರಿ!

****

...ಸೂರಿನಲ್ಲಿ ದೇಜಗೌ ರದ್ದಿ ಪುಸ್ತಕದಿಂದ ತುಲಾಭಾರ ಮಾಡಿಸಿ ...ತ್ತಿದ್ದರೆ ಅತ್ತ ಸುತ್ತೂರಿನಲ್ಲಿ ಸತ್ತಂತಿರುವ ಸ್ವಾಮಿಗಳನ್ನೆಲ್ಲ ಒಟ್ಟಾಗಿ ...ದ ಯಡ್ಡಿ ಯಶಸ್ವೀ ಕಾರ್ಯಾಚರಣೆ ...ದನ್ನು ರೂಪಿಸಿ, ವಿರೋಧಿಗಳ ಬಾಯಿಗೆ ...ಮು ತುರುಕಿ, ಕೂಡಲೇ ಶಿಕಾರಿಪುರಕ್ಕೆ ...ದರಂತಲ್ಲಾ, ಅಲ್ಲಿ ಹುಚ್ಚುರಾಯ ಮೈಮೇಲೆ ...ಕೆ ಮಾತನಾಡುತ್ತ "ಇಂದು ನನ್ನ ಜನ್ಮ ... ಕೊಳ್ಳಬೇಕೊ ಅಥವಾ ಹೊಸದಾಗಿ ಅಳವಡಿಸಿಕೊಳ್ಳಬೇಕೋ ಎಂದು ಯೋಚಿಸುತ್ತಿದ್ದೇನೆ. ಯಾವುದಕ್ಕೂ ಮುಖ್ಯ ಮಂತ್ರಿಗಳ ಒಪ್ಪಿಗೆ ಮುಖ್ಯ" ಎಂದರಂತಲ್ಲಾ, ಆಗ ಯಡ್ಡಿಯವರು ಹಳೇ ಟ್ರಾನ್ಸ್‌ಫಾರ್ಮರ್ ತರಹ ಮುಖ ಮಾಡಿ "ಇಡೀ ಕರ್ನಾಟಕವನ್ನ ಮುಂದಿನ ಎರಡು ವರ್ಷದಲ್ಲಿ ನಂಬರ್ ಒನ್ ಮಾಡುತ್ತೇನೆ" ಎಂದು ಒಂದಾ ಮಾಡುವ ಬೆರಳು ತೋರಿದರಂತಲ್ಲಾ, ಥೂತ್ತೇರಿ!



****

ಶಿಕಾರಿಪುರದ ಹುಚ್ಚುರಾಯ ಈ ತರಹವಾಗಿ ಇಡೀ ಕರ್ನಾಟಕದ ತುಂಬ ಹೆಲಿಕಾಪ್ಟರಲ್ಲಿ ಓಡಾಡುತ್ತ ಮೆರೆಯುತ್ತಿರಬೇಕಾದರೆ ನಮ್ಮ ಕುಮಾರಣ್ಣನವರು ನಿವೃತ್ತಿ ಬಗ್ಗೆ ಯೋಚಿಸುತ್ತಿರುವ ಭೀಕರ ಸುದ್ದಿ ಬಡಿಯಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ರಾಧಿಕೆ ನಿನ್ನ ಸರಸವಿದೇನೆ, ರಾಧಿಕೆ ನಿನ್ನ ಸರಸವಿದೇನೆ, ಮುರುಳಿಯ ಮರೆಸಿ, ನಗುತಿಹೆ ಸರಸೀ, ನಿನ್ನ ...."

"ಹಲೋ?"

"ಹಲೋ, ನಾನು ಸಾರ್ ಯಾಹೂ."

"ಏನ್ರಿ ಯಾಹು ಅವರೆ?"

"ನಿಮ್ಮ ಕೈಮುಗಿತಿನಿ ಅಂತ ತೀರ್ಮಾನ ತಗೋಬೇಡಿ ಸಾರ್."

"ಯಾವ ತೀರ್ಮಾನ್ರಿ?"

"ಅದೇ ಸಾರ್, ರಾಜಕಾರಣದಿಂದ ನಿವೃತ್ತಿಯಾಗ್ತಿನಿ ಅಂದಿದ್ದಿರಲ್ಲಾ, ಆ ತೀರ್ಮಾನ ಬೇಡ."

"ಇವತ್ತಿನ ಪರಿಸ್ಥಿತಿಲಿ ನಾವು ಏನೋ ಹೇಳಿದ್ರೆ ಬೇರೆ ಇನ್ನೇನೋ ಆಗೊ ಅಂತ ಒಂದು ಅಭಿಪ್ರಾಯದಲ್ಲಿ ಇವೆಲ್ಲ ಸಾಮಾನ್ಯ ಕಂಡ್ರಿ."

"ಆದ್ರು ನಿವೃತ್ತಿ ಮಾತು ಬೇಡಿ ಸಾರ್."

"ಎಡೂರಪ್ಪನೂ ಹಾಗೇ ಹೇಳಿದ್ದಾರಲ್ರೀ?"

"ಆತ ಹೇಳಿರದು ವ್ಯಂಗ್ಯವಾಗಿ ಸಾರ್. ಈ ಸೂಳೆಮಕ್ಕಳು ತೊಲಗಿದ್ರೆ ಸಾಕು. ನಿಮ್ಮ ತಂದೆ ತರಹ ಮಾತಾ ಮಾಡಸೊ ..."

"ನಂಬಲ್ಲ, ನಾವು ನಮ್ಮ ಆತ್ಮೀಯರ ಮಾತನ್ನ ಕೂಡ ಅನುಮಾನದಲ್ಲಿ ನೋಡಬೇಕು ಅನ್ನತಕ್ಕಂತ ಅಭಿಪ್ರಾಯನ ನಮ್ಮ ತಂದೆಯವರಿಂದ ಕಲ್ತಿದ್ದಿವಿ. ಆದ್ರು ನಾನು ಇಷ್ಟೊಂದು ಹಗರಣ ಬಯಲಿಗೆಳದ್ರೂ ಜನಗಳು ಸುಮ್ಮನಿದ್ದಾರಲ್ರೀ. ನನಿಗೆ ಬೇಸರ ಬರದಿಲ್ಲವಾ?"

"ನಿಮ್ಮಂತವರು ಭ್ರಷ್ಟತನ ಬಯಲಿಗೆಳದ್ರೆ ಜನ ರೊಚ್ಚಿಗೇಳದಿಲ್ಲ ಸಾರ್."

"ಯಾಕೇಳದಿಲ್ಲ?"

"ಯಾಕೆ ಅಂದ್ರೆ ನೀವು ಒಂಥರಾ ಎಡೂರಪ್ಪನಂಗೇ ಅಲವೆ. ನೀವು ಮೊದ್ಲಿದ್ರಿ, ಆಮೇಲೆ ಅವುನು ಬಂದ. ನೀವು ಮಾಡಿದ್ದೆಲ್ಲಾ ಈಗ ಅವುನು ಮಾಡ್ತ ಅವುನೆ ಅಂತ ಜನಗಳು ಆಡಿಕಂಡಿದ್ದ ನಾನೇ ಕೇಳಿಸಿಗೊಂಡಿದ್ದೀನಿ. ಆಮೇಲೆ ಗಣಿ ವಿಷಯ ತಗಂಡ್ರೆ ನಿಮ್ಮ ಬ್ರದರ್ಸ್ ರಮೇಶ್, ಬಾಲಕೃಷ್ಣ ಬಾಗಿಯಾಗ್ಯವುರೆ. ಇನ್ನು ಭೂಮಿ ವಿಷಯ ತಗಂಡ್ರೆ ನಿಮ್ಮನ್ನ ಸೇರ್ಸ ನಿಮ್ಮ ಮನಿಯೋರೆಲ್ಲರ ಮೇಲೂ ಆರೋಪ ಇವೆ. ಅಷ್ಟಕ್ಕೂ ಈ ಶಿಕಾರಿಪುರದ ಹುಚ್ಚುರಾಯನ್ನ ತಂದು ಕುಣೆಯಕ್ಕೆ ಬಿಟ್ಟೋರು ಅಪ್ಪಮಕ್ಕಳೆ ಅಲವೆ. ಹಿಂಗೆಲ್ಲ ಜನಗಳು ಆಡಿಕೊಳ್ತಾ ಅವುರೆ. ಅಂಗಾಗಿ ಯಾರಾದ್ರು ಅಣ್ಣಾ ಹಜಾರೆ ತರಹದ ಜನ ಹುಚ್ಚುರಾಯಪ್ಪನ ಭ್ರಷ್ಟಾಚಾರನ ಬಯಲಿಗೆಳೆದು, ಉಪವಾಸ ಕುಂತಿದ್ರೆ ಖಂಡಿತ ಜನಗಳು ರೊಚ್ಚಿಗೇಳರು ಸಾರ್. ಲಿಂಗಾಯಿತರು ಬರದೆಯಿದ್ರೂ ಬೇರೆ ಜಾತಿಗಳಾದ್ರು ಬರತಿದ್ರು."

"ಹಾಗಾದ್ರೆ ನಮ್ಮ ಶ್ರಮಕ್ಕೆ ಬೆಲೆ ಬೇಡವೇನ್ರಿ?"

"ಅಂಗಂತ ಸಿಟ್ಟಾಗಿ ನಿವೃತ್ತಿ ತಗೋಬೇಡಿ ಸಾರ್. ಅಕಸ್ಮಾತ್ ನಿವೃತ್ತಿ ತಗೊಂಡ್ರೆ ಯಾವಾಗ್ಲು ರಾಧಿಕನ್ ಮನೇಲೆ ಇರಬೇಕಾಗತ್ತೆ."

"ಯಾಕ್ರಿ ಹಾಗೇಳ್ತರಿ?"

"ನಿಮ್ಮ ಕೈಲಿ ಯಾವ ಕೆಲಸನೂ ಆಗಲ್ಲ ಸಾರ್. ಒಳ್ಳೆ ಸಿನಿಮಾ ನಿರ್ಮಾಪಕರಾಗಕ್ಕೂ ಆಗಲ್ಲ, ಆ ಜಗ್ಗೇಶನ ಜೊತೆ ಸೇರಿಕೊಂಡು ಚೇಷ್ಟೆ ಮಾಡಬವುದಷ್ಟೇ. ಇನ್ನು ಬಿಜಿನೆಸ್ ಮಾಡೊ ನಾಲೆಡ್ಜಿಲ್ಲ. ಕಂಟ್ರಾಕ್ಟ್ ಮಾಡುಸಬವುದು. ಬರೊ ಸರಕಾರ ನಿಮ್ಮ ಬಿಲ್ಲನ್ನ ತಡೆಹಿಡಿತವೆ. ಅದಕ್ಕಿಂತ ಅಪಾಯಕಾರಿಯಾದದ್ದು ಏನಂದ್ರೆ ಈಗಾಗ್ಲೆ ನಿಮ್ಮನ್ನ ನೆಗ್ಲೆಟ್ ಮಾಡಿರೊ ಅನಿತಕ್ಕ ಸೋಡಾ ಚೀಟಿ ಕೊಟ್ಟು, ಅತ್ತ ರಾಧಿಕನೂ ತಾತ್ಸಾರ ಮಾಡಿದ್ರೆ ಮಾಡದೇನು? ಪಾಪ ಆಕೆ ನಿಮ್ಮನ್ನ ಸಹಿಸಿಕೊಂಡಿದ್ದೆ ರಾಜಕಾರಣದ ಬೆಳ್ಳಿ ಮೋಡ ನೋಡಿ. ಆದ್ರಿಂದ ನಿಮ್ಮ ನಿವೃತ್ತಿ ತೀರಾ ಭೀಕರವಾಗಿರೋದರಿಂದ ನಿವೃತ್ತಿ ಆಗಬೇಡಿ ಸಾರ್."

"ರೀ ಯಾಹು. ಇಂತ ಬುದ್ಧಿವಾದ ಹೇಳಕ್ಕೆ ನಿಮಗ್ಯಾರೂ ಸಿಗಲಿಲ್ಲವೇನ್ರಿ? ಎಂಬತ್ತು ವರ್ಷಾದ್ರೂ ನಮ್ಮ ತಂದೆ ಇನ್ನೂ ನಿವೃತ್ತಿಯಾಗಿಲ್ಲ. ಇನ್ನು ..."



ದುರಂತದ ಮುನ್ಸೂಚನೆ ಉಡುಪಿ ಜಿಲ್ಲೆಯ ಎರಡು ದುರ್ಘಟನೆಗಳು

ಭ್ರಷ್ಟಾಚಾರ ಈಗ ಎಲ್ಲರ ಬಾಯಲ್ಲೂ ಇರುವ ಎಲೆ ಅಡಿಕೆ. ಕರ್ನಾಟಕದಲ್ಲಂತೂ ಆ ಕುರಿತು ಮಾತು, ಹರಟೆ, ಚರ್ಚೆ ಉಪನ್ಯಾಸ ಇತ್ಯಾದಿಗಳಲ್ಲಿ ಇಡೀ ಆಯುಷ್ಯವನ್ನೇ ಕಳೆಯಬಹುದಾದಷ್ಟು ಭ್ರಷ್ಟಾಚಾರವನ್ನು ರಾಜ್ಯದ ಹಾಲಿ ಬಿಜೆಪಿ ಸರ್ಕಾರ ನಡೆಸಿದೆ. ಆದರೆ ಈ ಸರ್ಕಾರ ರಾಜ್ಯದಲ್ಲಿ ಪ್ರೋಷಿಸುತ್ತಿರುವ ಸಂಘ ಪರಿವಾರದ ಹಿಂಸೆ ಮತ್ತು ದಬ್ಬಾಳಿಕೆ ಅದರ ಭ್ರಷ್ಟಾಚಾರಕ್ಕಿಂತಲೂ ಹೆಚ್ಚು ಗಂಭೀರವಾದ ಸಮಸ್ಯೆ. ಉಡುಪಿ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಎರಡು ಘಟನೆಗಳನ್ನು ಈ ಮಾತಿಗೆ ನಿದರ್ಶನವಾಗಿ ಕೊಡಬಹುದು.

ದಯಾನಂದ ಶೆಟ್ಟಿ ಕೊಲೆ

ದಯಾನಂದ ಶೆಟ್ಟಿ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಹೆಬ್ರಿ ಸಮೀಪದ ಆರ್ಡಿ ಗ್ರಾಮದ ರೈತರು. ತೀರಿಕೊಳ್ಳುವಾಗ ಅವರಿಗೆ 50 ರ ಹರೆಯ. ಸುಮಾರು ಎಂಟು ಎಕರೆಯಷ್ಟು ಸ್ವಂತದ ಜಮೀನಿನಲ್ಲಿ ಸಾಗುವಳಿ ಮಾಡುವ ದಯಾನಂದ್ ಶೆಟ್ಟಿ ತನ್ನ ಕೃಷಿಗೆ ಮಾತ್ರವಲ್ಲದೆ ಹಾಲು ಮಾರಾಟದ ವ್ಯವಸಾಯಕ್ಕೆ ಕೂಡ ದೊಡ್ಡ ಸಂಖ್ಯೆಯಲ್ಲಿ ಜಾನುವಾರು ಸಾಕಿಕೊಂಡಿರುವವರು. ಅನಿವಾರ್ಯವಾಗಿ ಅವರು ಜಾನುವಾರು ಮಾರಾಟದ ದಂಧೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಕರ್ನಾಟಕದ ಯಾವುದೇ ಹಳ್ಳಿಯ ಕೃಷಿಗೆ ಸಂಬಂಧಿಸಿದ ಸಾಮಾನ್ಯ ಸತ್ಯ ಇದು. ಆದರೆ ಜಾನುವಾರು ಹತ್ಯಾ ನಿಷೇಧಕ್ಕಾಗಿ ಚಳವಳಿ ನಡೆಸುತ್ತಿರುವ ಆರ್.ಎಸ್.ಎಸ್., ವಿಹಿಂಪ ಮತ್ತು ಪೇಜಾವರರಂತಹ ಮಠಾಧೀಶರುಗಳು ಈ ಸತ್ಯದ ಬಗ್ಗೆ ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿದ್ದಾರೆ. ಇವರುಗಳ ಕುರುಡು ರಾಜಕೀಯದ ಇತ್ತೀಚೆಗಿನ ಬಲಿ, ಆರ್ಡಿಯ ರೈತ ದಯಾನಂದ ಶೆಟ್ಟಿ.

ಕಳೆದ ತಿಂಗಳು 18 ನೆಯ ತಾರೀಖು, ನಡುರಾತ್ರಿ ಕಳೆದು 2 ಗಂಟೆಯ ಸುಮಾರಿಗೆ, ಅವರ ಮನೆಯ ಸಮೀಪವೇ ಸುಮಾರು ಹತ್ತು ಜನರ ಗುಂಪೊಂದು ಅವರ ಮೇಲೆ ದೈಹಿಕ ಹಲ್ಲೆ ನಡೆಸಿತು, ಮರದ ರೀಪು, ರಾಡುಗಳಿಂದ ದಯಾನಂದ ಶೆಟ್ಟಿಯವರಿಗೆ ಹೊಡೆದು ನಂತರ ಅವರನ್ನು ಬಲಾತ್ಕಾರದಲ್ಲಿ ಸ್ಥಳದಿಂದ ಸುಮಾರು 15 ಕಿ.ಮೀ. ದೂರದಲ್ಲಿ ಇರುವ ಶಂಕರನಾರಾಯಣ ಪೊಲೀಸು ಠಾಣೆಗೆ ಕರೆದುಕೊಂಡು ಹೋದ, ಗುಂಪಿನವರು, ಅವರವಿರುದ್ಧವೇ ಜಾನುವಾರು ಕಳ್ಳತನದ ದೂರು ಕೊಟ್ಟರು. ಕೇಸ್ ಫಿಟ್ಟಿಂಗ್‌ಗೆ ಹೆಸರಾಗಿರುವ ಆ ಠಾಣೆಯ ಪೊಲೀಸರು ಆರೋಪಿಯ ದೈಹಿಕ ಸ್ಥಿತಿಯನ್ನು ಪರಿಶೀಲಿಸುವ ಗೋಜಿಗೇ ಹೋಗದೆ ಆ ದೂರನ್ನು ದಾಖಲಿಸಿಕೊಂಡರು.

ದೂರಿನ ಒಕ್ಕಣೆ ಪ್ರಕಾರ ದಯಾನಂದ ಶೆಟ್ಟಿ ಶೇಡಿಮನೆ ಗ್ರಾಮದ ಶ್ರೀಧರ ಹೆಗ್ಡೆ ಎಂಬವರ ಜಾನುವಾರುಗಳನ್ನು ಕದ್ದು ವಾಹನದಲ್ಲಿ ಸಾಗಿಸುತ್ತಿದ್ದರು. ಆದರೆ ವಾಸ್ತವವಾಗಿ ಹಲ್ಲೆ ನಡೆದಾಗ ದಯಾನಂದ ಶೆಟ್ಟಿ ಆ ವಾಹನದಲ್ಲಿ ಇರಲೇ ಇಲ್ಲ, ದಯಾನಂದ ಶೆಟ್ಟಿಯವರ ಮಕ್ಕಳು ಹೇಳುವ ಪ್ರಕಾರ, ತಮ್ಮ ತಂದೆ ಮನೆಯಲ್ಲಿ ಮಲಗಿದ್ದಾಗ, ಅಪರಾತ್ರಿಯಲ್ಲಿ ಬಂದು ಏನೋ ಕೆಲಸವಿದೆ ಎಂದು ಅವರನ್ನು ಕರೆದುಕೊಂಡು ಹೋಗಿ, ಜಾನುವಾರ ವ್ಯಾಪಾರ ಮಾಡುತ್ತಾರೆ ಎಂಬ ಕಾರಣಕ್ಕೆ ಅವರ ಮೇಲೆ ಹಲ್ಲೆ ನಡೆದಿದೆ. ಪೊಲೀಸು ಠಾಣೆಯಲ್ಲಿ ದಯಾನಂದ ಶೆಟ್ಟಿ, ತನ್ನ ಮೇಲೆ ಹಲ್ಲೆ ನಡೆಸಿದ ಶ್ರೀಧರ ಹೆಗ್ಡೆ ಮತ್ತು ಇತರ ನಾಲ್ಕು ಜನರ ವಿರುದ್ಧ ದೂರು ದಾಖಲಿಸಿದ್ದಾರೆ. ಆದರೆ ತಮ್ಮ ತಂದೆಗೆ ಬರಹಜ್ಞಾನವಿಲ್ಲದ್ದರಿಂದ ಪೊಲೀಸರೇ ಒಂದು ಕಾಟಾಚಾರದ ದೂರು ಬರೆದು ಅವರಿಂದ ಹೆಬ್ಬೆಟ್ಟು ಒತ್ತಿಸಿಕೊಂಡಿದ್ದಾರೆ ಎಂದು ಶೆಟ್ಟರ ಮಕ್ಕಳು ಹೇಳುತ್ತಾರೆ. ತನ್ನ ಮೇಲೆ ನಡೆದ ಹಲ್ಲೆಯಿಂದ ಗಂಭೀರವಾಗಿ ಅಸ್ವಸ್ಥರಾಗಿದ್ದ ದಯಾನಂದ ಶೆಟ್ಟಿ ಅವರನ್ನು ಕುಂದಾಪುರದ ಚಿನ್ಮಯ ಆಸ್ಪತ್ರೆಗೆ ಸೇರಿಸಲಾಗಿತ್ತು, ಆದರೆ ಈ ವಿಷಯವನ್ನು ಮರುದಿನದ ಸಂಜೆಯವರೆಗೂ ಅವರ ಮನೆಯವರಿಗೆ ಪೊಲೀಸರು ತಿಳಿಸಿರಲಿಲ್ಲ, ಕುಂದಾಪುರ ಆಸ್ಪತ್ರೆಯಲ್ಲಿ ದಯಾನಂದ ಶೆಟ್ಟಿಯವರ ದೇಹಸ್ಥಿತಿ ಹದಗೆಡುತ್ತ ಹೋದದ್ದರಿಂದ ಮಾರ್ಚ್ 26 ರಂದು ಅವರನ್ನು ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಗೆ ಸೇರಿಸಲಾಯಿತು. ಅವರ ಹೊಟ್ಟೆಯ ಕೆಳ ಭಾಗದ ಮೇಲೆ ಬಿದ್ದ ಬೂಟುಗಾಲಿನ ಒದೆತದಿಂದಾಗಿ ಅವರ ಎರಡೂ ಕಿಡ್ನಿಗಳು ಸಂಪೂರ್ಣವಾಗಿ ಜಖಂಗೊಂಡಿದ್ದವು. ಅವರ ಎದೆ ಮತ್ತು ತಲೆಗೆ ಸಹ ಗಂಭೀರವಾದ ಹೊಡೆತಬಿದ್ದಿತ್ತು, ಮಣಿಪಾಲ ಆಸ್ಪತ್ರೆಯಲ್ಲಿ ಅವರು ಹೆಚ್ಚುಕಡಿಮೆ ಪ್ರಜ್ಞಾಶೂನ್ಯರಾಗಿಯೇ ಇದ್ದು ತಾ. 5.4.2011 ರಂದು ತೀರಿಕೊಂಡರು.

ಇದಾದ ನಂತರ ಶಂಕರನಾರಾಯಣ ಪೊಲೀಸರು ದಯಾನಂದ ಶೆಟ್ಟಿಯ ಮೇಲೆ ಹಲ್ಲೆ ನಡೆಸಿದ 9 ಜನರ ವಿರುದ್ಧ ಸೆಕ್ಷನ್ 302 ಮತ್ತು 307 (ಮಾರಣಾಂತಿಕ ಹಲ್ಲೆಗೆ ಸಂಬಂಧಿಸಿದ ಕ್ರಿಮಿನಲ್ ಕಾಯ್ದೆಯ ಕಲಮುಗಳು)ರ ಅಡಿಯಲ್ಲಿ ಮತ್ತೊಮ್ಮೆ ದೂರು ದಾಖಲಿಸಿಕೊಂಡಿದ್ದಾರೆ. ಈ ಕೊಲೆ ಪ್ರಕರಣ ಕುರಿತು ಸೂಕ್ತ ತನಿಖೆ ನಡೆಸುವಂತೆ ಕೋಮು ಸೌಹಾರ್ದ ವೇದಿಕೆ, ಉಡುಪಿ ಜಿಲ್ಲೆಯ ಪೊಲೀಸು ವರಿಷ್ಠಾಧಿಕಾರಿಯವರಿಗೆ ಮನವಿ ಮಾಡಿತ್ತು, ಆ ಸಂದರ್ಭದಲ್ಲಿ, ಅವರು "ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ; ಇತರ ಆರೋಪಿಗಳನ್ನು ಹುಡುಕಲಾಗುತ್ತಿದೆ" ಎಂದು ತಿಳಿಸಿದ್ದರು. ಆದರೆ ದಯಾನಂದ ಶೆಟ್ಟಿಯವರ ಮನೆಯವರು ಮತ್ತು ಆಸುಪಾಸಿನವರು ಹೇಳುವ ಪ್ರಕಾರ, ಆರೋಪಿಗಳು ಊರಿನಲ್ಲಿ ಆರಾಮವಾಗಿ, ಏನೂ ಆಗದವರಂತೆ ಓಡಾಡಿಕೊಂಡಿದ್ದಾರೆ! ಊರವರು ಹೇಳುವಂತೆ ದಯಾನಂದ ಶೆಟ್ಟಿಯವರ ಮೇಲೆ ನಡೆದ ಹಲ್ಲೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು ಬೆಳ್ವೆ ವಿಜಯ ಶೆಟ್ಟಿ. ಇವರು ಸ್ಥಳೀಯ ಬಿಜೆಪಿ ನಾಯಕ ಬೆಳ್ವೆ ವಸಂತ ಶೆಟ್ಟಿಯವರ ಸೋದರ. ವಿಜಯ ಶೆಟ್ಟಿಯವರ ಆ ಕೃತ್ಯಗಳ ಬಗ್ಗೆ ಹಲವು ಕತೆಗಳಿವೆ. ಆದರೆ ಶಂಕರನಾರಾಯಣ ಠಾಣೆಯ ಪೊಲೀಸರ ಬೆಂಬಲ ಆತನಿಗೆ ಇರುವ ಕಾರಣಕ್ಕೆ, ಆತನ ವಿರುದ್ಧ ಯಾವ ಕೇಸೂ ದಾಖಲಾಗುವುದಿಲ್ಲ, ನಾಲ್ಕು ವರ್ಷಗಳ ಹಿಂದೆ, ಆರ್ಡಿ ಗ್ರಾಮದ ಸಮೀಪ ಗೋಳಿ ಅಂಗಡಿಯಲ್ಲಿ ರಹಿಮಾನ್ ಎಂಬ ಮುಸ್ಲಿಮ್ ಯುವಕ ಕೆ.ಎಫ್.ಡಿಯ ಪೋಸ್ಟರ್ ಅಂಟಿಸಿದ್ದಕ್ಕೆ, ವಿಜಯ ಶೆಟ್ಟಿ, ಅವನ ಅಷ್ಟೂ ಎಲುಬು ಪುಡಿಯಾಗುವ ಹಾಗೆ ಥಳಿಸಿ ನಂತರ ಮುಖವನ್ನು ಡಾಂಬರು ರಸ್ತೆಗೆ ತಿಕ್ಕಿದ್ದನಂತೆ!

ಇಂತಹದ್ದೇ ಮನಸ್ಥಿತಿಯಲ್ಲಿ 2006 ರಲ್ಲಿ ಭಜರಂಗಿಗಳು, ಉಡುಪಿ ಜಿಲ್ಲೆಯ ಬಾರಕೂರು ಸಮೀಪದ ಕಾವ್ರಾಡಿಯಲ್ಲಿ, ಜಾನುವಾರು ದಲ್ಲಾಳಿ ಕೆಲಸ ಮಾಡುತ್ತಿದ್ದರು ಎಂಬ ಕಾರಣಕ್ಕೆ 80 ರ ಹರೆಯದ ಹಾಜಾಳಿ ಕೃಷ್ಣಯ್ಯನವರನ್ನು ಹೊಡೆದು ಕೊಂದಿದ್ದರು. ಕುಂದಾಪುರ ತಾಲ್ಲೂಕಿನ ಕಂಡ್ಲೂರಿನಲ್ಲಿ ಕಳೆದ ವರ್ಷ, ಕರಾಣಿ ಮತೀನ್ ಎಂಬ ಮುಸ್ಲಿಮ್ ಯುವಕ ತನ್ನ ಪಿಕಪ್‌ನಲ್ಲಿ ಜಾನುವಾರು ಸಾಗಿಸುತ್ತಿದ್ದ ಎಂಬ ಕಾರಣಕ್ಕೆ ಪೊಲೀಸರು ಆತನನ್ನು ಅಟ್ಟಿಸಿಕೊಂಡು ಹೋಗಿ, ಅವನು ಹೊಳೆಯಲ್ಲಿ ಮುಳುಗಿ ಸತ್ತ, ಇದೀಗ ದಯಾನಂ[ದ] ಶೆಟ್ಟಿಯವರ ಕೊಲೆಯಾಗಿದೆ. ಜಾನುವಾರು ಸಾಗಿಸುವವರ ಮೇಲೆ ಭಜರಂಗಿಗಳ[ು] ನಡೆಸುವ ಹಲ್ಲೆಯಿಂದ ತಮ್ಮ ದುಡ್ಡು, ವಾಚು, ಮೊಬೈಲ್‌ಗಳ ಜೊತೆ ಕೈ[] ಕಾಲು ಕಳೆದುಕೊಂಡವರಂತೂ ಅಸಂಖ್ಯ. ಬಿಜೆಪಿ ಸರ್ಕಾರದ ಜಾನುವಾರ[ು] ಹತ್ಯಾ ನಿಷೇಧ ಕಾಯ್ದೆ 2010 ಜಾರಿಗೆ ಬಂದರೆ ಈ ಬಗೆಯ ಹಿಂಸೆ[] ಧರ್ಮಕಾರಣವೂ ಪ್ರಾಪ್ತವಾಗುತ್ತದೆ; ಕಾನೂನಿನ ಸಮ್ಮತಿಯೂ ದೊರೆಯುತ್ತದ[ೆ] ಹಿಂಸೆ ಜನಜೀವನದ ಹಾಸು ಹೊಕ್ಕಾಗುತ್ತದೆ.

ಎಬೆನೀಜರ್ ಚರ್ಚ್ ಮೇಲೆ ದಾಳಿ

ಬಿಜೆಪಿ ಸರ್ಕಾರದ ಆಳ್ವಿಕೆಯಲ್ಲಿ ಬಹುಸಂಖ್ಯಾತ ಹಿಂದೂ ಸಮುದಾಯ[] ಹೆಸರಿನಲ್ಲಿ ನಡೆಯುವ ದುಂಡಾವರ್ತಿ, ಶಾಸನಬದ್ಧವಾಗುವ ದಿನ ದೂರವಿಲ್ಲ[] ಸಂಘ ಪರಿವಾರದ ಅಜೆಂಡಾದ ಭಾಗವಾಗಿರುವ ಮತಾಂತರ ನಿಷೇಧ ಕಾಯ್ದೆಗ[] ಸೂಕ್ತ ವೇದಿಕೆ ನಿರ್ಮಿಸಲು 2009 ರಲ್ಲಿ ಚರ್ಚ್ ದಾಳಿಗಳನ್ನು ಪೂರ್ವಯೋಜಿ[ತ]ವಾಗಿ ನಡೆಸಲಾಗಿತ್ತು, ಈಗ ಮತ್ತೊಮ್ಮೆ ಆ ಪ್ರಸ್ತಾಪವನ್ನು ಮುನ್ನೆಲೆ[ಗೆ] ತರಲು ಮಂಗಳೂರಿನ ಕೆಲವು ಕ್ರೈಸ್ತ ಶಿಕ್ಷಣ ಕೇಂದ್ರಗಳು ಮತ್ತು ಉಡುಪಿಯ[] ಚರ್ಚ್ ಒಂದರ ಮೇಲೆ ವ್ಯವಸ್ಥಿತವಾಗಿ ಗುಂಪು ದಾಳಿ ನಡೆದಿದೆ. ಮಂಗಳೂರಿನ[] ಮಾಜಿ ಕಾರ್ಪೊರೇಟರ್ ಲ್ಯಾನ್ಸಲಾಟ್ ಪಿಂಟೋ ಅವರ ಉಸ್ತುವಾರಿಯ[ಲ್ಲಿ] ಹಲವು ವರ್ಷಗಳಿಂದ ನಡೆಯುತ್ತಿದ್ದ ಅಭಯಾಶ್ರಮದ ಮಕ್ಕಳು ಪ್ರವಾ[ಸ] ಹೊರಟಾಗ, ಅವರು ಮತಾಂತರಗೊಳ್ಳಲು ಹೋಗುತ್ತಿದ್ದಾರೆ ಎಂದು ಆಪಾದಿ[] ಭಜರಂಗದಳದವರು ಅವರನ್ನು ತಡೆದಿದ್ದಾರೆ; ಪೊಲೀಸರು ಆ ಕುರಿತು ದೂರ[ು] ದಾಖಲಿಸಿಕೊಂಡು ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಿಗೆ ಒಪ್ಪಿಸಿದ್ದಾ[ರೆ].

ಇನ್ನೊಂದು ಪ್ರಕರಣದಲ್ಲಿ ಮಂಗಳೂರಿನ ಕೋಟೆಕಾರಿನ ಸ್ಟೆಲ್ಲಾ ಮೇರಿಸ್[] ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಗುಲ್ಬರ್ಗಾ ಜಿಲ್ಲೆಯ ತಮ್ಮ ಮನೆಗಳಿ[ಗೆ] ಹೋಗಲು ಬಸ್‌ನಲ್ಲಿ ಕುಳಿತಿದ್ದಾಗ, ಭಜರಂಗಿಗಳು ಅವರನ್ನು ಬಲಾತ್ಕಾರದ[ಿಂದ] ಕೆಳಗೆ ಇಳಿಸಿದ್ದಾರೆ. ಈ ಎರಡು ಪ್ರಕರಣಗಳಲ್ಲಿ ಮಕ್ಕಳ ಹೆತ್ತವರಿಂದ ಮತಾಂತ[ರ] ಅಥವಾ ಬಲಾತ್ಕಾರದ ಕುರಿತು ಒಂದೇ ಒಂದು ದೂರು ಇರಲಿಲ್ಲ! ಸ್ಟೆಲ[್ಲಾ] ಮೇರಿಸ್ ಸಂಸ್ಥೆ ಮಂಗಳೂರಿನಲ್ಲಿ 1938 ರಿಂದಲೂ ಅಸ್ತಿತ್ವದಲ್ಲಿದೆ! ಇದ[ು] ವರೆಗೂ ಆ ಸಂಸ್ಥೆಯ ವಿರುದ್ಧ ಯಾವುದೇ ಆರೋಪವಿರಲಿಲ್ಲ!

ಮಂಗಳೂರಿನ ಈ ಘಟನೆಗಳ ಬೆನ್ನಿಗೇ ಏಪ್ರಿಲ್ 14 ರಂದು ಮಲ್ಪೆಯ[] ಎಬಿನೀಜರ್ ಚರ್ಚ್, ಮತಾಂತರದಲ್ಲಿ ತೊಡಗಿದೆ ಎಂದು ಆರೋಪಿ[] ಸುಮಾರು 200 ಯುವಕರ ಗುಂಪು ಚರ್ಚಿನ ಆವರಣದೊಳಗೆ ನುಗ್ಗಿ[] ಎಬೆನೀಜರ್ ಚರ್ಚ್ ಮಲ್ಪೆಯಲ್ಲಿ, ಉಡುಪಿ ಮಾಜಿ ಲೋಕಸಭಾ ಸದ[ಸ್ಯ] ಮನೋರಮ ಮಧ್ವರಾಜ್‌ರ ಮನೆಯ ಸಮೀಪ, ರಸ್ತೆಯ ಪಕ್ಕದಲ್ಲೇ ಇದ[ೆ] ಅಲ್ಲಿ ರಹಸ್ಯವಾದ ಯಾವ ಕಾರ್ಯಕ್ರಮವೂ ನಡೆಯಲು ಸಾಧ್ಯವೇ ಇ[ಲ್ಲ] ಮಲ್ಪೆಯಲ್ಲಿ ಈ ಚರ್ಚ್ 75 ವರ್ಷಗಳಿಂದ ಇದ್ದು ಇದರ ಮಾ[] ಸಂಸ್ಥೆಯಾದ ಯುನೈಟೆಡ್ ಬಾಸೆಲ್ ಮಿಷನ್ ಚರ್ಚಿಗೆ ಜಿಲ್ಲೆಯಲ್ಲಿ 15[] ವರ್ಷಗಳ ಉಜ್ವಲಸೇವೆಯ ಚರಿತ್ರೆ ಇದೆ. ಇದುವರೆಗೆ ಆ ಚರ್ಚ್ ನಡೆಸು[] ಸಂಸ್ಥೆಗಳ ವಿರುದ್ಧ ಮತಾಂತರದ ಆರೋಪ ಬಂದಿರಲಿಲ್ಲ, ಬಾಸೆಲ್ ಮಿಷನ್‌ನಂತ[ಹ] ಸಂಸ್ಥೆ ಈಗ ಸಾರ್ವಜನಿಕರ ಎದುರು ತನ್ನನ್ನು ತಾನೇ ಹೀಗೆ ಸಮರ್ಥಿಸಿಕೊಳ್ಳಬೇಕಾ[ದ] ಅಸಹನೀಯ ಪರಿಸ್ಥಿತಿಯನ್ನು ರಾಜ್ಯದಲ್ಲಿ ಬಿಜೆಪಿ ನಿರ್ಮಾಣ ಮಾಡಿದೆ.

ಮಲ್ಪೆಯ ಎಬೆನೀಜರ್ ಚರ್ಚ್ ಪ್ರತಿವರ್ಷ ಬೇಸಿಗೆಯಲ್ಲಿ ಮಕ್ಕಳಿಗಾ[ಗಿ] ಡೇಕೇರ್ ಸೆಂಟರ್ ಹಾಗೂ ಒಂದು ವಾರದ ಬೈಬಲ್ ಶಾಲೆಯನ್ನು ನಡೆಸುತ್ತ[ದೆ] ಇವುಗಳಲ್ಲಿ ಪಾಲುಗೊಳ್ಳುವ ಮಕ್ಕಳಲ್ಲಿ ಹೆಚ್ಚಿನವರು ಕ್ರೈಸ್ತ ಮತಕ್ಕೆ ಸೇರಿದವರ[ು] ಸ್ಥಳೀಯ ಹಿಂದೂ ಮತ್ತು ಮುಸ್ಲಿಂ ಮಕ್ಕಳೂ ಕೆಲವರು ಅಲ್ಲಿನ ಚಟುವಟಿಕೆಗಳ[ಲ್ಲಿ] ಭಾಗವಹಿಸುತ್ತಾರೆ. ಮೊನ್ನೆ ಏಪ್ರಿಲ್ 14 ರಂದು ಬೆಳಿಗ್ಗೆ 11 ಗಂಟೆಯ ಸುಮಾರಿಗೆ ಎಬೆನೀಜರ್ ಚರ್ಚ್ ಮತಾಂತರದಲ್ಲಿ ತೊಡಗಿದೆ ಎಂಬ ಕಾರ[ಣ] ಕೊಟ್ಟು ಅದರ ಶಿಕ್ಷಣ ಕೇಂದ್ರಗಳಿಗೆ ನುಗ್ಗಿದ ಗುಂಪಿನವರು ಕ್ರೈಸ್ತ ಧರ್ಮವ[ನ್ನು] ಬಾಯಿಗೆ ಬಂದಂತೆ ನಿಂದಿಸುತ್ತ "ಮಲ್ಪೆ ಬೆತ್ಲಹೇಮಲ್ಲ" ಎಂದು ಮುಂತಾ[ಗಿ] ಘೋಷಿಸುತ್ತ, ಗಲಾಟೆ ಎಬ್ಬಿಸುತ್ತಿದ್ದಾಗ ಪೊಲೀಸರು ಸುಮ್ಮನೆ ನಿಂ[ತು] ನೋಡುತ್ತಿದ್ದರು. ಗುಂಪಿನವರು ಪೊಲೀಸರಿಗೆ ಮೊದಲೇ ತಿಳಿಸಿ ತಮ್ಮೊಟ್ಟ[ಿಗೆ] ಕರೆದುಕೊಂಡು ಬಂದ ಹಾಗಿತ್ತು.

ಶಾಲೆಯ ಹಿಂದೂ ಮಕ್ಕಳನ್ನು ಹೊರಗೆ ಕಳುಹಿಸುವಂತೆ ಎಬೆನೀಜ[ರ್] ಚರ್ಚಿನ ಮುಖ್ಯಸ್ಥ ರೆವರೆಂಡ್ ಬರ್ಟ್ ಅಮ್ಮನ್ನ ಅವರನ್ನು ಗುಂ[ಪು] ಒತ್ತಾಯಿಸಿದಾಗ, ಪೊಲೀಸರೂ ಅದಕ್ಕೆ ದನಿಗೂಡಿಸಿದರು. ಅಮ್ಮನ್ನ [] ಬೇಡಿಕೆಯನ್ನು ದೃಢವಾಗಿ ನಿರಾಕರಿಸಿದರು. "ಈ ಮಕ್ಕಳನ್ನು ಅವರ ಹೆತ್ತವ[ರು] ಇಲ್ಲಿಗೆ ಕಳುಹಿಸಿದ್ದಾರೆ. ನಾವು ಯಾರನ್ನೂ ಇಲ್ಲಿ ಬಲಾತ್ಕಾರದಲ್ಲಿ ಅಥ[ವಾ] ಒತ್ತಾಯದಿಂದ ಕರೆತಂದಿಲ್ಲ, 15 ವರ್ಷದಿಂದ ನಾವು ಇಲ್ಲಿ ಬೈಬಲ್ ಶಾ[ಲೆ] ನಡೆಸುತ್ತಿದ್ದೇವೆ. ಎಷ್ಟು ಜನರನ್ನು ಮತಾಂತರಗೊಳಿಸಿದ್ದೇವೆ ಎಂದು ದಯವಿ[ಟ್ಟು] ಹೇಳಿ. ನಾವು ಏನೂ ಮುಚ್ಚುಮರೆ ಮಾಡುತ್ತಿಲ್ಲ, ನಮ್ಮ ಶಾಲೆಯ ಹೆಸ[ರು] ಬೈಬಲ್ ಶಾಲೆ. ಇಲ್ಲಿಗೆ ಬರುವ ಮುಸ್ಲಿಮ್ ಮಕ್ಕಳು, ಮುಸ್ಲಿಮ್ ಮಕ್ಕಳಾಗಿಯ[ೇ] ಹಿಂದೂ ಮಕ್ಕಳು, ಹಿಂದೂ ಮಕ್ಕಳಾಗಿಯೇ ತಮ್ಮ ಮನೆಗೆ ಹೋಗುತ್ತಾ[ರೆ]" ಎಂದು ಅಮ್ಮನ್ನ ವಿನಯಪೂರ್ವಕವಾಗಿ ಹೇಳಿದರೂ ಗುಂಪಿನಲ್ಲಿದ್ದವ[ರು] ಅದನ್ನು ತಾಳ್ಮೆಯಲ್ಲಿ ಕೇಳಿಸಿಕೊಳ್ಳುವ ಮನಃಸ್ಥಿತಿಯಲ್ಲೇ ಇರಲಿಲ್ಲ.

ಪೊಲೀಸರು ಸಹ ಈ ಗುಂಪಿನ ಜೊತೆ ಶಾಮೀಲಾಗಿ ನಿಂತಾಗ ಅಮ[್ಮನ್ನ] ಅದರ ಒತ್ತಾಯಕ್ಕೆ ತಲೆಬಾಗಲೇಬೇಕಾಯಿತು. ಈಗ ಅವರ ಸಂಸ್ಥೆಗೆ ಹಿಂದ[ೂ] ಮಕ್ಕಳು ಬರುವುದಿಲ್ಲ, ಚರ್ಚಿನ ಎದುರು ಈ ರಾದ್ಧಾಂತ ಮುಗಿದ ನಂ[ತರ] ಮಲ್ಪೆಯ ಪೊಲೀಸು ಠಾಣೆಯಲ್ಲಿ ನಡೆದ ಸಂಧಾನ ಸಭೆಯಲ್ಲಿ ಬರ್ಟ್ ಅಮ[್ಮನ್ನ] ಅವರಿಗೆ ಕ್ಷಮೆ ಕೇಳಲು ಒತ್ತಾಯಿಸಲಾಯಿತು. ಅಮ್ಮನ್ನ ಕ್ಷಮೆ ಕೇಳಲು ನ[ಿರಾ]ಕರಿಸಿದರು. "ನಾವು ಕ್ಷಮೆ ಕೇಳುವಂತಹ ಯಾವ ಅಪರಾಧವನ್ನೂ ಮಾಡಿ[ಲ್ಲ] ನಾವು ಯಾರನ್ನೂ ಮತಾಂತರ ಮಾಡಿಲ್ಲ; ಆ ಉದ್ದೇಶವೂ ನಮಗೆ [ಇಲ್ಲ] ನಾವು ಏನನ್ನೂ ರಹಸ್ಯವಾಗಿ ಮಾಡುವುದಿಲ್ಲ, ಮಕ್ಕಳಿಗೆ ಬೈಬಲ್ ಕತೆಗಳ[ನ್ನು] ಹೇಳುವುದು, ಬೈಬಲ್ ಬೋಧನೆಗಳನ್ನು ವಿವರಿಸುವುದು ಮತಾಂತರ ಹೇ[ಗಾ]ಗುತ್ತದೆ? ಹೌದು, ನಮ್ಮ ಶಾಲೆಯಲ್ಲಿ ಹಿಂದೂ ವಿದ್ಯಾರ್ಥಿಗಳೂ ಇದ್ದ[ಾರೆ] ಅದು ತಪ್ಪು ಎಂದಾದರೆ ನಾನು ತಪ್ಪೊಪ್ಪಿಕೊಳ್ಳುತ್ತೇನೆ" ಎಂದು ಅವರಿ[ಂದ] ಹೇಳಿಸುವಲ್ಲಿ ಕೊನೆಗೂ ಮಲ್ಪೆ ಠಾಣೆಯ ಪೊಲೀಸರು ಯಶಸ್ವಿಯಾದ[ರು] ಬೈಬಲ್ "ನಮ್ಮ ಸಂಸ್ಕೃತಿ" ಯ ಭಾಗವಲ್ಲ ಎಂಬ ಮತೀಯ ಗ್ರಹಿಕೆಯ[ನ್ನು] ಜನರ ಮನಸ್ಸಿನಲ್ಲಿ ನೆಡುವ ತಮ್ಮ ಕಾರ್ಯಕ್ರಮದಲ್ಲಿ ಸಂಘ ಪರಿವಾರ[ವು] ಯಶಸ್ವಿಯಾಯಿತು. ಹೀಗೆ, ಪೊಲೀಸರ ತುಂಬು ಸಹಕಾರದೊಂದಿಗೆ ಭಜರಂಗಿ[ಗಳು] ಮಲ್ಪೆಯಲ್ಲಿ ಅಂಬೇಡ್ಕರ್ ಜನ್ಮದಿನದಂದೇ ಭಾರತ ಸಂವಿಧಾನವನ್ನು ಸಮ[ಾಧಿ] ಮಾಡಿದರು!

• ವರದಿಗ[ಾರ]

ಸಾಫಲ್ಯ

ಕೆಚ್‌ನಲ್ಲಿನ ಉಪ್ಪು ಸಮುದ್ರ
ಬೊಗಸೆ ಸಿಹಿನೀರಿನ ಮುಂದೆ
ತಲೆತಗ್ಗಿಸಿಕೊಂಡಿತು.


ಮುಳ್ಳುಬೇಲಿಯನ್ನು
ಒಂದು ಕಾಡಮಲ್ಲಿಗೆ
ಧಿಕ್ಕರಿಸಿತು

ಕಪ್ಪನೆಯ ಕತ್ತಲ ಹಣೆಯನ್ನು
ಮಣ್ಣ ಹಣತೆಯಲ್ಲಿನ
ಕಿರುದೀಪ ಅಲಂಕರಿಸಿತು

ಇವು ನೋವು ಹಿಡಿಯುವ ಪಾದಗಳಾದರೂ
ದೂರಗಳನ್ನು ಮಡಿಚಿಟ್ಟು ಕೊಂಡೊಯ್ಯಲು
ಗಮ್ಯ ಬೆರಗಾಗಿ ಹೋಯಿತು


ನಿಜಕ್ಕೂ ಗಮ್ಯ ಯಾವುದೋ ಗೊತ್ತಾ ನನಗೆ?
ಕಣ್ಣುಗಳನ್ನು ಮುಚ್ಚಿಕೊಂಡು
ನನ್ನೊಳಗೆ ನೋಡಿಕೊಂಡರೆ
ಅತ್ತ ಬಾಲ್ಯ
ಇತ್ತ ಸಾಫಲ್ಯ
ಎರಡರ ನಡುವೆ
ಬೆಳಗಿದ ಚರಿತ್ರೆ,
ನನ್ನ ಜೀವಯಾತ್ರೆ!

-ತೆಲುಗು ಮೂಲ : ಎನ್.ಅರುಣ
ಕನ್ನಡಕ್ಕೆ : ಕೆ.ವಿ.ಚಂದ್ರಜ್ಯೋತಿ





ಮಂಗನ ಬ್ಯಾಟೆ



13



• ಕಲ್ಕುಳಿ ವಿಠ್ಠಲ ಹೆಗ್ಡೆ

...ದ್ದ ಪ್ಯಾಟಿಯೊಂದಿಗೆ ಹುಲಿಯುಗುರು ತಯಾರು ...ಸಿ ಹೋಗಿ ಮಲಗುವುದಕ್ಕೆ ತಡ ಆಗಿತ್ತು, ಬೆಳಗ್ಗೆ ...ಗಿ ಏಳಬೇಕು ಅಂದುಕೊಂಡು ಮಲಗಿದ್ದ. ಬಾಗಿಲು ...ಗೆ ಆಯಿತು. ಎಚ್ಚರ ಆಯ್ತು, ಸಿದ್ದನನ್ನು ಜೋರಾಗಿ ...ತ್ತಿದ್ದಾರೆ. ನಿದ್ದೆ ಕಣ್ಣಲ್ಲೇ ಎದ್ದು ನೋಡ್ತಾನೆ, ಮನೆ ...ಲ್ಲ ಫಾರೆಸ್ಟ್‌ನವರ ಹಿಂಡು! ಈ ಶನಿಗಳು ಮತ್ಯಾಕೆ ...ದು ಅಂದುಕೊಳ್ಳುತ್ತಾ "ಏನು?" ಅಂತ ಕೇಳಿದ. ...ಯ್ಯನೋರೆ, ನಿಮ್ಮ ಫ್ರೆಂಡು ಗೋವಿಂದಪ್ಪ ಮಠದ ...ೋನೊಳಗೆ ಬಿದ್ದಿದ್ದಾರೆ. ನಾವು ಏನ್ ಮಾಡಿದರೂ ...ಕ್ಕೆ ಆಗಲಿಲ್ಲ" ಎಂದು ಒಂದೇ ಉಸಿರಲ್ಲಿ ಹೇಳಿ, ...ೆ ಖುಷಿ ಆಗಲಿ ಅಂತ "ಮೂರು ಮಂಗಗಳೂ ...ದ್ದಾವೆ" ಎಂದರು.

...ದ್ದನಿಗೆ ಒಂದೂ ಅರ್ಥವಾಗಲಿಲ್ಲ. ಅವನ ಕಿವಿಗೆ ...ದ್ದು ಒಂದೇ ಪದ: ಗೋವಿಂದಪ್ಪ ಯಾನೆ ತನ್ನ ಗುರು ...ಂದಯ್ಯ ಬೋನೊಳಗೆ ಸಿಕ್ಕಿದ್ದಾನೆ ಅಂದರೆ ಏನೋ ...ುತ ಆಗಿದೆ ಅಂತೆನಿಸಿತು. ಪ್ಯಾಟಿ ಮುದುರಿಕೊಂಡು ...ದ್ದಳು. ಅವಳಿಗೆ ಹೇಳದೆ ನಿಧಾನಕ್ಕೆ ಬಾಗಿಲು ಎಳೆದು ...ಸ್ಟ್‌ನವರ ಜೊತೆ ಉಟ್ಟಬಟ್ಟೆಯಲ್ಲೇ ಹೊರಟ.

...ದ್ದ ಬಂದು ನೋಡುತ್ತಾನೆ, ಬೋನೊಳಗಿರುವುದು ...ಂದನೆ. ಗೋವಿಂದನ ಸ್ಥಿತಿ ನೋಡಿ ಸಿದ್ದನಿಗೆ ...ತವಾಯಿತು. "ಗೋವಿಂದಯ್ಯ" ಅಂತ ಕರೆದು ...ನ ಮೇಲಿನ ತಾಳ ಜಾರಿಸಿ "ನಾನು ಸಿದ್ದ ಕಂಡ್ರ, ...ಗೆ ಬನ್ನಿ. ಎಂಥಾತು ಎಂಥ ಕೆಲ್ಸಮಾಡಿಕಂಡ್ರಿ" ...ಕೇಳುತ್ತಲೇ ಇದ್ದ. ಫಾರೆಸ್ಟ್‌ನವರಿಗೆ ತಲೆಕೆಟ್ಟು ...ಯಿತು. ತಾವು ಓದಿದವರು, ಒಬ್ಬರ ಮೇಲೊಬ್ಬರು ...ಸಿದರೂ ತಾಳವನ್ನು ಸರಿಸಲು ತಮ್ಮಿಂದ ಆಗಿರಲಿಲ್ಲ. ... ಸಿದ್ದ ಬಂದವನೆ ತಾಳ ಹೇಗೆ ಜಾರಿತು? ಎಂಥ ...ೃ? ಉರಲ್ಲೆಲ್ಲ ಹೇಳುವಂತೆ ಈ ಕಿನ್ನರಿ ಸಿದ್ದನಿಗೆ ...ತ್ರಿಕ ಶಕ್ತಿ ಇರುವುದು ನಿಜವಿರಬಹುದೆ ಅಂತೆಲ್ಲ ...ದರು. ಫಾರೆಸ್ಟ್‌ನವರ ನಡುವೆ ಸಿದ್ದನ ಬಗೆಗೊಂದು ...ಭೀತಿ ಮೂಡಿತು.

...ೋನೊಳಗೆ ನುಗ್ಗಿದ ಸಿದ್ದ ಗೋವಿಂದನ ಕೈಹಿಡಿದರೆ ...ಚಳೀಲಿ ಮರಗಟ್ಟಿ ಹೆಣದ ಕೈ ಮುಟ್ಟಿದಂಗಾಯಿತು. ...ಕರೆದರೆ ಗೋವಿಂದ ಪಿಳಿಪಿಳಿ ಕಣ್ಣು ಬಿಡುತ್ತಾ ...ುತ್ತಿದ್ದ. ಸಿದ್ದ "ನಾನ್ ಕಂಡ್ರ ಸಿದ್ದ" ಅಂತ ಹೇಳಿದ. ...ಲ್ಲೇ ಜಾರಿ ಜಾರಿ ಬಾಗಿಲಿಗೆ ಬಂದ. ಫಾರೆಸ್ಟ್‌ನವರ ...ುದಿಂದ ಅವನನ್ನು ಎತ್ತಿ ನಿಲ್ಲಿಸಲಾಯಿತು. "ಬಿಸಿಬಿಸಿ ...ಾರು ಕುಡಿಯಕ್ಕೆ ತನ್ನಿ" ಅಂತ ಸಿದ್ದ ಹೇಳಿದೊಡನೆಯೇ ...ಸ್ಟ್‌ನವರು ಕಾಫಿ ತರಲು ಓಡಿದರು. ಗೋವಿಂದ ... ಕದಡಿಗಿಸಿದವರು ಅಥವಾ ದಾರಿತಪ್ಪಿ ಗಿಡ ...ದವರ ರೀತಿ ಕೂತಿದ್ದಾನೆ. ದೈಯ್ಯ ಕದ್ದಡಿಗಿಸಿದವರು, ... ತಪ್ಪು ಗಿಡ ಮುಟ್ಟಿಸಿಕೊಂಡವರು ಹೀಗೆಯೇ ... ಕಣ್ಣು ಮಾತ್ರ ಪಿಳಿಪಿಳಿ ಬಿಡುತ್ತಿರುತ್ತಾರೆ.

* * * * *

...ಲೆನಾಡಿನ ದಟ್ಟ ಕಾಡಲ್ಲಿ ದಾರಿ ತಪ್ಪುವುದಕ್ಕೆ ... ಮುಖ್ಯ ಕಾರಣಗಳಿವೆ. ಒಂದು- ಪ್ರತಿ ...ಲ್ಲೂ ಒಂದೊಂದು ಘಟಾನುಘಟಿ ದೆವ್ವಗಳಿರುತ್ತವೆ, ...ದು ದಾರಿ ತಪ್ಸೊ ಗಿಡ ಅಂತ ಒಂದಿದೆ. ...ಳ ದೆಸೆಯಿಂದ ಆಗಾಗ ದಾರಿ ತಪ್ಪಿಸಿಕೊಂಡು ...ಾಣದೆ ಕಾಡು ಪಾಲಾದ ಪ್ರಕರಣಗಳಿವೆ. ಅದು ...ಷ್ಯರಿಗೆ ಮಾತ್ರ ಸೀಮಿತವಲ್ಲ. ... ಜಾನುವಾರುಗಳೂ ಕಾಡಲ್ಲಿ ...ಪ್ಪಿದ್ದೂ ಉಂಟು. ಆದರೆ ..., ಚಿಕ್ಕು ದಾರಿ ತಪ್ಪಿದ ...ಪರಣೆ ಇಲ್ಲ. ನಾಯಿಗಳಂತೂ ...ಕಡೆಯಿಲ್ಲ ಉಚ್ಚೆ ಹೊಯ್ದು ...ು ಇಟ್ಟುಕೊಂಡಿರುತ್ತವೆ. ... ಕಾಡಿಗೆ ಹೋಗುವವರು ...ದಿಗೆ ನಾಯಿ ಕರೆಕೊಂಡು ...ುವುದು ವಾಡಿಕೆ.

...ರಿತಪ್ಸೊ ಗಿಡ ಹೇಗಿರುತ್ತೆ, ...ುತ್ತೆ ಅಂತ ನೋಡಿದವರು ...ಇಲ್ಲ. ನಾನು ಸುಮಾರು ಕಾಡು ತಿರುಗಾಡಿದ್ದೇನೆ, ...ರ ನಿಕಟಸಂಪರ್ಕವೂ ಇದೆ. ಆದರೂ ಆ ಗಿಡದ ...ಅನೇಕ ದಂತಕಥೆಗಳು, ಕೆಲವು ಪುರಾಣಗಳು ...ದರಲ್ಲೂ ಸತ್ಯ ನಾನೆಷ್ಟೇ ಪ್ರಯತ್ನ ಮಾಡಿದರೂ ...ತ ಮಾತ್ರ ಪತ್ತೆಯಾಗಲಿಲ್ಲ.

...ಮ್ಮ ಕಾಡುಗಳಲ್ಲಿ ಅನೇಕ ವಿಷಪೂರಿತ ಗಿಡಗಳಿವೆ. ...ಷ್ಟಿ ಅವುಗಳನ್ನು ಮುಟ್ಟಿಸಿಕೊಂಡರೆ ಮುಗೀತು. ... ಮೂರು ದಿನ ಹಾಸಿಗೆ ಹಿಡಿಯಬೇಕು. ಅದರಲ್ಲಿ ...ಂಥ ವಿಶೇಷ ಅಲರ್ಜಿ ಗಿಡ. ಅರ್ಧಮುಂಡುಗ ... ಗಿಡದ ಥರ ದೊಡ್ಡಗೆ ಇರುತ್ತದೆ. ತುದಿ ಚೂಪಾದ ...ಗಲ ಎಲೆ ಇರುವ ಈ ಗಿಡದ ಮೈಯೆಲ್ಲ ...ದಂಥ ಸೂಕ್ಷ್ಮ ಮುಳ್ಳುಗಳಿರುತ್ತವೆ. ಆ ಗಿಡವನ್ನು ...ಕೊಂಡೇಟಿಗೂ ಪಕ್ಕದ ಹೋದರೂ ಅದರ ಚುಂಗನ್ನು ...ಸುತ್ತದೆ. ಚುಂಗು ತಾಗಿದರೆ ಚಿಂತಿ ಕೊಳ್ಳಿ ...ಕೊಂಡಂತೆ ಮೈಯೆಲ್ಲ ಉರಿ ಜ್ವರ ಬರುತ್ತೆ ಸಂಕಟವೂ

ಶ್ರೀಮಂತನಲ್ಲದ ಯಂಕಣ್ಣಯ್ಯ ವೃತ್ತಿಯಲ್ಲಿ ಕೃಷಿಕನಾದರೂ ಪ್ರವೃತ್ತಿಯಲ್ಲಿ ಹಳ್ಳಿ ವೈದ್ಯ. ಇವನಿಗೆ ಒಂದಷ್ಟು ಕಾಯಿಲೆಗಳಿಗೆ ಔಷಧಿ ಗೊತ್ತಿದ್ದರೂ ಇವ ಮಾತ್ರ ಮಕ್ಕಳಾಗೋದ್ರಿಂದ ಹಿಡಿದು, ಕ್ಯಾನ್ಸರಿಗೂ ಔಷಧಿ ಕೊಡುತ್ತಿದ್ದ. ಮನುಷ್ಯರಿಗಷ್ಟೇ ಅಲ್ಲ; ಜಾನುವಾರಿಗೂ ಔಷಧಿ ಕೊಡುತ್ತಿದ್ದ. ಆದರ ಜೊತೆ ಮಾಟ, ಮಂತ್ರ, ತಂತ್ರ, ಶಿಕಾರಿಗೆ ಹೋಗುವವರಿಗೆ ಕಾಡಿಗೆ ತಡೆಕಟ್ಟಿಕೊಡುವುದು ಇತ್ಯಾದಿಗಳು ಈತನ ಉಪ ಕಸುಬುಗಳು.

ವಿಪರೀತವಿರುವುದರಿಂದ ಕೆಲವರು ವಾಂತಿ ಮಾಡಿಕೊಳ್ಳುತ್ತಾರೆ. ಆದರೆ ಜೀವಕ್ಕೆ ಅಪಾಯ ಆಗಿದ್ದು ಗೊತ್ತಿಲ್ಲ.

ಇನ್ನು ಉರಿಚಟ್ಟೆ ಬಗ್ಗೆ ಎಲ್ಲರಿಗೂ ಗೊತ್ತು. ಉಡುಪಿ ಕಡೆ ಉರಿಚಟ್ಟೆಗೆಯನ್ನು ಪಂಚರಂಗಿ ಅಂತಾರಂತೆ. ಕಾಡಲ್ಲಿ ಇರುವ ಉರಿಚಟ್ಟೆ ಊರಲ್ಲಿ ಕಾಣೋದಕ್ಕಿಂತ ಸ್ಟ್ರಾಂಗು. ಆ ಉರಿಚಟ್ಟೆ ಬಗ್ಗೆ ತಮಾಷೆ ಮಾಡುವಂತಿಲ್ಲ. ವಿಪರೀತ ಕೆರೆತ ಶುರುವಾಗಿ ಕೆರೆದಷ್ಟೂ ಉರಿ ಏರುತ್ತದೆ.

ಕಾಡಲ್ಲಿ ದಾರಿ ತಪ್ಪುವುದಕ್ಕಿರುವ ಇನ್ನೊಂದು ಕಾರಣ ದೈಯ್ಯ ಕದ್ದಡಗಿಸುವುದು. ಖಾನ್ ಎಂಬ ದೈವಕ್ಕೆ ಆದಿವಾಸಿಗಳು ವಿಶೇಷ ಪೂಜೆಯನ್ನು ಮಾಡುತ್ತಾರೆ. ಆದರೂ ಅದರ ಜೊತೆಗೆ ಚೌಡಿಯು ಅಂತ ಒಂದು ದೈಯ್ಯ ಸೇರಿಕೊಂಡು ಕಾಡಿಗೆ ಹೋದವರನ್ನು ಕದ್ದಾಡೊ ಕೆಲಸ ಮಾಡುತ್ತವೆ. ಅದೇನು ತಮಾಷೆಗಾಗಿಯೊ, ಜನರ ಗಮನ ಸೆಳೆಯಲೊ, ಭೀತಿ ಹುಟ್ಟಿಸಲೋ ಯಾವ ಕಾರಣಕ್ಕೆ ಮಾಡ್ತವೆ ಅಂತ ಗೊತ್ತಿಲ್ಲ. ಹೆಂಗಸರು ಗಂಡಸರೆಂಬ ಭೇದವಿಲ್ಲದೆ ಅದು ನಡಿತದೆ. ವಿಶೇಷ ಅಂದರೆ ಒಬ್ಬೊಬ್ಬರೆ ಕಾಡಿಗೆ ಹೋದಾಗ ಮಾತ್ರ ಈ ದೈಯ್ಯದ ಚೇಷ್ಟೆ ಜೋರಾಗಿರುತ್ತೆ.

ಕಾಡಿಗೆ ಹೋದವರು ಕತ್ತಲಾದರೂ ಬರಲಿಲ್ಲ ಅಂದರೆ ಕಾಡುಪಾಲಾದ್ರು ಅಂತಾನೆ ಲೆಕ್ಕ. ಕೂಡಲೇ ಊರೊರೆಲ್ಲ ಸೇರಿ ಖಾನ್ ದೈಯ್ಯಕ್ಕೆ ಪ್ರಾರ್ಥನೆ ಮಾಡಿ ಗಟ್ಟಿಗರನ್ನೆ ಆಯ್ಕೆ ಮಾಡಿ ಕಾಣೆಯಾಗಿರುವವರನ್ನು ಹುಡುಕುವುದಕ್ಕೆ ಕಳುಹಿಸುತ್ತಾರೆ. ಕೆಲವು ಸಾರಿ ತಪ್ಪಿಸಿಕೊಂಡವರು ಮನೆ ಹತ್ತಿರವೇ ಬಂದಿರುತ್ತಾರೆ. ಇನ್ನೂ ಹಲವರು ಸ್ವಲ್ಪ ದೂರ ಬಂದರೆ ಮನೆಗೆ ಬರಬಹುದಾದಷ್ಟು ಹತ್ತಿರದಲ್ಲಿರುತ್ತಾರೆ. ಆದರೆ ಅಲ್ಲೆ ಒಂದು ವುಡೀಲಿ (ಪೊದೆ) ಸಿಕ್ಕಿಕೊಂಡು ಕರೆದರೂ ಇಲ್ಲ ಕೂಗಿದರೂ ಕೇಳಿಸಲಿಲ್ಲವೆಂಬಂತೆ ಪಿಳಿಪಿಳಿ ಕಣ್ಣು ಬಿಡುತ್ತಾ ಕೂತಿರುತ್ತಾರೆ. ಕೆಲವರನ್ನ ಕಂಬಳಿ ಜೋಳಿಗೆಯಲ್ಲಿ ಹೊತ್ತುಕೊಂಡೇ ಬರಬೇಕು. ತಂದು, ಒಕಳಿ, ಕಕ್ಕಡ ಮಾಡಿ ಹೆದರಿಕೆ ತೆಗೆಯೊವರೆಗೂ ಹೆದರಿ ನಡುಗುತ್ತಿರುತ್ತಾರೆ, ಮಾತೇ ಹೊರಡಲ್ಲ, ಈ ಥರ ಸಿಕ್ಕಿಹಾಕಿಕೊಂಡವರು ತುಂಬಾ ಜನ ಇದ್ದಾರೆ. ಆದರೆ ಏನಾಯಿತು, ಹೇಗಾಯಿತು ಅಂತ ಎಷ್ಟು ದಿನ ಆದ್ರೂ ಹೇಳೋಕೆ ಬರಲ್ಲ.

ಸಿದ್ದ ಹಗಲುರಾತ್ರಿ ಕಾಡು ಸುತ್ತಿದವ. ಅವನು ಯಾವತ್ತೂ ಕಳೆದುಹೋಗಿರಲಿಲ್ಲ. ಆದರೆ ಈ ಥರ ದೈಯ್ಯ ಕದ್ದಡಗಿಸಿದವರನ್ನು ನೋಡಿದ್ದಾನೆ. ಇವತ್ತು ಗೋವಿಂದನನ್ನು ಬೋನಿನೊಳಗೆ ನೋಡಿದರೆ ಆತನೂ ಸೇಟ್ ಅದೇ ಥರ ಕರೆದರೂ ಇಲ್ಲ, ಕೂಗಿದರೂ ಇಲ್ಲದಂತೆ ದಬ್ಬೆ ಹಲಗೆ ಒಳಗೆ ಪಿಳಿಪಿಳಿ ಕಣ್ಣು ಮಾತ್ರ ಬಿಡುತ್ತಿದ್ದಾನೆ. ಸಿದ್ದನಿಗೆ ಅಲ್ಲಿದ್ದದ್ದು ಗೋವಿಂದಯ್ಯನೇ ಹೌದೋ ಅಲ್ಲವೋ ಅಂತ ಒಂದು ಗಳಿಗೆ ಅನುಮಾನವೂ ಆಯಿತು.

ಬೋನಿಂದ ಹೊರಗೆ ಬರುತ್ತಿದ್ದಂತೆ ಗೋವಿಂದ ಅಂಗಲಾಚಿ ಸಿದ್ದನಿಗೆ ಹೇಳಿದ್ದು ಎರಡೇ ವಿಷಯ. ಒಂದು: "ಸಿದ್ದ ಈ ಕೆಲ್ಸ ನಮ್ಮ ಶತ್ರುಗೂ ಬ್ಯಾಡ, ನಿಂಗೂ ಬ್ಯಾಡ. ಬದುಕ್ಕೊಂಡಿದ್ದರೆ ಬೇಡಿ ತಿನ್ನಬಹುದು. ಮಠದ ಮಂಗಗಳ ಸಹವಾಸ ಬ್ಯಾಡ." ಎರಡು: "ಈ ವಿಷಯ ಯಂಕಣ್ಣಯ್ಯಗೆ ತಿಳಿಬಾರ್ದು" ಫಾರೆಸ್ಟ್‌ನವರ ಸಹಾಯದಿಂದ ಗೋವಿಂದನನ್ನು ಜೀಪು ಹತ್ತಿಸಲು ಕರೆದುಕೊಂಡು ಹೋಗುವಾಗ ಆತ 'ಯಂಕಣ್ಣಯ್ಯನಿಗೆ ಗೊತ್ತಾಗಬಾರದು' ಅಂತ ಮತ್ತೆ ಮತ್ತೆ ಹೇಳಿದ್ದರ ಒಳಗುಟ್ಟು ಸಿದ್ದನಿಗೆ ಗೊತ್ತಿತ್ತು.

* * * * *

ಯಂಕಣ್ಣಯ್ಯನನ್ನು ಬ್ರಾಹ್ಮಣರ ಅಗ್ರಹಾರದಲ್ಲಿ ಮೂರು ದಾರಿ ಎಂಕಣ್ಣಯ್ಯ ಅಂತಲೂ ಕರೀತಾರೆ. ಮೇಲಿನ ಕೊಪ್ಪ ಕಣದ ಮನೆ, ಹೊಳೆಹೊದ್ದು- ಹೀಗೆ ಮೂರು ಊರಿಗೆ ಹೋಗುವ ದಾರಿ ಕೂಡುವಲ್ಲಿ ವೆಂಕಣ್ಣಯ್ಯನ ಮನೆ ಇದ್ದುದರಿಂದ ಅವನಿಗೆ ಆ ಹೆಸರು ಬಂದಿತ್ತು. ಯಂಕಣ್ಣಯ್ಯನ ಮೂಲ ಹೆಸರು ಎಂ.ಡಿ.ವೆಂಕಟೇಶ್ವರ ರಾವ್ ಅಂತೆ. ಬ್ರಾಹ್ಮಣರ ಯಾವುದೋ ಸಣ್ಣ ಜಾತಿಯವ. ವಡೇರ್ ಥರದ ಶ್ರೇಷ್ಠ ಬ್ರಾಹ್ಮಣರ ಮನೆಯ ಊಟದ ವಿಶೇಷಗಳಲ್ಲಿ ಇವರಿಗೆ ಅಡ್ಡಪಂಕ್ತಿ ಹಾಕುತ್ತಾರಂತೆ. ಬ್ರಾಹ್ಮಣರಲ್ಲಿ ಜಾತಿಗೆ, ಜಾತಿಯತೆಗೇನು ಬರವಿಲ್ಲ. ನಮ್ಮಲ್ಲಿ ಹಾರ್ ಕುಲ, ಹಕ್ಕಿ ಕುಲ ಲೆಕ್ಕಕ್ಕೆ ಸಿಕ್ಕಲ್ಲ ಅಂತಾರಲ್ಲಾ? ಅವರಲ್ಲಿ ಎಲ್ಲಾ ಜಾತಿಗಳನ್ನೂ ಅಕ್ಷರಗಳಲ್ಲಿ ಹೇಳಕ್ಕಾಗುವುದಿಲ್ಲ ಅಂತ ಅವರೆ 24ರವರು 48ರವರು ಮೊದಲಾದ ನಂಬರ್‌ಗಳನ್ನು ಕೊಟ್ಟುಕೊಂಡಿದ್ದಾರೆ. ವೆಂಕಟೇಶ್ವರ ರಾವ್‌ನನ್ನು ಶ್ರೇಷ್ಠ ಬ್ರಾಹ್ಮಣರು ವೆಂಕಣ್ಣ ಅಂತ ಕರೆದರೆ, ಸಿದ್ದನಂಥವರು ಎಂಕಣ್ಣಯ್ಯ ಅಂತ ಕರೆಯುತ್ತಿದ್ದರು.

ಶ್ರೀಮಂತನಲ್ಲದ ಯಂಕಣ್ಣಯ್ಯ ವೃತ್ತಿಯಲ್ಲಿ ಕೃಷಿಕನಾದರೂ ಪ್ರವೃತ್ತಿಯಲ್ಲಿ ಹಳ್ಳಿ ವೈದ್ಯ. ಇವನಿಗೆ ಒಂದಷ್ಟು ಕಾಯಿಲೆಗಳಿಗೆ ಔಷಧಿ ಗೊತ್ತಿದ್ದರೂ ಇವ ಮಾತ್ರ ಮಕ್ಕಳಾಗೋದ್ರಿಂದ ಹಿಡಿದು, ಕ್ಯಾನ್ಸರಿಗೂ ಔಷಧಿ ಕೊಡುತ್ತಿದ್ದ. ಮನುಷ್ಯರಿಗಷ್ಟೇ ಅಲ್ಲ; ಜಾನುವಾರಿಗೂ ಔಷಧಿ ಕೊಡುತ್ತಿದ್ದ. ಆದರ ಜೊತೆ ಮಾಟ, ಮಂತ್ರ, ತಂತ್ರ, ಶಿಕಾರಿಗೆ ಹೋಗುವವರಿಗೆ ಕಾಡಿಗೆ ತಡೆಕಟ್ಟಿಕೊಡುವುದು ಇತ್ಯಾದಿಗಳು ಈತನ ಉಪ ಕಸುಬುಗಳು. ತಾನು ತಡೆ ಕಟ್ಟಿದನೆಂದರೆ ಪ್ರಾಣಿಗಳೆಲ್ಲ ನಿಂತಲ್ಲೇ ನಿಂತಿರುತ್ತವೆ ಅಂತ ಹೇಳಿಕೊಳ್ಳುತ್ತಿದ್ದ. ಕೋವಿ ಒಳ್ಳೆದು ಮಾಡಿಕೊಡುವುದು, ಕೋವಿಗೆ ಮುದ್ದು ಮಾಡಿ ಶಿಕಾರಿಗೆ ಹೋಗುವವರಿಗೆ ತಡೆಕಟ್ಟಿ ಹಾಳು ಮಾಡುವ ವಿದ್ಯೆಯೆಲ್ಲಾ ಆತನಿಗೆ ಗೊತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಈತ ಬಾಯ್‌ಹರಕ. ಹೋಗೋರ, ಬರೋರ ಹತ್ತಿರ ಗುಸುಗುಸು ಸುದ್ದಿ ಹಬ್ಬಿಸುವುದರಲ್ಲಿ ಎತ್ತಿದ ಕೈ. ಬಾಯೇ ಬಂಡವಾಳ ಮಾಡಿಕೊಂಡ ಇವನ ಬಾಯಿಗೆ ಬಿದ್ದು ಬಚಾವ್ ಆದವರಿಲ್ಲ. ಹಾಗಾಗದಂತೆ ಎಲ್ಲರೂ ಎಚ್ಚರಿಕೆ ವಹಿಸುತ್ತಿದ್ದರು. ಇವ ಇಂಥವನಾದರೆ, ಇವನ ಹೆಂಡತಿ ಮೀನಾಕ್ಷಿ ಮನೆಗೆ ಬಂದವರಿಗೆ ನೀರು ಬೆಲ್ಲವನ್ನೂ ಕೊಡದ ಜಾಯಮಾನದವಳು. ಇವನೆಂಥವನೆಂದರೆ ಹೆಂಡತಿ ಮೇಲೆ ಹೊಟ್ಟೆಕಿಚ್ಚಿಗೆ, ಆಕೆ ಮದ್ದುಹಾಕ್ತಾಳೆ ಅಂತ ಪ್ರಚಾರ ಮಾಡಿದ್ದ. ಹೆಂಡತಿ ಬಗ್ಗೆ ಅನುಮಾನದ ಪಿಶಾಚಿ ಆತನಾಗಿದ್ದ. ಗೋವಿಂದನಿಗೆ ಮೆಚ್ ಮದ್ದು ಹಾಕಿದ್ದಾಳೆ, ಅವನ್ನ ಮಾಟಮಾಡಿ ತೆಗಿತೀನಿ ಅಂತ ಆಕೆ ಹೇಳಿದ್ದು ಗೋವಿಂದನ ಕಿವಿಗೆ ಬಿದ್ದಿತ್ತು. ಈ ಗೋವಿಂದ ಹೆಣ್ಣು ಬಾಕ. ಅವ ಹಲ್ಲಿಭಸ್ಮದ ತಾಯತ ಕಟ್ಟಿಕೊಂಡಿದ್ದಾನೆ ಅಂತೆಲ್ಲ ಗಂಭೀರ ಆರೋಪ ಮಾಡುತ್ತಿದ್ದ ಯಂಕಣ್ಣಯ್ಯ. ಆದುದರಿಂದಲೇ ಗೋವಿಂದ ಸಾವುಬದುಕಿನ ಸ್ಥಿತಿಯಲ್ಲಿದ್ದರೂ ಯಂಕಣ್ಣನಿಗೆ ವಿಚಾರ ಗೊತ್ತಾಗಬಾರದು ಅಂತ ಸಿದ್ದನಿಗೆ ಹೇಳಿದ್ದ.

ಹಳ್ಳಿ ಭಸ್ಮ ವಶೀಕರಣ ವಿದ್ಯೆಯ ಒಂದು ತಂತ್ರ. ಹುಣ್ಣಿಮೆ ದಿನ ಗಂಡು-ಹೆಣ್ಣು ಹಲ್ಲಿಗಳು ಒಟ್ಟಾಗಿರುವುದನ್ನು ಪತ್ತೆ ಹಚ್ಚಿ ಸಗಣಿ ಮುದ್ದೆಯನ್ನು ಅವುಗಳ ಮೇಲೆ ರಚ್ ಅಂತ ಬಡಿಯಬೇಕು. ಮುಂದಿನ ಅಮಾವಾಸ್ಯೆ ದಿನ ಹಲ್ಲಿಗಳ ಶವದ ಭಸ್ಮ ಸಹಿತ ಸಗಣಿ ಮುದ್ದೆಯನ್ನು ಸುಟ್ಟು ಭಸ್ಮಮಾಡಬೇಕು. ಆ ಭಸ್ಮವನ್ನು ತಾಮ್ರದ ತಾಯತದಲ್ಲಿ ಹಾಕಿ ಕುತ್ತಿಗೆಗೆ ಕಟ್ಟಿಕೊಳ್ಳಬೇಕು. ಉಳಿದ ಭಸ್ಮವನ್ನು ಜಾಗ್ರತೆಯಿಂದ ಇಟ್ಟುಕೊಂಡು ತಮಗೆ ಯಾರ ಮೇಲೆ ಇಷ್ಟವಾಗುತ್ತೋ ಅವರು ಓಡಾಡೊ ದಾರೀಲಿ ಹಾಕಬೇಕು. ಆಮೇಲೆ ಅವಳು ಮಹಾರಾಣಿನೇ ಆಗಿದ್ದರೂ ಅವತ್ತಿಂದ ಇವನ ದಾಸಿ. "ಹಲ್ಲಿ ಭಸ್ಮ ಇಟ್ಟುಕೊಂಡು ಗೋವಿಂದ ಊರಾಗಿನ ಚಂದದ ಚೆಲುವೆಯರನ್ನೆಲ್ಲ ಬುಟ್ಟಿಗಾಕೊಂಡಿದ್ದಾನೆ. ನಮ್ಮನೆ ಶನಿ(ಮೀನಾಕ್ಷಿ)ನೂ ಆತನ ಮಾಟಕ್ಕೆ ಬಿದ್ದಿದ್ದಾಳೆ" ಅಂತ ಯಂಕಣ್ಣಯ್ಯ ಪುಕಾರು ಮಾಡುತ್ತಲೇ ಇದ್ದ. ಗೋವಿಂದನಿಗೆ ಇದ್ದ ತಾಪತ್ರಯಗಳೇ ಸಾಕಾಗಿತ್ತು. ಇನ್ನು ಈ ವಿಚಾರ ಎಂಕಣ್ಣನ ಬಾಯಿಗೆ ಬಿದ್ದರೆ ಬಚಾವ್ ಇಲ್ಲ, ನೇಣುಹಾಕಿಕೊಳ್ಳುವುದೊಂದೆ ಬಾಕಿ ಎಂದು ಆತನಿಗೆ ಗೊತ್ತಿತ್ತು.

ಯಂಕಣ್ಣಯ್ಯ ಒಂದು ಸುದ್ದಿಯನ್ನು ಹರಿಯಬಿಟ್ಟು, ತನಗೇನೂ ಗೊತ್ತಿಲ್ಲದವನಂತಿರುತ್ತಿದ್ದ. ತಾನೇ ಹುಟ್ಟಿಸಿದ ಸುದ್ದಿಯನ್ನು "ನಿಂಗೊತ್ತ?" ಅಂತ ಬೇರೆಯವರ ಹತ್ತಿರ ಕೇಳೋದು ಅವನ ಖಯಾಲಿ. ಹೀಗೆ ತಾನೆ ಹಬ್ಬಿಸಿದ ಸುದ್ದಿಯನ್ನು ನಾಲ್ಕು ದಿನ ಬಿಟ್ಟು ಯಾರಾದರು ಬಂದು ತನಗೇ ವಾಪಸು ಹೇಳಿದರೆ ಅತ್ಯಂತ ಸಂತೋಷಪಡುತ್ತಿದ್ದ. ತನ್ನ ಕೆಲಸ ಸಾರ್ಥಕ ಅಂತ ತಿಳಿದು ಸಂತೋಷ ಅನುಭವಿಸುತ್ತಿದ್ದ.

* * * * *

ಸಿದ್ದ ಮನೆಗೆ ಬಂದವನೆ ಪ್ಯಾಟಿಗೆಲ್ಲ ವಿಷಯ ತಿಳಿಸಿದ. ಪ್ಯಾಟಿ ಮತ್ತೆ ಮತ್ತೆ ಗೋವಿಂದನ ವಿಷಯ ಕೇಳಿದಳು. "ನಾನಿಂಗೆ ಅವತ್ತೇ ಹೇಳಲಿಲ್ಲ, ಮಠದ ಮಂಗಗಳ ಸಹವಾಸ ಬ್ಯಾಡ ಅಂತ. ಮಠದವರಿಗೆ ತೊಂದ್ರೆ ಆದ್ರೆ ದೇವರಿದ್ದಾನೆ. ನಮಗ್ಯಾರು ಗತಿ? ನಿನ್ನ ಯಾರಾರು ಹೊಗಳಿದರೆ ಸಾಕು ಆಕಾಶಕ್ಕೆ ಏರ್ತಿಯ. ಗೋವಿಂದಯ್ಯ ಹುಲಿಹೊಡದೊರು, ಊರಿಗೆ ಹಮ್ಮೀರರು. ಅವರ ಗತಿನೆ ಹಂಗಾದ್ರೆ? ನೀ ಮಠದ ಮಂಗನ್ನ ಹಿಡಿಯೋ ಕೆಲ್ಸ ಈಗಿಂದೀಗ್ಲೆ ಬಿಡು. ಅತ್ತ ತಲೆ ಹಾಕಿದ್ರೆ ನನ್ಮೇಲಾಣೆ" ಅಂತ ಕಣ್ಣೀರು ಸುರಿಸಿದಳು. ಪ್ಯಾಟಿಯ ಬೈಗುಳ ಕಂ ಬುದ್ಧಿಮಾತು ಕೇಳಿ ಸಿದ್ದ ಪಾತಾಳ ಸೇರಿದ.

ಗೋವಿಂದನನ್ನು ವಡೇರ್ ಮನೆಗೆ ಬಿಟ್ಟು ಸಿದ್ದನ ಮನೆಗೆ ಬಂದ ಫಾರೆಸ್ಟರು "ಸಿದ್ದಯ್ಯನೋರೆ ಹೋಗೋಣ. ಇವತ್ತು ಹೇಗಾದರು ಒಂದಷ್ಟು ಮಂಗಗಳನ್ನ ಹಿಡಿಯಬೇಕು..." ಅಂತ ಹೇಳುತ್ತಿದ್ದಂತೆ, ಸಿದ್ದ ಗರಂ ಆಗಿ "ನಿಮ್ಮ ದುಡ್ಡ ಬೇಕಾದರೆ ಎರಡು ದಿನ ಬಿಟ್ಟುಕೊಡ್ತಿನಿ. ಮಠದ ಮಂಗನ್ನ ಹಿಡಿಯೊ ಕೆಲಸಕ್ಕೆ ನನ್ನ ಕರಿಬೇಡಿ. ದೇವರ ಮಂಗನ್ನ ಹಿಡಿದು ನನ್ನ ಕುಲ ನಾಶ ಆಗ್ಲಿ ಅಂತಾನ? ನಂಗೆ ಆ ಕೆಲ್ಸ ಬ್ಯಾಡ, ನನ್ನ ಕರೀಬೇಡಿ" ಅಂತ ಮನೆಯೊಳಗೆ ಸೇರಿಕೊಂಡ. ಏನು ಹೇಳಿದರೂ ಆತ ಹೊರಗೆ ಬರಲಿಲ್ಲ. ಸಿದ್ದ ಯಾವ ದೆಯ್ಯ ದೇವರಿಗೂ ಹೆದರಿದವನಲ್ಲ. ಆದರೆ ಆತ ಪ್ಯಾಟಿ ಮಾತು ಮೀರುವಂತಿರಲಿಲ್ಲ.

ತಮ್ಮ ಯಾವ ಮಾತಿಗೂ ಸಿದ್ದ ಬಗ್ಗದಿದ್ದಾಗ ಫಾರೆಸ್ಟರು ಕಂಗಾಲಾದರು. ಮೇಲಧಿಕಾರಿಗಳಿಗೆಲ್ಲ ತಿಳಿಸಿದರು. ವಿಷಯ ಮಂತ್ರಿಗಳವರೆಗೂ ಹೋಯಿತು.

(ಮುಂದುವರೆಯುವುದು)

ಬದುಕಿನ ಕೇಂದ್ರದಲ್ಲಿ ಬೆಳಗಿದ ಕಾಡತೊರೆ ಶಾಮಣ್ಣ

ಶಾಮಣ್ಣ ಎಲ್ಲೆಲ್ಲಿ ನಡೆದಾಡಿದರೂ, ವಿವಿಧ ಕ್ಷೇತ್ರಗಳನ್ನು ಹೊಕ್ಕು ಬಂದರ ಅವರಲ್ಲಿನ ಮಾನವೀಯತೆ, ಅಪಾರ ಜೀವನ ಪ್ರೀತಿ ಮತ್ತು ಜೀವಪ ಧೋರಣೆಗಳನ್ನು ಕಳೆದುಕೊಳ್ಳಲಿಲ್ಲ. ತೇಜಸ್ವಿಯಂಥವರ ಗೆಳೆತನವೂ ಅವರ ಗುಣಗಳಿಗೆ ಪುಷ್ಟಿ ನೀಡಿತು. ಈ ಗುಣಗಳೇ ಅವರೊಳಗೊಬ್ಬ ದೊ ಬಂಡಾಯಗಾರನನ್ನು, ಚಳವಳಿಗಾರನನ್ನು ರೂಪಿಸಿದವು. ಹೀಗಾಗಿಯೇ ಶಾಮ ಅನೇಕ ಜನಪರ ಚಳವಳಿಗಳ ಮುಂಚೂಣಿಯಲ್ಲಿ ನಿಲ್ಲುವುದು ಸಾಧ್ಯವಾಯಿತು

ಶಾಮಣ್ಣ ನಿಜವಾದ ಅರ್ಥದಲ್ಲಿ 'ಕಾಡತೊರೆ'ಯೇ. ಅದರ ಸ್ವಚ್ಛಂದ, ಸಮೃದ್ಧಿ ಯಾವ ಹಂಗೂ ಇಲ್ಲದೆ ಮನಬಂದತ್ತ ಹರಿಯುವ ಮುಕ್ತ ಸ್ವಾತಂತ್ರ್ಯ ಹಾಗೆಯೇ ಜೀವ, ಸತ್ವ ಸಂಕುಲವನ್ನು ಪೊರೆಯಬಲ್ಲ ಅದರ ಅಗಾಧ ಚೈತನ್ಯ ಇವೆಲ್ಲ ಶಾಮಣ್ಣನವರ ವ್ಯಕ್ತಿತ್ವಕ್ಕೆ ಹೊಂದುವ ಅಂಶಗಳೇ. ಸಣ್ಣ ಜಲಮೂಲವೊಂದು ಉಕ್ಕುತ್ತ ಹರಿಯುತ್ತ ಮುಂದೆ ಮುಂದೆ ಸಾಗುತ್ತ ಸಣ್ಣ ಸಣ್ಣ ಹಳ್ಳಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತ ದೊಡ್ಡ ತೊರೆಯಾಗಿ, ನದಿಯಾಗಿ ರೂಪಾಂತರ ಹೊಂದುವ ರೂಪಕವೇ ಈ ಶಾಮಣ್ಣ. ಮಲೆನಾಡಿನ ಪುಟ್ಟ ಗ್ರಾಮವೊಂದರಲ್ಲಿ ಹುಟ್ಟಿ, ಮೇಗರವಳ್ಳಿಯನ್ನೇ ದೊಡ್ಡ ಪಟ್ಟಣ ಎಂದುಕೊಂಡಿದ್ದ ಶಾಮಣ್ಣ ಸಂಕಲ್ಪ ಬಲದಿಂದ, ಛಲದಿಂದ, ನಿರಂತರ ಹುಡುಕಾಟದಿಂದ ಮತ್ತು ಇಂಗದ ಕುತೂಹಲದಿಂದ ಬೆಳೆಯುತ್ತ ಹೋದರು. ತಮ್ಮಲ್ಲಿದ್ದ ನೂರಾರು ಆಸಕ್ತಿಗಳಿಂದಾಗಿ ಶಾಮಣ್ಣನವರ ಕಾರ್ಯಕ್ಷೇತ್ರ ವಿಸ್ತಾರಕ್ಕೆ ಚಾಚಿಕೊಳ್ಳುತ್ತ ಹೋಯಿತು; ಅವರ ವ್ಯಕ್ತಿತ್ವವನ್ನೂ ಬೆಳೆಸುತ್ತ ಹೋಯಿತು. ಸರಳತೆ ಮತ್ತು ಪ್ರಾಮಾಣಿಕತೆಗಳನ್ನೇ ತಮ್ಮ ಅಸ್ತ್ರಗಳಾಗಿ ಮಾಡಿಕೊಂಡು ಸದಾ ಬದುಕನ್ನು ಪ್ರೀತಿಸಿದ ಈ ಜೀವಪರ ವ್ಯಕ್ತಿ ಕರ್ನಾಟಕದ ಬಹುದೊಡ್ಡ ಚೇತನವಾಗಿ ಅರಳಿದರು.

ನಮ್ಮಲ್ಲಿನ ಅನೇಕ ಆತ್ಮಕಥನಗಳನ್ನು ನೋಡಿದಾಗ ಶಾಮಣ್ಣ ಅವರ ಈ ಆತ್ಮಕಥಾನಕದ ಹೊಳಹು, ಪ್ರಕಾಶ ಕಣ್ಣು ಕುಕ್ಕುತ್ತದೆ. ಎಲ್ಲಿಯೂ ಯಾವ ಸೋಗಲಾಡಿತನವೂ ಇಲ್ಲದೆ, ಅತ್ಯಂತ ಸರಳವಾಗಿ, ನೇರವಾಗಿ, ದಿಟ್ಟವಾಗಿ ಮತ್ತು ಪ್ರಾಮಾಣಿಕವಾಗಿ ಶಾಮಣ್ಣ ತಮ್ಮ ನೆನಪುಗಳನ್ನು, ಕಥನಗಳನ್ನು ಮಂಡಿಸುತ್ತಾರೆ. ತಮ್ಮನ್ನು ಎಂದೂ ದೊಡ್ಡ ನಾಯಕನೆಂದು ಬಿಂಬಿಸಿಕೊಳ್ಳದ ಶಾಮಣ್ಣ ತಮ್ಮ ಕಥನವನ್ನು ಮಂಡಿಸುವಾಗಲೂ ತಾವೊಬ್ಬ ಸಾಮಾನ್ಯ ಮನುಷ್ಯ, ಸಾಮಾನ್ಯರಲ್ಲಿ ಸಾಮಾನ್ಯ ಎಂದೇ ತಿಳಿಯುತ್ತಾರೆ. ಈ ತಿಳಿವಳಿಕೆಯ ಹಿಂದೆ ಕೃತಕತೆಯಾಗಲಿ, ಅಸಹಜ ವಿನಯವಾಗಲೀ ಕಾಣುವುದಿಲ್ಲ, ಅವರ ಗ್ರಹಿಕೆಯೇ ಆ ಬಗೆಯದು.

ಶಾಮಣ್ಣನವರ ಬಾಲ್ಯ ಮಲೆನಾಡಿನ ಆಗಿನ ಕಾಲದ ಅನೇಕ ಚಿತ್ರಗಳನ್ನು ಕೊಡುತ್ತದೆ. ಕೂಡುಕುಟುಂಬ, ಅಲ್ಲಿರುವ ಅನೇಕ ಮಕ್ಕಳು, ಮುದುಕರು, ಮನೆಗೆಲಸವನ್ನು ಮತ್ತು ಗದ್ದೆ ಕೆಲಸಗಳೆರಡನ್ನೂ ಮಾಡಬೇಕಾದ ಮಹಿಳೆಯರು, ಹೆಣ್ಣುಮಕ್ಕಳಿಗೆ ಸೌಂದರ್ಯಕ್ಕಿಂತ ದುಡಿಮೆಯೇ ಮುಖ್ಯ ಎನ್ನುವ ಒಕ್ಕಲು ಮಕ್ಕಳ ಧೋರಣೆ, ಎಡೆಬಿಡದೆ ಸುರಿಯುವ ಮಳೆ, ಮಕ್ಕಳನ್ನು ಹೆದರಿಸುವ ಕಾಡುಪ್ರಾಣಿಗಳು, ಹಾಗೆಯೇ ಮಕ್ಕಳ ಆಕರ್ಷಣೆಯಾದ ಹಲಬಗೆಯ ಕಾಡು ಹಣ್ಣುಗಳು ಇವೆಲ್ಲದರ ದಟ್ಟ ಚಿತ್ರಣ ಇಲ್ಲಿ ಸಿಕ್ಕುತ್ತದೆ. ಹತ್ತಿರದ ಬಂಧುಗಳಾದರೂ ಮುಕ್ತಸ್ವಾತಂತ್ರ್ಯವಿಲ್ಲದ ಪರಿಸ್ಥಿತಿಯಲ್ಲಿ ಬೆಳೆಯುತ್ತ ಹಸಿವಿನೊಂದಿಗೆ ಸೆಣಸುವುದು, ಬಾಲ ಸಹಜ ಆಸೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಹಲವು ಉಪಾಯಗಳನ್ನು ಕಂಡುಕೊಳ್ಳುವುದು, ಕೆಲವೊಮ್ಮೆ ಹುಟ್ಟಿಕೊಳ್ಳುವ ಸೇಡಿನ ಕಿಡಿಗೇಡಿ ಕೃತ್ಯಗಳು ಇತ್ಯಾದಿ ಘಟನೆಗಳನ್ನು ಶಾಮಣ್ಣ ಯಾವ ಮುಚ್ಚುಮರೆಯೂ ಇಲ್ಲದೆ ದಾಖಲಿಸುತ್ತಾರೆ. ಇಂಥ ಸಂಗತಿಗಳನ್ನು ಹೇಳಿಕೊಂಡರೆ ತಮ್ಮ ವ್ಯಕ್ತಿತ್ವ ಎಲ್ಲಿ ಕುಬ್ಜವಾಗಿಬಿಡುತ್ತದೋ, ಮಸುಕಾಗಿಬಿಡುತ್ತದೋ ಎಂಬ ತಪ್ಪು ಕಲ್ಪನೆಯೂ ಅವರಿಗೆ ಇಲ್ಲ, ಇರುವುದನ್ನು ಇರುವ ಹಾಗೆಯೇ ಹೇಳಬೇಕೆಂಬ ಹಂಬಲವೊಂದೇ ಇಲ್ಲೆಲ್ಲ ಕಾಣುತ್ತದೆ. ಆಗ ಮಲೆನಾಡಿನಲ್ಲಿದ್ದ ವಿದ್ಯಾಭ್ಯಾಸದ ಕ್ರಮದ ಚಿತ್ರಣ, ಮಕ್ಕಳು ಸ್ವಚ್ಛವಾಗಿರಬೇಕೆಂದು ಅಧ್ಯಾಪಕರು ವಿದ್ಯಾರ್ಥಿಗಳ ಮೂಲಕ ನಡೆಸುತ್ತಿದ್ದ 'ಸ್ವಚ್ಛತೆಯ ಪರೀಕ್ಷೆ' ಇತ್ಯಾದಿ ಸ್ವಾರಸ್ಯಕರವಾದ ಪ್ರಸಂಗಗಳು ಇಲ್ಲಿ ಉತ್ಪ್ರೇಕ್ಷೆ ಇಲ್ಲದೆ ಚಿತ್ರಣಗೊಂಡಿವೆ. ಮಲೆನಾಡಿಗೆ ನಿಧಾನವಾಗಿ ಕಾಲಿರಿಸುತ್ತಿದ್ದ ಆಧುನಿಕ ವಿದ್ಯಮಾನಗಳು, ಫ್ಲೈಪ್‌ಔಟ್ ಕಕ್ಕಸ್ಸಿನ ತಮಾಷೆಯ ಸಂಗತಿಗಳೂ ಇಲ್ಲಿವೆ. ಕಕ್ಕಸ್‌ಗುಂಡಿಗೆ ಬಿದ್ದ ಬೀಗದಕೈ ಗೊಂಚಲನ್ನು ಯಾವ ಮುಜುಗರವೂ ಇಲ್ಲದೆ ಶಾಮಣ್ಣ ಎತ್ತಿಕೊಡುವುದು ಕೇವಲ ಮೋಜಿನ ಸಂಗತಿಯಾಗಿ ಕಾಣದೆ ಸಹನೆ ಎಂಬುದು ಶಾಮಣ್ಣನವರ ರಕ್ತಕ್ಕಂಟಿದ ಗುಣವಾಗಿ ಹೇಗೆ ಬಂದಿತ್ತು ಎಂಬುದರ ಸುಳಿವು ನೀಡುವ ಘಟನೆಯಂತೆ ಕಾಣಿಸುತ್ತದೆ.

ಸೋಡಾ ಮಾರಾಟ, ಗೇಣಿವಸೂಲಿ, ಕಂಡಕ್ಟರ್ ಕೆಲಸ ಇತ್ಯಾದಿ ಹಲವು ಕ್ರಿಯೆಗಳಲ್ಲಿ ತಮ್ಮನ್ನು ಬಾಲ್ಯಕಾಲದಲ್ಲೇ ತೊಡಗಿಸಿಕೊಂಡು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡ ಶಾಮಣ್ಣ ಅವುಗಳ ಮೂಲಕ ಅನುಭವ ಸಮೃದ್ಧಿಯನ್ನು ಪಡೆದುಕೊಂಡರು; ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಮಲೆನಾಡಿನ ಗೇಣಿಪದ್ಧತಿಯಲ್ಲಿದ್ದ ಕ್ರೌರ್ಯವನ್ನು ಬಾಲಕ ಶಾಮಣ್ಣ ಸೂಕ್ಷ್ಮವಾಗಿ ಗ್ರಹಿಸಿದರು ಮತ್ತು ಜಾತಿಮತಗಳನ್ನು ಮೀರಿದ ಮಾನವೀಯ ಹೃದಯವಂತಿಕೆಯಿಂದ ಮಿಡಿದರು. ಇನ್ನೆಂದೂ ಗೇಣಿವಸೂಲಿಗೆ ಹೋಗುವುದಿಲ್ಲ ಎನ್ನುವ ದಿಟ್ಟ ನಿರ್ಧಾರವನ್ನು ಆ ಎಳೆಯ ವಯಸ್ಸಿನಲ್ಲಿಯೇ ತೆಗೆದುಕೊಂಡರು. ಇಂಥ ಮಹತ್ವದ ಘಟನೆಗಳು ಈ ಕಥನದಲ್ಲಿ ನಿರುದ್ವಿಗ್ನ ಶೈಲಿಯಲ್ಲಿ ಮೈಪಡೆದಿವೆ.

ಕಾಲೇಜಿನ ಓದಿಗೆಂದು ಶಾಮಣ್ಣ ಶಿವಮೊಗ್ಗಕ್ಕೆ ಬಂದ ಮೇಲೆ ಅವರ ಅನುಭವ ಪ್ರಪಂಚ ಬೇರೆಯದೇ ಆಗುತ್ತದೆ. ತೇಜಸ್ವಿಯವರ ಸ್ನೇಹವಾದ ನಂತರವಂತೂ ಅದು ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಹೆಚ್ಚಿನ ತಮಾಷೆ, ಲವಲವಿಕೆ, ಗಂಭೀರ ಕಾಳಜಿಗಳು, ಆಸಕ್ತಿಗಳು ಕೂಡಿಕೊಳ್ಳುತ್ತವೆ. ಮುಂದೆ ಈ ಜೋಡಿ ಮೈಸೂರು ಸೇರಿದ ಮೇಲಂತೂ ಬದುಕಿನ ಪ್ರಯೋಗಗಳು ಹೆಚ್ಚುತ್ತಲೇ ಹೋಗುತ್ತವೆ. ಓದು ಎನ್ನುವುದು ಹಲವರಿಗೆ ಏಕಮುಖ ನಡಿಗೆಯಾದರೆ ಶಾಮಣ್ಣ-ತೇಜಸ್ವಿಯವರಿಗೆ ಅದು ಹಲವು ಮಾರ್ಗಗಳ ಓಟ. ಮಹಾರಾಜ ಕಾಲೇಜು, ಅಲ್ಲಿನ ಅಧ್ಯಾಪಕರು, ಪ್ರಭುಶಂಕರ, ಪರಮೇಶ್ವರ ಭಟ್ಟ, ಸಿಡಿಎಸ್ ಅವರ ಹೆಲ್ತ್ ಕಿಚನ್, ಮಹಾರಾಜ ಕಾಲೇಜು ಹಾಸ್ಟೆಲು, ಅಲ್ಲಿ ಹಲವು ಆಸಕ್ತಿಗಳ ಜನ, ಮೈಸೂರಿನಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಗಳು,



2

ಸಂಗೀತ ಕಲಿಸುವ ಅನೇಕ ವೈವಿಧ್ಯಪೂರ್ಣ ಗುರುಗಳು, ರಾಮಕೃಷ್ಣಾಶ್ರಮ, ಲಹರಿ, ಪ್ರಿಂಟಿಂಗ್‌ಪ್ರೆಸ್ ಸಾಹಸ, ಅಲಿ ಅಕ್ಬರ್ ಖಾನ್-ರವಿಶಂಕರ್ ಅವರ ಪರಿಚಯ, ಸಂಗೀತಪ್ರಿಯ ದೊರೆಸ್ವಾಮಿ ಅವರಲ್ಲಿದ್ದ ಸಂಗೀತದ ರೆಕಾರ್ಡ್‌ಗಳ ಸಂಗ್ರಹ, ರಾಜೀವ ತಾರಾನಾಥ್, ಅನಂತಮೂರ್ತಿ, ಕಾಫಿಹೌಸ್, ಕುವೆಂಪು ಅವರ ವಿಸಿ ಬಂಗಲೆಯಲ್ಲಿ ಇವರ ಶಹನಾಯ್ ಅಭ್ಯಾಸ, ಶಾಮಣ್ಣ ಕಂಡುಕೊಂಡ ಹೊಸ ದಂತವಾದ್ಯ - ಇದೆಲ್ಲ ಶಾಮಣ್ಣ, ತೇಜಸ್ವಿ ಅಂಥವರಿಗೆ ಮಾತ್ರ ಸಾಧ್ಯವಾಗುವಂಥದ್ದು ಎನಿಸಿಬಿಡುತ್ತದೆ. ಶಾಮಣ್ಣ ಸಂಗೀತದ ಬೆನ್ನುಹತ್ತಿ ಮುಂಬೈಗೆ ನಡೆದದ್ದು ಎಂಥ ಅದ್ಭುತ ಅಧ್ಯಾಯ. ಈ ಕೃತಿಯಲ್ಲಿ ಬಹಳಷ್ಟು ಸಂಗತಿಗಳು ದಾಖಲಾಗಿವೆ ಎಂಬುದು ನಿಜವಾದರೂ, ಶಾಮಣ್ಣನವರ ಅಕ್ಷಯ ಬತ್ತಳಿಕೆಯನ್ನು ಗಮನಿಸಿದವರಿಗೆ ಇನ್ನೂ ಅನೇಕ ಬಾಣಗಳನ್ನು ಶಾಮಣ್ಣ ಹೊರ ತೆಗೆಯಲೇ ಇಲ್ಲ ಎಂದೂ ಅನ್ನಿಸುತ್ತದೆ.

ಮುಖ್ಯವಾದ ಮಾತೆಂದರೆ, ಶಾಮಣ್ಣ ಎಲ್ಲೆಲ್ಲಿ ನಡೆದಾಡಿದರೂ, ವಿವಿಧ ಕ್ಷೇತ್ರಗಳನ್ನು ಹೊಕ್ಕು ಬಂದರೂ ಅವರಲ್ಲಿನ ಮಾನವೀಯತೆ, ಅಪಾರ ಜೀವನ ಪ್ರೀತಿ ಮತ್ತು ಜೀವಪರ ಧೋರಣೆಗಳನ್ನು ಕಳೆದುಕೊಳ್ಳಲಿಲ್ಲ, ತೇಜಸ್ವಿಯಂಥವರ ಗೆಳೆತನವೂ ಅವರ ಈ ಗುಣಗಳಿಗೆ ಪುಷ್ಟಿ ನೀಡಿತು. ಈ ಗುಣಗಳೇ ಅವರೊಳಗೊಬ್ಬ ದೊಡ್ಡ ಬಂಡಾಯಗಾರನನ್ನು, ಚಳವಳಿಗಾರನನ್ನು ರೂಪಿಸಿದವು. ಹೀಗಾಗಿಯೇ ಶಾಮಣ್ಣ ಅನೇಕ ಜನಪರ ಚಳವಳಿಗಳ ಮುಂಚೂಣಿಯಲ್ಲಿ ನಿಲ್ಲುವುದು ಸಾಧ್ಯವಾಯಿತು.

3

ಶಾಮಣ್ಣ ಯಾವ ಶಿಸ್ತಿಗೂ ಒಳಗಾಗುವವರಲ್ಲ; ಶಿಸ್ತು ಎನ್ನುವುದು ಅವರ ಮನೋಧರ್ಮಕ್ಕೆ ವಿರುದ್ಧವಾದದ್ದು. ಮುಕ್ತವಾಗಿದ್ದಾಗಲೇ ಅವರು ಸಹಜವಾಗಿರುತ್ತಾರೆ; ಸಂತೋಷವಾಗಿಯೂ ಇರುತ್ತಾರೆ. ಒಂದಿಷ್ಟು ಕಟ್ಟುಪಾಡುಗಳನ್ನು ಕಂಡಕೂಡಲೇ ಅವರ ಚಡಪಡಿಕೆ ಶುರುವಾಗುತ್ತದೆ. ಶಿಸ್ತನ್ನು ಅಪೇಕ್ಷಿಸುವವರ ಬಳಿಗೆ ಶಾಮಣ್ಣ ಹೋದದ್ದೂ ಕಡಿಮೆಯೇ. ಅಂಥವರಿಂದ ಯಾವಾಗಲೂ ದೂರವಿರಲು ಅವರು ನೋಡುತ್ತಿದ್ದರು. ಇಲ್ಲಿ ನಿರೂಪಿತವಾಗಿರುವ ಸಂಗತಿಗಳೂ ಹಾಗೆಯೇ. ಒಂದು ಕಾಲಾನುಕ್ರಮಣಿಕೆಯಲ್ಲಿ ಜೋಡಣೆಯಾಗಿರುವಂತೆ ಕಂಡರೂ, ಯಾವ ನಿಯಮವನ್ನೂ ಶಾಮಣ್ಣ ಇಲ್ಲಿ ಪಾಲಿಸಿಲ್ಲ, ತಮಗೆ ನೆನಪಾದಂತೆ, ನೆನಪಾದ ಸಂಗತಿಗಳನ್ನು ನಿರೂಪಿಸುತ್ತಾ ಹೋಗಿದ್ದಾರೆ. ಅವರ ನೆನಪಿನ ಶಕ್ತಿ ಎಷ್ಟು ಪ್ರಖರವಾಗಿದೆ ಎಂದರೆ, ಎಲ್ಲಿಯೂ ಸತ್ಯಾಂಶಗಳು ಏರುಪೇರಾಗಿಲ್ಲ, ವ್ಯಕ್ತಿಗಳ ಹೆಸರು, ಘಟನೆಯ ವಿವರಗಳು ಎಲ್ಲವೂ ಅತ್ಯಂತ ನಿಖರವಾಗಿವೆ. ನಾನು ಪ್ರತ್ಯಕ್ಷದರ್ಶಿಯಾಗಿದ್ದ ಶಿವಮೊಗ್ಗದ ರೈತ ಚಳವಳಿಯ ದಿನಗಳನ್ನೇ ಇದಕ್ಕೆ ಸಾಕ್ಷಿಯಾಗಿ ಒದಗಿಸಬಹುದು. ಎಂದೂ ಪೆನ್ನು ಹಿಡಿದು ಮಾಹಿತಿಯನ್ನು, ಸಂಗತಿಗಳನ್ನು ಗುರುತು ಮಾಡಿಕೊಳ್ಳದ ಶಾಮಣ್ಣ, ದಿನಚರಿಯ ಪುಟಗಳನ್ನು ಬರೆದವರೂ ಅಲ್ಲ; ಯಾವ ದಾಖಲೆಗಳನ್ನೂ ಶಿಸ್ತಿನಿಂದ ಇಟ್ಟುಕೊಂಡವರಲ್ಲ, ಆದರೂ ಅವರು ನಿರೂಪಿಸಿರುವ ಸಂಗತಿಗಳು, ಘಟನೆಗಳು, ವಿವರಗಳು, ವ್ಯಕ್ತಿಗಳು ಖಚಿತ ತಳಹದಿಯ ಮೇಲೇ ನಿಂತಿವೆ ಎಂಬುದನ್ನು ನಾನು ಖಚಿತಪಡಿಸಬಲ್ಲೆ. ನಮ್ಮ ಹಳ್ಳಿಗಾಡಿನ ಜಾನಪದ ಪ್ರತಿಭೆಗಿರುವ, ತೋಂಡಿ ಸಂಪ್ರದಾಯಕ್ಕಿರುವ ನೆನಪಿನ ಶಕ್ತಿಯೇ ಇಲ್ಲಿ ಬಿಂಬಿತವಾಗಿದೆ. ಈ ಅರ್ಥದಲ್ಲಿಯೂ ಶಾಮಣ್ಣ ಜನಪದರೇ. ಅವರ ಗ್ರಹಿಕೆ, ಚಿಂತನೆ, ಕಾರ್ಯಶೀಲತೆ ಎಲ್ಲವೂ ಜನಪದೀಯವೇ. ಜನಸಮುದಾಯದ ಒಟ್ಟು ಹಿತ, ಲೋಕಹಿತ, ಸಮಾಜದ ಕೊನೆಯಂಚಿನ ಜನತೆಯ ಬಗ್ಗೆ ಶಾಮಣ್ಣ ಅವರಿಗಿರುವ ತೀವ್ರ ಕಾಳಜಿ ಮತ್ತು ಗಾಢ ಪ್ರೀತಿ ಈ ಕೃತಿಯ ಉದ್ದಕ್ಕೂ ಕಾಣಿಸುತ್ತಲೇ ಹೋಗುತ್ತದೆ. ಶಾಮಣ್ಣನವರಲ್ಲಿರುವ ತೀರಾ ಅಪರೂಪದ ಮಾನವೀಯ ಗುಣಗಳನ್ನು ಬಿಂಬಿಸುವ ಕೆಲವು ಸನ್ನಿವೇಶಗಳೂ ಈ ಕಥನದಲ್ಲಿ ದಾಖಲಾಗಿವೆ.

ರೈತ ಚಳವಳಿ ಕರ್ನಾಟಕ ಕಂಡ ಒಂದು ಅಪೂರ್ವ ಚಳವಳಿ. ಆದರೆ ಈವರೆಗೂ ಈ ಮಹತ್ವದ ಚಳವಳಿಯ ಸಮರ್ಥ ಮತ್ತು ಸಮಗ್ರ ದಾಖಲೆಯೇ ಇನ್ನೂ ಸೃಷ್ಟಿಯಾಗಿಲ್ಲ, ಶಾಮಣ್ಣನವರ ಈ ಕಥಾನಕದಲ್ಲಿರುವ ರೈತ ಚಳವಳಿಯ ಹಲವಾರು ಪುಟಗಳು ಮಹತ್ವದ ದಾಖಲೆಗಳಾಗಿವೆ. ಅನೇಕ ಕಡೆಗಳಲ್ಲಿ ಶ್ರೀಸಾಮಾನ್ಯರ ಅಪೂರ್ವ ಇತಿಹಾಸದ ಪುಟಗಳೂ ಆಗುತ್ತವೆ. ಮಂಡಗದ್ದೆಗೆ ಸಮೀಪದ ಮುಡಬಾ ಸೇತುವೆಯ ಉದ್ಘಾಟನೆಯಾಗುವುದು ಕೂಲಿಕಾರ ಮಲ್ಲಣ್ಣನಿಂದ. ಮುಖ್ಯಮಂತ್ರಿಯಿಂದ ಈ ಉದ್ಘಾಟನೆ ಮಾಡಿಸಲು ಸಿದ್ಧರಾಗಿದ್ದ ಪುಢಾರಿ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಸೆಡ್ಡುಹೊಡೆದು ರೈತ ನಾಯಕರು ರೂಪಿಸಿದ ಈ ಅಪರೂಪದ ಉದ್ಘಾಟನೆಯನ್ನು ಯಾವ ಇತಿಹಾಸಕಾರನೂ ಗಮನಿಸಿರಲಾರ. ಆದರೆ ಶಾಮಣ್ಣನವರ ಈ ಕಥಾನಕದಲ್ಲಿ ಈ ಐತಿಹಾಸಿಕ ಘಟನೆ ಮಹ ಸ್ಥಾನವನ್ನು ಪಡೆದುಕೊಂಡಿದೆ. ಹಾಗೆಯೇ ನಾಗಸಮು ಗೋಲೀಬಾರ್ ಘಟನೆಯನ್ನು ಶಾಮಣ್ಣ ಬಣ್ಣಿಸಿರುವ ಪ್ರತ್ಯಕ್ಷದರ್ಶಿಯೊಬ್ಬನ ಕಥನ ಮಾತ್ರವಾಗಿ ದಾಖಲಾ ಇದೊಂದು ಚರಿತ್ರೆಯ ಮರೆಯಲಾಗದ ಹೃದಯ ಘಟನೆಯಾಗಿ ಇಲ್ಲಿ ರೂಪ ಪಡೆದಿದೆ. ಸ್ವಾರ್ಥ ರಾಜಕಾ ಗಳು ಮತ್ತು ದುಷ್ಟ ಅಧಿಕಾರಿಗಳು ಕೂಡಿ ಪೊಲೀ ಬಲವನ್ನು ವಿವೇಕರಹಿತವಾಗಿ ಬಳಸಿದಾಗ ಎಂಥ ದು ಸಂಭವಿಸುತ್ತದೆ ಎಂಬುದನ್ನೂ ಈ ಘಟನೆ ತಿಳಿಸಿಕೊಡು ರೈತ ಚಳವಳಿಯ ಇತಿಹಾಸದಲ್ಲಿ ಆಸಕ್ತಿ ತಳೆಯುವ ಯಾ ಶಾಮಣ್ಣನವರ ಈ ದಾಖಲೆಯನ್ನು ಉಪೇಕ್ಷಿಸಿ ಮುಂ ಹೋಗುವುದು ಸಾಧ್ಯವೇ ಇಲ್ಲ. ರೈತ ಸಂಘವನ್ನು ಕ ಆರಂಭದಿಂದಲೂ ಅದರೊಂದಿಗಿದ್ದ ಪ್ರಮುಖರಲ್ಲಿ ಶಾ ಮುಖ್ಯರು. ಈ ಸಂಘದ ಬಗ್ಗೆ ಅಪಾರ ಪ್ರೀತಿ, ರೈತಶ ಬಗ್ಗೆ ಅಖಂಡ ವಿಶ್ವಾಸ ಇಟ್ಟುಕೊಂಡಿರುವ ಶಾ ಅತ್ಯಂತ ಪ್ರಬಲವಾಗಿದ್ದ ಈ ಚಳವಳಿ ದುರ್ಬಲವಾ ಮತ್ತು ಸಂಘಟನೆ ಹೋಳಾದದ್ದು ಯಾಕೆ ಎಂಬ ಮ ಪ್ರಶ್ನೆಯನ್ನು ಎತ್ತಿ ವಿಶ್ಲೇಷಿಸುತ್ತಾರೆ. ಅತ್ಯಂತ ವಸ್ತುನಿಷ್ಠ ಅಷ್ಟೇ ದಿಟ್ಟವಾದ, ಅಪೂರ್ವ ಒಳನೋಟಗಳಿರುವ ವಿಶ್ಲೇಷಣೆ ಒಳಗಿನ ಅನೇಕ ಸತ್ಯಗಳನ್ನು ಬಯ ಮಾಡುತ್ತದೆ; ಹಲವು ತಪ್ಪುಗಳನ್ನು ಎತ್ತಿತೋರಿಸು ಯಾರೋ ಕೆಲವರನ್ನು ಬಲಿಪೀಠಕ್ಕೆ ತಂದು ನಿಲ್ಲಿ ಲಘು ಮನೋಧರ್ಮ, ಸೇಡಿನ ಬುದ್ಧಿ ಇ ತನ್ನೊಳಗನ್ನು ತಾನೇ ಪ್ರಶ್ನಿಸಿಕೊಳ್ಳುವವನ ದಿಟ್ಟ ನಿ ಮತ್ತು ಸತ್ಯ ಪ್ರತಿಪಾದನೆಯೇ ಇಲ್ಲಿ ಪ್ರಧಾನ ಕಾಣಿಸುತ್ತದೆ. ಇಂಥ ವಿಶ್ಲೇಷಣೆ ಮುಂದೆ ಬರುವ ಚಳವ ನೇತಾರರಿಗೆ ದಾರಿದೀಪವಾಗಲಿ, ಯಾವ ಜನಪರ ವಳಿಯೂ ದಾರಿ ತಪ್ಪದಿರಲಿ ಎಂಬ ಕಾಳಜಿಯೂ ಇಲ್ಲಿ ದನ್ನು ಗಮನಿಸಬಹುದು.

4

ಶಾಮಣ್ಣನವರ ರೋಚಕ ಬದುಕಿನ ಬಗ್ಗೆ ಆಸಕ್ತಿಯನ್ನು ತಳೆದಿದ್ದ ನಾನು, ಇದನ್ನು ಹೇಗಾ ಮಾಡಿ ದಾಖಲಿಸಬೇಕೆಂಬ ಬಯಕೆಯನ್ನು ದಶ ಹಿಂದೆಯೇ ಇಟ್ಟುಕೊಂಡಿದ್ದೆ. ಶಿವಮೊಗ್ಗೆಯಲ್ಲಿದ್ದಾ ನಾನು ಈ ಕೆಲಸವನ್ನು ಮಾಡಿದ್ದರೆ ಚೆನ್ನಾಗಿತ್ತು ಎ ಅನೇಕ ಬಾರಿ ಅನ್ನಿಸಿದ್ದಿದೆ. ಮುಂದೆ ನಾನು ಮೈಸ ಸೇರಿದ ಮೇಲೆ, ನನ್ನ ಕೆಲಸಗಳ ಮಧ್ಯೆ ಇದು ಸಾಧ್ಯವಾ ಹೋಯಿತು. ಆದರೂ 'ಮಯೂರ'ವನ್ನು ನೋಡಿಕೊ ಸಂದರ್ಭದಲ್ಲಿ ಈ ಆಸೆ ಮತ್ತೆ ನನ್ನಲ್ಲಿ ಕಾಣಿಸಿಕೊಂ ನಾನೇ ಮಾಡುತ್ತೇನೆಂದರೆ ಇದು ಆಗದೇ ಹೋಗಬಹ ಎಂಬ ಆತಂಕದಲ್ಲಿ, ಯಾರಾದರೂ ಸಮರ್ಥರಿಂದ ಕೆಲಸವನ್ನು ಮಾಡಿಸಬೇಕೆಂದು ಯೋಚಿಸುತ್ತಿದ್ದಾಗ ಸಿಕ್ಕವಳು ಅಕ್ಷತಾ. ಕೆಲವು ಸೂಚನೆಗಳನ್ನು ನೀಡಿ ಅಕ್ ಈ ಕೆಲಸವನ್ನು ಒಪ್ಪಿಸಿದೆ. ಅವರು ಎಷ್ಟೊಂದು ಸ ವಾಗಿ ಮತ್ತು ಸಮರ್ಪಕವಾಗಿ ಈ ಕೆಲಸವನ್ನು ಮ ರೆಂದರೆ ಮತ್ತೆ ನಾನು ಆ ಬಗ್ಗೆ ಚಿಂತಿಸಬೇಕಾದ ಪ್ರಮೇ ಬರಲಿಲ್ಲ, 'ಕಾಡತೊರೆಯ ಜಾಡು' ಕಂಡದ್ದು ಹೀಗ

ಶಾಮಣ್ಣನವರು ಸಹಜವಾಗಿ ಮಾತನಾಡುವ ಯಲ್ಲಿಯೇ ಈ ಕಥಾನಕವನ್ನು ರೂಪಿಸಲು ಪ್ರಯತ್ನಿಸಲ ಕೇವಲ ಕಥನ ಮಾತ್ರವಲ್ಲದೆ ಶಾಮಣ್ಣನವರ ಬ ಶೈಲಿ, ಗ್ರಹಿಕೆ, ಚಿಂತನೆ, ಅವರ ಮುಖ್ಯ ಕಾಳಜಿ ಹೀಗೆ ಎಲ್ಲವನ್ನೂ ಈ ಕೃತಿ ಸಮರ್ಥವಾಗಿ ಕಟ್ಟಿಕೊಡು ಹಾಗೆಯೇ ಹೊರಟು ಹೋಗಬಹುದಾಗಿದ್ದ ಶಾಮಣ್ ಬದುಕಿನ ಇತಿಹಾಸದ ಪುಟಗಳನ್ನು ಅಕ್ಷತಾ ಜೋಪಾನ ಜೋಡಿಸಿ ಕನ್ನಡಿಗರ ಉಡಿಯಲ್ಲಿರಿಸಿದ್ದಾರೆ. ಅದ ಕನ್ನಡಿಗರು ಅಕ್ಷತಾಗೆ ಋಣಿಗಳಾಗಿದ್ದಾರೆ.

• ಜೆ.ಪಿ.ಬಸವರಾ

...ಅಂತೂ ಇನ್ನರಡೊರ್ಸ್ ಸ್ವಾಮಿಗಳ ಸರಕಾರ ಅನ್ನು!

...ಂದು ಸಣ್ಣ ಮಳೆಯಿಂದ ಊರ ಸುತ್ತಲ ಮರ ...ಲ್ಲಾ ಕಂಗೊಳಿಸುತ್ತ ಹೊಸ ವಾತಾವರಣ ಬೀರುತ್ತಿದ್ದವು. ...ಮುನಿಯಪ್ಪನ ಹಬ್ಬದಲ್ಲಿ ಮಾಂಸದೂಟ ಉಂಡು ...ಡಿಕೆ ಹಾಕಿದ್ದರಿಂದ ಮುಖ ಕೆಂಪೇರಿತ್ತು, ಬೆಳ್ಳಿಗೂದಲ ...ಇನ್ನೂ ರವೆಯಾಗಿ ಕಂಡಿದ್ದರಿಂದ ಉಗ್ರಿ, ...ನಾದೇನೊ ಮಾವ ನಿನ್ನ ಮಖ್ಕೆ ಎಡೂರಪ್ಪನ ಕಳೆ ...ಬಲ್ಲೊ ಏನಿಸೇಸ?" ಎಂದ.

...ಯ ಲು ಸೀ ಮ ಕಲ್ಪಪುರಾಣ

▶ಬಿ. ಚಂದ್ರೇಗೌಡ

...ಮಾವ ಇಸೇಸನೂ ಇಲ್ಲ, ಉಂಡು ಯಲಡಕೆ ...ಡೆ."

...ಲ್ಲ ಎಡೂರಪ್ಪನ ಮುಖದಂಗೆ ಲಕಲಕಾ ಅಂತಿಯಲ್ಲಾ ...ಳಿದೆ. ಆ ಎಡೂರಪ್ಪನಿಗೆ ಸ್ವಾಮಿಗಳ್ಯಲ್ಲ ಸಪೋರ್ಟು ...ನಾಗಿಂದ ಅವುನ್ನ ನೋಡಕ್ಯಾಯ್ತಾಯಿಲ್ಲ, ಅಂಗೆ ಕೋಳಿ ...ನ ಮಕದ ಕಳೆ ಬಂದದೆ. ಇನ್ನು ಸೋಬನಂತೂ ...ಕೋಳಿಯಂಗೆ ಕಾಣ್ತಳೆ" ಎಂದ ಉಗ್ರಿ.

...ಮಾವ ಸ್ವಾಮಿಗಳು ಸಪೋಟು ಮಾಡಿದುರ್ಲ?" ...ಕಾಳಮಾವ.

...ಂಗಾಯಿತ್ರ ಪೈಕಿ ಸ್ವಾಮಿಗಳ್ಯಲ್ಲ ಸುತ್ತೂರಲ್ಲಿ ಸೇರಿಕಂಡು ...ನಿನಿಗೇ ಸಪೋಟು ಮಾಡ್ತಿವಿ, ಇನ್ನರಡೊರ್ಸ ಯಾರಿಗೂ ...ಬ್ಯಾಡ, ಆಡಳಿತ ಮಾಡು ಅಂದ್ರಂತೆ ಕಣಮಾವ. ...ಕದ ಚರಿತ್ರೆಲಿ ಇದೂ ಒಂದು ದಾಖಲೆನೆ ಬುಡು."

...ದ್ಯಾವ ದಾಖಲೆನ್ಲ?" ಎಂದ ಸೀರ.

...ಮುಖ್ಯಮಂತ್ರಿಯಾದೋನು ಯಮ್ಮೆಲ್ಲೆಗಳ ಸಪೋರ್ಟು ...ಆಡಳಿತ ಮಾಡಬೇಕು. ಆದ್ರೆ ಎಡೂರಪ್ಪ ಸ್ವಾಮಿಗಳ ...ರ್ಟ್ನಲ್ಲಿ ರಾಜ್ಯಭಾರ ಮಾಡಂಗಾದ."

...ಸ್ವಾಮಿಗಳ್ಯಾಕೆ ಕಾವಿ ಬಟ್ಟೆ ಬಸಾಕಿ ಬಂದು ...ಲ್ಲೆಗಳಾಗಬಾರ್ದೂ ಅಂತ?"

...ದಾಗದಿಲ್ಲ ಕಣ ಮಾವ. ಯಮ್ಮೆಲ್ಲೆಗಳಾದ್ರೆ ಈಗಿನಂಗೆ ...ಆಕ್ಟ್ ಮಾಡಕ್ಯಾಗದಿಲ್ಲ, ಈಗಿರದೆ ಚಂದ ಅಂತ ...ಲ್ಯಕ್ಕ, ಅಂಗಾಗಿ ಯಾರೂ ರಾಜಕಾರಣಕ್ಕೆ ಬರದಿಲ್ಲ, ...ಯಮ್ಮೆಲ್ಲೆ ಕ್ಯಲಸ ಬುಡದಿಲ್ಲ."

...ರಿ, ಸ್ವಾಮಿಗಳ ಸಪೋರ್ಟ್ಯಾಕ್ ಬೇಕಾಗಿತ್ತಿವ್ರನಿಗೆ ಅಂತ?"

...ದು ಹಿಂಗಾಯ್ತಂತೆ ಕಣಮಾವ. ಈ ಎಡೂರಪ್ಪನ ಹಗರಣ ಮುಗಿಯಂಗೇ ಕಾಣಲಿಲ್ಲ, ಒಂದಾದ ಮ್ಯಾಲೊಂದು ಈಚೆಗೆ ಬತ್ತಲೇಯಿದ್ದವಂತೆ. ಆಗ ಈಶ್ವರಪ್ಪ, ಅನಂತಕುಮಾರ ಸೇರಿಕಂಡು ಎಡೂರಪ್ಪನ್ನ ಕೆಡವಕ್ಕೆ ಇದೇ ವಳ್ಳೆ ಸಮಯ ಅಂತ ಪ್ಲಾನ್ ಮಾಡಿದರಂತೆ. ನನ್ನನ್ನ ಕೆಡವೇ ಕೆಡವ್ತಾರೆ ಅಂತ ಯಾವಾಗ ಎಡೂರಪ್ಪನಿಗೆ ಗೊತ್ತಾಯ್ತೊ, ಆಗ ಈ ಎಮ್ಮೆಲ್ಲೆಗಳ ಕಾಲ ಹಿಡಿಯದಕ್ಕಿಂತ ಸ್ವಾಮಿಗಳ ಕಾಲಿಡದ್ರೆ ಸರಿ ಅಂತ ಹೋಗಿ ಸುತ್ತೂರು ಸ್ವಾಮಿ ಕಾಲಿಗೆ ಬಿದ್ನಂತೆ. ಅವುನು ಮದ್ಲೆ ಮೋದಿ ಕರದು ಸಭೆ ಮಾಡಿದ್ದೋನಲವೆ. ಅಂತದರಲ್ಲಿ ಸ್ವಾಮಿಗಳ ಕರದು ವೀರಶೈವರ ಸಭೆ ಮಾಡಿ ನಿನಿಗೇ ಸಪೋಟು ಮಾಡುಸ್ತೀನಿ ನಡಿ ಅಂದನಂತೆ. ಯಾವಾಗ ಸ್ವಾಮಿಗಳ್ಯಲ್ಲ ಹೋಗಿ ಮೈಸೂರಲ್ಲಿ ಜಾಮಾಗಿ ಎಡೂರಪ್ಪನಿಗೆ ತೊಂದ್ರೆ ಮಾಡಿದ್ರೆ ನಾವು ಸುಮ್ಮನಿರದಿಲ್ಲ ಅಂದ್ರೂ, ಆಗ ಬಜೆಪಿ ಎಮ್ಮೆಲ್ಲೆಗಳು, ಅಮ್ಯಾಲೆ ಎಡೂರಪ್ಪನೆದ್ರಿಗೆ ತಿರುಗಿಬಿದ್ದ ಎಮ್ಮೆಲ್ಲೆಗಳ್ಯಲ್ಲ ಹೆದ್ರಿಕಂಡು ತೃಪ್ತಾದರಂತೆ. ಅಂತೂ ಇನ್ನರಡೊರ್ಸ ಎಡೂರಪ್ಪನ್ನ ಸಯಿಸಿಗಳ್ಳಬೇಕು."

"ಅಂಗರಿನ್ನವ್ಯಾಲೆ ನಾವು ಸರ್ಕಾರದ ಕ್ಯಲಸಾಗಬೇಕಾದ್ರೆ ಯಮ್ಮೆಲ್ಲೆ ತಕ್ಕೋಗದೆ ಸ್ವಾಮಿಗಳತ್ರ ಹೋಗಬೇಕು ಅನ್ನು" ಎಂದ ಸೀರ.

"ಅಂಗೆ ಆಯ್ತಪ್ಪ, ಅದೂ ಲಿಂಗಾಯಿತ್ರ ಸ್ವಾಮಿಗಳತ್ರಕೇ ಹೋಗಬೇಕು. ಅವುರಿಂದ ಎಡೂರಪ್ಪನಿಗೇಳಸಬೇಕು. ಅಮ್ಯಾಲೆ ನಿನ್ನ ಕ್ಯಲಸಾಯ್ತದೊ ಇಲವ್ಯೊ ನೋಡಬೇಕು" ಎಂದ ಉಗ್ರಿ.

"ಕಡಿಗೂ ಸ್ವಾಮಿಗಳ ಸಾಂರಾಜ್ಯ ಬಂದೇಬುಡತಲ್ಲೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ನೀನು ಮೈಸೂರಿಗೋಗಿದ್ದೇನ್ಲ?" ಎಂದಳು ಜುಮ್ಮಿ.

"ಅಲ್ಯಲ್ಲ ಹೋಗಬಾರ್ದು ಕಣಕ್ಕ. ಹೇಳಿಕೇಳಿ ಅದು ವೀರಶೈವರ ಸಭೆ. ಆದರಲ್ಲೂ ಆರೆಸ್ಸೆಸೆ ವೀರಶೈವರ ಸಭೆ. ಅಲ್ಲಿ ನಾನು ಕಾಣಿಸಿಕೊಂಡು ಯಾವನಾರ ಗುರುತಿಡದು ಇವುನ್ಯಾಕ್ ಬಂದವುನೆ ಇಲ್ಲಿ ಓಹ್‌ಹೊ ಸಿಐಡಿ ಕ್ಯಲಸಕೆ ಬಂದಿರಬವುದು ಅಂತ ಗೂಸು ಕೊಟ್ರೆ ಏನು ಮಾಡದಕ್ಕ? ಅದ್ಕೆ ಹೋಗಲಿಲ್ಲ, ಆದ್ರು ಒಂಥರಾ ಪೀಲಾಯ್ತು ಕಣಕ್ಕ."

"ಯಾಕಾಯ್ತು? ಹೋಗಬೇಕಾಗಿತ್ತು ಅಂತ್ಲ?"

"ಆದಕಲ್ಲ ಈ ಮಠಾಧೀಪತಿಗಳು ಈ ಲೆವೆಲ್‌ಗೆ ಇಳದರಲ್ಲಾ ಅಂತ ಪೀಲಾಯ್ತು."

"ಈಗವುರು ಮಾಡಿದ್ದೇ ಸರಿ ಕಣೊ ವಾಟಿಸ್ಸೆ. ಮದ್ಲು ಮಠದ್ವಳಗಡೆಲಿ ರಾಜಕಾರಣ ಮಾಡತಿದ್ರು. ಈಗ ಬೀದಿಗೆ ಬಂದ್ರು ಅಷ್ಟೆಯ" ಎಂದ ಉಗ್ರಿ.

"ನನಿಗಿನ್ನೊಂದು ಡವುಟು ಕಣೊ ಉಗ್ರಿ, ಈ ಎಡೂರಪ್ಪಾಗೆ ಸಪೋರ್ಟು ಮಾಡಿರೊ ಸ್ವಾಮಿಗಳು ಮುಂದಿನ ಚುನಾವಣೆಗೆ ಗ್ಯಾರಂಟಿ ಕ್ಯಾನವಾಸ್ ಮಾಡ್ತರೆ. ಆದೂ ಅಲ್ದೆ ಯಲಕ್ಷನ್‌ಗೆ ಹಂಚಕೆ ಅಂತ ತರೊ ಲಿಕ್ಕರ್ ಬಾಕ್ಸನೆಲ್ಲಾ ಮಠದಲ್ಲೇ ಸ್ಟಾಕ್ ಮಾಡಿಕತ್ತರೆ. ಆಗ ಪೊಲೀಸ್‌ನೋರು ರೈಡ್ ಮಾಡಕ್ಯಾಗದಿಲ್ಲ, ಇನ್ನ ಓಟರ್ಸ್‌ಗೆ ಹಂಚಕ್ಕೆ ಅಂತ ಬರೋ ದುಡ್ಡು ಮಠದಲ್ಲೇ ಇರತದೆ. ಮಠಕ್ಕೆ ಭಕ್ತರ ತರ ಹೋದಾಗ ಒಂದು ಓಟಿಗೆ ಒಂದು ಸಾವುರ್‍ರುಪಾಯಿ ಸಿಗತದೆ. ಕಿಲಾಡಿ ಸ್ವಾಮಿಯಾದ್ರೆ ಭಕ್ತಾದಿಗಳಿಗ್ಯಲ್ಲ ಬರಿ ಕೈಲೇ ಆಶೀರ್ವಾದ ಮಾಡಿ, ದುಡ್ಡನ್ಯಲ್ಲ ತಾನೇ ಮಡಿಕತ್ತನೆ. ಅಂತೂ ನನ್ನಂಥ ಯಲಕ್ಷನ್ ಕಾರ್ಯಕರ್ತರು ಈ ತರ ಯೋಚನೆ ಮಾಡಂಗೆ ನ್ಯಡಕಂಡು ಬುಟ್ರು ಈ ಹಾಳು ಸ್ವಾಮಿಗಳು" ಎಂದ ವಾಟಿಸ್ಸೆ.

"ಅವುರಿಗೇನು ಬುದ್ದಿನೇ ಇಲವೇನ್ಲ?" ಎಂದಳು ಜುಮ್ಮಿ.

"ಬುದ್ಧಿ ಇದ್ದಿದ್ರೆ ಆದ್ಯಾಕಿಂತ ಬುದ್ಧಿಗೇಡಿ ಕ್ಯಲಸ ಮಾಡತಿದ್ರಕ್ಕ.



ಒಂದು ವೇಳೆ ಎಡೂರಪ್ಪ ಕರದ ಅನ್ನು. 'ನೋಡಪ್ಪ ನಾನು ವೀರಶೈವ ಜನಾಂಗದ ಮಠದೋನು. ಬಸವನ ಪರಂಪರೆ ಸ್ವಾಮಿ. ನೀನಾದ್ರೊ ಪುರೋಹಿತಶಾಹಿಗಳ ಅಜೆಂಡಾ ಹಿಡಕಂಡು ಮುಖ್ಯಮಂತ್ರಿಯಾದೋನು. ಆದ್ರಿಂದ ನಿನಿಗೆ ನನ್ನ ಆಶೀರ್ವಾದ ಇದೆಯೆ ವರತೂ ಬಹಿರಂಗ ಸಭೆಲಿ ಬಂದು ನಾನು ನಿನಗೆ ಸಪೋರ್ಟು ಮಾಡಕ್ಯಾಗದಿಲ್ಲ' ಅಂತಿದ್ರು. ಆಗ ಎಡೂರಪ್ಪ 'ಆಯ್ತು ಸ್ವಾಮಿ' ಅಂತ ಬರ್ತೋನು. ಇಂತ ಪ್ರೈಮರಿ ಲೆವೆಲ್ ಯೋಚನೆನೂ ಇಲ್ಲ ಅವುಕೆ ಅನ್ನದಾದ್ರೆ ಆ ಸ್ವಾಮಿಗಳಿಗೂ, ರೇಣುಕಾಚಾರಿಗೂ ಏನು ವ್ಯತ್ಯಾಸ ಅಂತೀನಿ!"

"ಲಿಂಗಾಯತ್ರಲ್ಲಿ ಯಲ್ಲಾ ಸ್ವಾಮಿಗಳೂ ಬಂದಿಲವಂತೆ ಕಣೊ."

"ಅದು ನನಿಗೂ ಗೊತ್ತು ಕಣೊ ಉಗ್ರಿ. ಗದಗಿನ ಸ್ವಾಮಿ ಒಂದು ಸತಿ ಇಲ್ಲೇ ಬಂದು ಭಾಷಣ ಮಾಡಿ ಹೋದ್ರಲ್ಲ, ಸ್ವಾಮಿಗಳು ಅಂದ್ರೆ ಅಂಗೆ ತಿಳಕಂಡಿರಬೇಕಪ್ಪ ಅಂತ ಸ್ವಾಮಿಗಳ್ಯಾರು ಮೈಸೂರಿಗೆ ಬಂದಿರಲಿಲ್ಲವಂತೆ. ಯಾವ್ದೊ ಮುದಿ ಎತ್ತಿನಂತ ಕೆಲುವು, ಇನ್ನು ಕೆಲವು ವಯಸಾದವ್ರು, ಸುಗರ್ ಕಾಯಿಲೆವ್ರು, ಅಮ್ಯಾಲೆ ಬಿಪಿ ಗಿರಾಕಿಗಳು, ಅಂತೂ ಮಾನಸಿಕವಾಗಿ ರೋಗಗ್ರಸ್ತವಾಗಿರೋ ಸ್ವಾಮಿಗಳೆಲ್ಲ ಮೈಸೂರಿಗೆ ಬಂದು ಆದುನಿಕ ಮಹಿಸಾಸುರನಿಗೆ ಸಪೋರ್ಟು ಮಾಡಿಹೋದವಂತೆ."

"ಮಯಿಸಾಸುರ ಅಂದೇಟಿಗೆ ಗೆಪ್ತಿಗೆ ಬತ್ತು, ಆ ಈಶ್ವರಪ್ಪನ ಕೈಗೆ ಒಂದು ಹಾವುಕೊಟ್ಟು, ಬಲಗೈಗೆ ಗರಗಸದಂತಾ ಕತ್ತಿ ಕೊಟ್ಟು ನಿಲ್ಲಿಸಿದ್ರೆ ಥೇಟ್ ಮಯಿಸಾಸುರನೆ ಅಲವೇನೊ?"

"ಮೈಸಾಸುರನ ಆಕಾರ ಅಂಗಿದ್ರು ಅವುನು ...ಳ್ಳೆ ಮನ್ಸ ಕಣೊ ಉಗ್ರಿ. ಆವುನು ವಳ್ಳೆ ...ನುಸಾಗೊವತ್ತೀಗೇ ಚಾಮುಂಡಿ ಬ್ಯಟ್ಟದ ಮ್ಯಾಲೆ ...ವುನ್ನ ಕಡದು ನಿಲ್ಲಿಸ್ಯವುರೆ. ಆದ್ರೆ ಈಶ್ವರಪ್ಪನ ...ಕಾರ ಅಸುರಾಕಾರ ಇದ್ರು, ತಲೆಲಿ ಒಂಥರಾ ...ಕುನಿ ಬುದ್ಧಿ ಆದೆ ಕಣೊ. ಆ ಎಡೂರಪ್ಪನೆದ್ರಿಗೆ ...ಓಡೆ ತಟ್ಟದೋನು ಎಡೂರೆಪ್ಪ ನನ್ನ ತಂದೆ ...ಮಾನ ಅಂತ ಬಾಲ ಮುದ್ರಿಕಳದೆ!"

"ಅದಿರ್ಲಿ ಕಣೊ, 'ನಾನು ಎಡೂರಪ್ಪನ್ನ, ...ಾವೇಗೌಡ್ರನ್ನ ತುಂಬಾ ಮೆಚ್ಚತಿನಿ. ಇಬ್ರೂ ...ನ್ನ ಲೀಡ್ರು' ಅಂದವುನಲ್ಲ, ಇದಕೇನೇಳ್ತೀ?"

ಅವುನೇಳಿರೋ ಅರ್ಥನೇ ಬೇರೆ ಕಣೊ. ...ತ್ರ ವ್ಯಾಮೋಹದಲ್ಲಿ ಜಾತಿ ವ್ಯಾಮೋಹದಲ್ಲಿ ...ಬ್ರೂ ಒಂದೆ. ಎಡೂರ ಈಗ ಜಾತಿ ಸಮ್ಮೇಳನ ...ಮಾಡಿದ್ರೆ, ದ್ಯಾವೇಗೌಡ ಭಾಳ ಹಿಂದೆನೆ ...ಮಾಡಿದ. ಅವುನೂ ಸ್ವಾಮಿ ಇಟಗಂಡು ...ಟ ಆಡಿದ. ಇವುನೀಗ ಸುರುಮಾಡ್ಯವುನೆ. ...ಮುಂದೆ ಇವುನು ಕೂಡ ವಿಜೇಂದ್ರನಿಗೆ ಒಂದು ...ಜಾಗ, ಮಗಳಿಗೊಂದು ಜಾಗ, ಅಳಿಯನಿಗೆ ಒಂದು ಜಾಗ ಹುಡುಕ್ಯನೆ. ಆಸ್ತಿ ವಿಷಯದಲ್ಲಂತೂ ಎಡೂರ ದ್ಯಾವೇಗೌಡನ್ನ ಮೀರಿಸಿಬುಟ್ಟ ಆತ್ಗೆ. ಈ ತರ ಕಂಪೇರ್ ಮಾಡಿದ್ರೆ ಅವರಿಬ್ರೂ ಪೊಲಿಟಿಕಲಿ ಅವ್ಳಿ ಜವಳಿ. ಇಂಥೋರು ಈಶ್ವರಪ್ಪನ ಲೀಡ್ರಾಗದೆ ಇನ್ಯಾರಾಯ್ತರೊ? ಮದ್ಲೆ ಹೇಳಿಲ್ಲವೆ 'ಹೇಲ್ ತಿನ್ನೊ ದೇವರಿಗೆ ಹೆಂಡ ಕುಡಿಯೋ ಪೂಜಾರಿ' ಅಂತ? ಸಾರಿ ಪಾರ್ ದಿ ವರಸ್ಟ್ ಗಾದೆ!" ●

ಮೈಸೂರಲ್ಲಿ ಎರಡು ದಿನ

ಮೈಸೂರಲ್ಲಿ 'ಲಂಕೇಶ್-60' ಎಂಬ 'ಸಮಕಾಲೀನ ಸಾಹಿತ್ಯ ವೇದಿಕೆ'ಯ ...ರಂಭದಲ್ಲಿ ಭಾಗವಹಿಸಿದ್ದೆ, ಇದಾದದ್ದು ಭಾನುವಾರ. ಶನಿವಾರವೇ ಮೈಸೂರಿಗೆ ...ಗಿದ್ದೆ. ನಿಜಕ್ಕೂ ಹೋಗುವಂತಿರಲಿಲ್ಲ; ಬೆಂಗಳೂರಿನ ಕಿರಿಕಿರಿಗಳು, ಹುಟ್ಟುಹಬ್ಬದ ...ರಂಭಗಳು, ಹಲವು ಬಗೆಯ ನಿರಾಶೆಗಳು, ನೋವುಗಳು, ಸಿಟ್ಟು ಬರಿಸುವಂಥ ...ಗಗಳು–ಇವೆಲ್ಲದರಿಂದಾಗಿ ವ್ಯಗ್ರಗೊಂಡಿದ್ದೆ. ಎಲ್ಲೂ ಹೋಗುವ ಸ್ಥಿತಿಯಲ್ಲಿರಲಿಲ್ಲ. ...ಏ ಭಾನುವಾರ ಬೆಳಗ್ಗೆ ಮಾತ್ರ ಬರಲು ಸಾಧ್ಯ. ಶನಿವಾರ ಬಂದು ಅಲ್ಲಿಯ ...ೋಷ್ಠಿಯಲ್ಲಿ ಪಾಲುಗೊಳ್ಳುವುದು ಕಷ್ಟ" ಎಂದು ಹೇಳಿಕಳುಹಿಸಿದ್ದೆ ಆದರೆ 'ವೇದಿಕೆ'ಯ ...ವರಿಂದ ಫೋನ್ ಬಂತು. ಶನಿವಾರವೇ ಬರಲೇಬೇಕೆಂದು ಒತ್ತಾಯ ಮಾಡಿದರು. ...ಹವಿಲ್ಲದೆ ಹೊರಟೆ. ಮಾರ್ಚ್ ತಿಂಗಳ ಬಿಸಿಲು ಜೋರಾಗಿತ್ತು, ಕಾರಿನಲ್ಲಿದ್ದವರು ...ಶ್ರೀನಿವಾಸಗೌಡರು, ಅರಸು ಮತ್ತು ನಾನು. ಒಂದು ಚಿಕ್ಕ ಪದ್ಯ ತೆಗೆದುಕೊಂಡು ...ಗಿ ಅಲ್ಲಿ ಓದುವುದೆಂದು ಮನಸ್ಸು ಮಾಡಿದ್ದೆ. ಬರೆದಿರಲಿಲ್ಲ, ಮೈಸೂರಲ್ಲಿ ಹತ್ತು ...ಷ ಬಿಡುವು ಮಾಡಿಕೊಂಡು ಬರೆದರಾಯಿತು ಎಂದು ಕಾರಿನಲ್ಲಿ ಸಾಗುತ್ತಲೇ ಇದ್ದೆ. ...ೂರು ಹತ್ತಿರವಾದಂತೆ ಆತಂಕ ಕಾಡತೊಡಗಿತು. ಹಳೇ ಪದ್ಯ ಓದಿದರಾಯಿತು ...ಕೊಂಡೆ. ಆದರೆ ಅದು ಸೋಲು. ಮಾಡಬೇಕೆಂದದ್ದು ಮಾಡದಿದ್ದರೆ ಎಲ್ಲೋ ...ಬಿದ್ದಂತೆ ಅಳುಕು. ಆದ್ದರಿಂದ ಮನಸ್ಸಿನಲ್ಲಿದ್ದ ಸಾಲುಗಳನ್ನು ಹಾಳೆಗೆ ಇಳಿಸಿದೆ. ಪದ್ಯ ...ತ್ತು:

...ನನಗೆ ಅರವತ್ತು ತುಂಬಿದ ಬೆಳಗ್ಗೆ
...ಕಣ್ಣುಜ್ಜಿಕೊಂಡು ಎದ್ದು ಭಯಗೊಂಡೆ. ಮತ್ತೆ ಮಲಗಿದೆ.
...ಾಲು, ಹೆಚ್ಚೆ ಸಡೆದ. ತೊಡೆ ನಡುಗುತ್ತಿವೆ. ಎದೆ ಭಾರವಾಗಿದೆ.
...ಕೆನ್ನೆ ಸಣ್ಣಗೆ ಕಂಪಿಸುತ್ತಿವೆ.

...ಇದ್ದಕ್ಕಿದ್ದಂತೆ ಚಂದ್ರಿ ಬಂದಳು
...ಎಲ್ಲಿ ಬಿಟ್ಟು ಈಕೆ!
...ಸ್ನ ಎಲ್ಲಿ ಸ್ಯಾನಮಾಸ ಮೀರಿಸುವಷ್ಟು ದೊಡ್ಡವ್ರು,
...ಂದಿಸಿಕೊಂಡು ಗೊಂದಲ
...ಆಕೆ ಹಠಾತ್ತನೆ ವಿಧವೆಯಾಗಿದ್ದಳು.

...ಚಂದ್ರಿ, ಒಮ್ಮೆ ನನ್ನ ಗಲ್ಲದ ಮುಟ್ಟಿ
...ಸುಮ್ಮನೇ ನಕ್ಕಳು. ವಿಧವೆ ಚಂದ್ರಿ,
...ನನ್ನ ಮುಂದುವರಿದು ಭುಜ ನೇವರಿಸಿದರೆ
...ಸುಮ್ಮನೇ ನಿಂತಿದ್ದಳು.

ಹಿಂಜರಿದೆ. ಮುಂದುವರಿಯಲು ಹಿಂಜರಿದೆ.
ಆಮೇಲೆ ಎಲ್ಲೋ ಸಿಕ್ಕಾಗಲೆಲ್ಲ
ಹೆಸರು ಹಿಡಿದು ಕರೆದು ನಿಲ್ಲಿಸಿ
ಕೆನ್ನೆ ಕುತ್ತಿಗೆ ಹೊಕ್ಕುಳವ ಮುಟ್ಟಿ
ವಿಷಾದದಿಂದ ನಗುತ್ತಿದ್ದಳು.

ನನ್ನ ಒಂದು ಕತೆಯಾಗಬೇಕಾಗಿದ್ದ ಚಂದ್ರಿ
ನನ್ನ ಮನದ ಒಂದು ಗೋಡೆಯ ಮೇಲೆ ಗಾಂಧಿ
ಇನ್ನೊಂದು ಗೋಡೆಯ ಮೇಲೆ ಬುದ್ಧ
ಇವರು ನಗುತ್ತಿದ್ದದ್ದ ಗಮನಿಸದೆ
ಅರವತ್ತು ವರ್ಷಗಳ ಮುಟ್ಟಿ ಮುಗುಳ್ನಗುತ್ತಿದ್ದಳು.


ವಿಚಿತ್ರ ಏನೆಂದರೆ,
ಮನದ ನೆಲಗಟ್ಟು ಒಡೆದ ಮಾವಿನಮರ,
ಅದರಲ್ಲಿ ಕುಳಿತ ಒಂದು ಹಕ್ಕಿ
ಬುದ್ಧ ಅಥವಾ ಗಾಂಧಿಯ ಲೆಕ್ಕಿಸದೆ
ಚಂದ್ರೀ ಚಂದ್ರೀ ಚಂದ್ರೀ ಅನ್ನುತ್ತಿತ್ತು.

ಹುಚ್ಚು ಹಕ್ಕಿ.
ಈ ಎಲ್ಲದರ ಗದ್ದಲಕ್ಕೆ ನನಗೆ
ಎಚ್ಚರವಾದಾಗ ಕಣ್ಣುಜ್ಜಿಕೊಂಡು ನೋಡಿದೆ.

ಅರವತ್ತು ಆಗಿ ಮೊದಲನೆ ದಿನ.
ಸಂತೋಷ ಮತ್ತು ವಿಷಾದ ಬೆರೆತು
ನನ್ನನ್ನು ನಡುಗಿಸಿದ ದಿನ.

ಈ ಪದ್ಯವನ್ನು ತಡವರಿಸುತ್ತಾ ಓದಿದೆ. ಇದನ್ನು ತಿದ್ದಿ ಬರೆಯಬೇಕಾಗಿದೆ. ಆದರೆ ತಿದ್ದುವುದು ಕಷ್ಟ. ಯಾಕೆಂದರೆ ಈಗಾಗಲೇ ಕನಸು ಕರಗಿಹೋಗಿದೆ. ಚಂದ್ರಿಯ ಮತ್ತು ಹಕ್ಕಿಯ ನೆನಪು ಅಸ್ಪಷ್ಟವಾಗಿದೆ.

ಅವತ್ತು ಶನಿವಾರ, ಎಲ್ಲ ಮುಗಿದಾಗ ರಾತ್ರಿ. ತೇಜಸ್ವಿ ಅನಂತಮೂರ್ತಿ, ರಾಮದಾಸ್–ಎಲ್ಲರೂ ಇದ್ದರು. ಡಿ.ಆರ್.



ನಾಗರಾಜ್ ಬಂದಿದ್ದ. ಕವಿಗೋಷ್ಠಿಯಲ್ಲಿ ಪ್ರತಿಭಾ ನನ್ನನ್ನು ಕುರಿತು ಒಂದು ಪದ್ಯ ಓದಿದ್ದಳು. ತಮಾಷೆಯ ಪದ್ಯ, ಚೆನ್ನಾಗಿದೆ ಎಂದು ನನಗನ್ನಿಸಿತ್ತು, ಕೆಲವರು ಹಾಗೆಂದರು. ಕೆಲವರು ಚೆನ್ನಾಗಿಲ್ಲ ಎಂದು ಟೀಕಿಸಿದರು. ಅಷ್ಟರಲ್ಲಿ ಅನಂತಮೂರ್ತಿ ಮತ್ತು ತೇಜಸ್ವಿ ಅಂತರಾಷ್ಟ್ರೀಯತೆ, ಪರಿಸರ, ಸ್ಥಳೀಯತೆ ಕುರಿತು ಮಾತಾಡತೊಡಗಿದ್ದರು. ಅದರಲ್ಲಿ ಬಹುಪಾಲು ಯಾರಿಗೂ ಅರ್ಥವಾಗುವಂತಿರಲಿಲ್ಲ.

ಮರುದಿನ ನಾನು ಮಾತಾಡುವುದಿತ್ತು, ತೇಜಸ್ವಿ, ಅನಂತಮೂರ್ತಿ ಮುಂತಾದವರೆಲ್ಲ ಮಾತಾಡುವುದರಿಂದ ನಾನು ಏನು ಹೇಳಬಹುದು ಎಂದು ಚಿಂತಿಸುತ್ತಾ ಕೂತೆ. ಮಲಗಿದರೆ ರಾತ್ರಿ ಬಹುಹೊತ್ತು ನಿದ್ದೆ ಬರಲಿಲ್ಲ. ಅಪರಿಚಿತ ಸ್ಥಳ. ಸೆಖೆಯನ್ನು ಕಮ್ಮಿ ಮಾಡಲು ಬೋರೋ ಎಂದು ತಿರುಗುವ ಫ್ಯಾನ್‌ಗಳು. ಓದಿದರೆ ಏನೂ ಮನಸ್ಸಿಗೆ ತಾಗುತ್ತಿಲ್ಲ, ಚಿಂತಿಸಿದರೆ ಮನಸ್ಸು ಎಲ್ಲೆಲ್ಲೋ ಹರಿದುಹೋಗುತ್ತಿದೆ. ಜನರ ಪ್ರೀತಿ ಮತ್ತು ವಿಶ್ವಾಸವನ್ನು ಕಂಡು ನನಗೆ ಮಂಕು ಕವಿಯತೊಡಗಿತ್ತು, ಅನಂತಮೂರ್ತಿಯವರ ಒಳ್ಳೆಯ ಮಾತು ಮತ್ತು ತೇಜಸ್ವಿಯವರ ಬೆಚ್ಚನೆಯ ತಮಾಷೆ ಕೂಡ ನನಗೆ ಧೈರ್ಯ ತರುವುದು ಸಾಧ್ಯವಿರಲಿಲ್ಲ. ಕೆ. ರಾಮದಾಸ್, ಎಚ್.ಎಲ್. ಕೇಶವಮೂರ್ತಿ, ಡಾ. ಮಹಾದೇವ್, ದೇವನೂರು, ಗೋವಿಂದಯ್ಯ ಮುಂತಾದವರು ಈ 60 ನೇ ಹುಟ್ಟುಹಬ್ಬ ಯಶಸ್ವಿ ಮಾಡಲು ದುಡಿದಿದ್ದರು. ನಾವೆಲ್ಲರೂ ಯೋಚಿಸುವುದು ಒಂದೇ ರೀತಿಯಲ್ಲಿ, ಯಾವನೊಬ್ಬನ ಹುಟ್ಟುಹಬ್ಬಕ್ಕಿಂತ ನಾವೆಲ್ಲ ಮೂರು ದಶಕದಿಂದ ಮಾಡಿದ್ದು, ಚಿಂತಿಸಿದ್ದು, ಸಂವೇದಿಸಿದ್ದು ಮುಖ್ಯ, ಅದರ ನೆನಪಾಗುವಂತೆ ಮಾಡಬೇಕು. ಸರಿ, ಭಾನುವಾರ ಇನ್ನೂ ಅನೇಕ ಸಮಾರಂಭಗಳು. ಬಿ.ವಿ. ವೀರಭದ್ರಪ್ಪ, ಎ.ಕೆ. ಸುಬ್ಬಯ್ಯ ಮತ್ತು ಸಿದ್ಧಲಿಂಗಯ್ಯ ಚೆನ್ನಾಗಿ ಮಾತಾಡಿದರು; ಎಳೆಯ ಮಿತ್ರ ಶಶಿಧರ ಭಟ್ ಕೂಡ. ಅವರು ನನ್ನಲ್ಲಿ ಮತ್ತು 'ಪತ್ರಿಕೆ'ಯಲ್ಲಿ ಕಂಡಿದ್ದೇನೆಂದು ಹೇಳಿದ ಅಪರೂಪದ ಸಂಗತಿಗಳ ಬಗ್ಗೆ ನನಗೇ ಅಚ್ಚರಿ ಎನ್ನಿಸಿತು. ನಾನು ವೈಯಕ್ತಿಕವಾಗಿ ಎಲ್ಲವನ್ನೂ ಆನಂದದಿಂದ 'fun' ಎಂಬಂತೆ ನಿರ್ವಹಿಸಿ ಈಗ ಅರವತ್ತು ತಲುಪಿದ್ದೇನೆ!

ಸಂಜೆ ತೇಜಸ್ವಿ, ಅನಂತಮೂರ್ತಿ, ರಮೇಶ್ ಕುಮಾರ್ ಮತ್ತು ನಮ್ಮೆಲ್ಲರ ಅಭಿಮಾನದ ವ್ಯಕ್ತಿ ಎನ್.ಡಿ. ವೆಂಕಟೇಶ್ ಭಾಷಣ. ನನಗೆ ಅಷ್ಟರಲ್ಲೇ ಆರೋಗ್ಯ ಕೆಡತೊಡಗಿತ್ತು. ಚಿಂತನೆ ಜಾಸ್ತಿಯಾದಂತೆ ಆತಂಕ ನನ್ನನ್ನು ತುಂಬಿಕೊಳ್ಳತೊಡಗಿತ್ತು, ವಿಡಿಯೋದವರ ಲೈಟ್‌ಗಳು, ಕಣ್ಣು ಭಗಗುಟ್ಟತೊಡಗಿತ್ತು, ಯಾವುದನ್ನು ಹೇಳಲಿ, ಯಾವುದನ್ನು ಬಿಡಲಿ ಎಲ್ಲ ಗೊಂದಲಗೊಂಡಿದ್ದಾಗ ಅನಂತಮೂರ್ತಿ, ತೇಜಸ್ವಿ ತಮ್ಮ ಮಾತು ಮುಗಿಸಿದ್ದರು. ಮೈಕ್ ಕೈಕೊಡತೊಡಗಿತ್ತು, ಅದೊಂದು ದುಃಸ್ವಪ್ನದಂತೆ ಆಗದಿರಲಿ ಎಂದು ಆಶಿಸುತ್ತ ಮಾತಾಡತೊಡಗಿದೆ. ಜನ ಸುಮ್ಮನೇ ಕೂತಿದ್ದಾರೆ. ಮಾತು ತಲುಪುತ್ತಿದೆಯೋ ಗೊತ್ತಾಗುತ್ತಿಲ್ಲ, ತಲೆ ಸಿಡಿಯುವಂತಾಗಿದೆ...

ಎಲ್ಲ ಮುಗಿದಾಗ ಎಳುಗಂಟೆ. ಮೂರೂವರೆ ಗಂಟೆ ಸಾಗಿದ ಭಾಷಣಗಳು. 'ರಾತ್ರಿ ಇದ್ದು ಹೋಗಿ' ಅಂದರು. ರಾಮದಾಸ್ ಒತ್ತಾಯಿಸಿದರು. ಇನ್ನು ಕೆಲವರು ಗೆಳೆಯರು 'ರಾತ್ರಿ ಪ್ರಯಾಣ ಬೇಡ' ಎಂದು ಹೇಳಿದರು. ಆದರೆ ನನಗೆ ಸ್ವಲ್ಪ ಗಾಳಿ, ಏಕಾಂಗಿತನ ಬೇಕಾಗಿತ್ತು, ಹೊರಟೆ.

–ಏಪ್ರಿಲ್ 4, 1995

ಕುಮಾರಣ್ಣ ರಿಟೈರ್ ಆದಾರಂತೆ...

ಕುಮಾರಸ್ವಾಮಿಯವರಿಗೆ ಶಾನೆ ಬೇಸರ ಆಗಿತ್ತು, ಸಿಟ್ಟು, ಸೆಡವೂ ಬಂದಿತ್ತು ಅನ್ನಿ. ಮತ್ತೇನ್ರಿ, ಅವರಿಗಾದಂಗೆ ಆದ್ರೆ ಯಾರಿಗಾದ್ರೂ ಹಂಗೆ ಆಗೋದೇಯ. ಯಡ್ಯೂರಪ್ನೋರ ಹುಳುಕುಗಳನ್ನೆಲ್ಲ ಎಳೆಎಳೆಯಾಗಿ, ಅರೀದ ಮಗೀಗೂ ತಿಳಿಯೋ ಹಂಗೆ ಬಿಡಿಸುತ್ತಾ ಬಂದ್ರೂ ಹಾಳಾದ ಜನ 'ಬೇಸ್ ಕನಯ್ಯ ಗಂಡು ಅಂದ್ರೆ ನೀನು. ನಿನ್ನ ಬುಟ್ರೆ ಇನ್ನಿಲ್ಲ, ಅವ್ರೂ ಅವೆ ಕಾಂಗ್ರೆಸ್ಸಿನೋವು. ಭ್ರಷ್ಟಾಚಾರದ ಫಲಾನುಭವಿಗಳು ಅನ್ನೊ ಹಂಗೆ ಆಡ್ತಾ ಕುಂತವೆ. ನೀನೊ ಬ್ಳೇಯ ಹಿಂಗೆ ಮಾಡ್ತಿರೋದು' ಅನ್ನೊ ಮಾತ ಹೇಳಿ ಬೆನ್ನು ತಟ್ಟಿ 'ಕುಮಾರಣ್ಣ ಉಘೇ', 'ಕುಮಾರಣ್ಣ ಉಘೇ' ಅನ್ನಬಾರ್ದ, ಉಹೂಂ. 'ಇವನೇನು ಸಾಚಾಸ್ತನಾ? ಅಧಿಕಾರ ಇಲ್ದೇ ಇರೋವಾಗ ಎಲ್ಲರೂ ಗರತೀರೇಯ' ಅಂತ ಅಣಕ ಹೊಡೀತಾವೆ. ಅವ್ರ ಮಕ್ಕೆ ಮಸಿ ಬಳೀಯ ಅವರ ಮಾತೇ ಹಿಂಗೆ ಅನ್ನೋ ಹಂಗೂ ಇಲ್ಲ. ಅದೇ ಅಣ್ಣಾ ಹಜಾರೆ ಜನ ಲೋಕಪಾಲ ಮಸೂದೆ ಜಾರಿಗೆ ತನ್ನಿ ಅಂತ ಅದೆಲ್ಲೋ ದೂರದ ಡೆಲ್ಲೀಲಿ ಉಪವಾಸ ಕುಂತದ್ಕೆ ದೇಶಾದ್ಯಂತ ಹಾಳಾಗಲಿ, ಬೆಂಗಳೂರಲ್ಲೇ ಬೆಂಬಲ ಸೂಚಿಸ್ತೀವಿ ಅಂತ ಉಪವಾಸ ಕುಂತವೆ. ಕಳ್ಳನ್ನ ಹಿಡಿದವನ್ನ ಬಿಸಾಕ್ತವೆ, ಕಳ್ಳನ್ನ ಹಿಡೀರಿ ಹಿಡೀರಿ ಅಂದವನ್ಗೆ ಜೈಜೈ ಅಂತವೆ. ರೋಸೆದ್ದು ಹೋಗಲ್ವಾ.... ಅದ್ಕೇ ಇನ್ಮೇಲೆ ಇದ್ಕೆ ಕೈಯ್ಯೆ ಹಾಕಲ್ವಂತೆ. ಭ್ರಷ್ಟಾಚಾರ ತಡೀತೀವಿ ಅಂತಾವ ಫ್ರೀಡಂ ಪಾರ್ಕ್‌ನಲ್ಲಿ ಹೊಟ್ಗೇನೂ ತಿನ್ದೆ ಬಿದ್ಕೊಂಡವಲ್ಲ ಅವು ಕೇಳಿದ್ರೆ ಎಲ್ಲಾ ದಾಖಲೆಗಳನ್ನೂ ಒದಗುಸ್ತಾರಂತೆ. ಅವರು ಮಾತ್ರ ತಲೆ ಹಾಕಲ್ವಂತೆ. ಅವೇ ಕಡೀಲಿ ಅದೇನ್ ಕಡೀತಾವ್ರೊ ಅನ್ನೊ ಹಂಗೆ ಮಾತಾಡವ್ರೆ. ಅಲ್ದೇಯ ಇನ್ನೊ ಒಂದು ಮುತ್ತಿನಂತ ಮಾತ ಹೇಳವ್ರೆ. ರಾಜಕೀಯ ಪಕ್ಷ ಸಂಘಟಿಸಬೇಕು ಅಂದ್ರೆ ಪುಕ್ಸಟೆಪುನಗಲ್ಲ, ದುಡ್ಡು ಬೇಕಾಯ್ತದೆ. ಯಾವೋನೂ ಅವನ ಅಪ್ಪನ ಮನೆ ದುಡ್ಡು ತಂದು ಸುರಿಯಲ್ಲ, ಹಂಗೆ ಮಾಡಿದ್ರೆ ಮೂರು ದಿನ್ಕೇ ಕೂಳೆದ್ದು ಹೋಯ್ತಾನೆ. ಅವರಿವರ ಹತ್ತಿರ ಕಿತ್ತು ಸಂಘಟನೆ ಮಾಡ್ತಾರೆ. ಇವತ್ತು ಗಾಂಧಿ ಬದುಕಿದ್ರೂ ಅವನು ಮಾಡ್ತಿದ್ದದ್ದೂ ಇದೇಯ. 'ಇಂತಹ ದುಡ್ಡು ನನಗೆ ವಿಷ ಇದ್ದಂಗೆ' ಅಂದಿದ್ರೆ ರಾಜಕೀಯ ಬಿಟ್ಟು ಪೇರಿ ಕೀಳ್ತಿದ್ದ ಎಂದು ತಮ್ಮ ಹೊಟ್ಟೆ ಒಳಗಿನ ಕುದಿತವನ್ನೆಲ್ಲ ಹೊರಹಾಕವ್ರೆ.

ಅಲ್ಲ 'ಚುನಾವಣೆಗೆ ನಿಂತ್ರೆ ನನಗೆ ಠೇವಣಿ ಬರೋಲ್ಲ' ಅಂತ ಹೇಳಿ ಚಪ್ಪಾಳೆ ಗಿಟ್ಟಿಸಿಕೊಂಡ ಅಣ್ಣಾ ಹಜಾರೆ 'ಬೇಸ್ ಕನ್ರಿ ಅವನ ಮಾತು. ಆ ಹುಡುಗ ಸರಿಯಾಗೇ ಹೇಳವ್ನೆ' ಅನ್ನಬಾರ್ದ, ಉಹುಂ. 'ಗಾಂಧೀಜಿ ಭ್ರಷ್ಟ ಆಗುತ್ತಿದ್ದರು ಎಂದು ಹೇಳಿ ಮಹಾತ್ಮನಿಗೆ ಅವಮಾನ ಮಾಡವ್ನೆ. ರಾಜಕಾರಣಿಗಳ ಮನಸ್ಥಿತಿ ಹೇಗಿದೆ ಎಂಬುದನ್ನು ಇದು ತಿಳಿಸುತ್ತೆ' ಅಂದ್ಬುಡಾದಾ. ಅವರು ಹಿಂಗದದ್ದೇ ಸಾಕು ಕೈಗೆಟುಕದೋವ್ರು, ಕಾಲುಗೆಟಗಿದೋವೆಲ್ಲ ಕುಮಾರಣ್ಣನ್ ಮೇಲೆ ದಂಡೆತ್ತಿ ಬಂದೊ. ದೇಶವಾದ ದೇಶದಲ್ಲೆಲ್ಲ 'ಗಾಂಧಿತನ' ತುಂಬಿಕೊಂಡ ಹಾಗೆ ಯಾರ ಬಾಯಲ್ಲಿ ಕೇಳಿದ್ರೂ ಮಹಾತ್ಮನ ಸುದ್ದೀನೇ. ಪತ್ರಿಕೆಗಳು ಅವರು ಹಂಗೆ ಹೇಳಿದ್ದು ಅಕ್ಷಮ್ಯ ಅಪರಾಧ ಅಂತ ಪುಟ ತುಂಬಿಸಿಕೊಂಡೊ ಟಿವಿಗಳಂತೂ ಸರಿಯೇ ಸರಿ. ಕಡುಭ್ರಷ್ಟರ ಬಾಯಲ್ಲೂ, ಗಾಂಧಿ ಪರ ಕುಮಾರಣ್ಣ ವಿರೋಧ ಮಾತು ಬರುವಂತೆ ಮಾಡಿ ವಿಕೃತ ಆನಂದ ಅನುಭವಿಸಿದೊ. ಚಾಣಾಕ್ಷನರಿ ಹಳ್ಳಕ್ಕೆ ಬಿದ್ದಿತ್ತು. 'ನಾನು ಹೇಳಿದ್ದು ಹಂಗಲ್ಲ ಹಿಂಗೆ. ಮಹಾತ್ಮನ ಬಗ್ಗೆ ನನಗೆ ಅಪಾರಗೌರವ ಇದೆ. ಇವತ್ತಿನ ವ್ಯವಸ್ಥೆಯ ಬಗ್ಗೆ ಹಿಂಗೇಳೋದು ಅನಿವಾರ್ಯ ಆಯ್ತು, ಮಾಧ್ಯಮಗಳು ಅದನ್ನು ತಪ್ಪಾಗಿ ಗ್ರಹಿಸಿ ವರದಿ ಮಾಡಿವೆ' ಅಂದು ಹೆಂಗೋ ಏಟು ತಪ್ಪಿಸಿಕೊಂಡರು ಅನ್ನಿ. ಆದ್ರೂ ಕ್ಷಮಾಪ ಣೇನೂ ಕೇಳಬೇಕಾಯ್ತು.



ಎಲಎಲಾ ಏನು ವಿಚಿತ್ರ ಇದು. ಸತ್ಯ ಹೇಳಿದ್ಕೇ ಕ್ಷಮಾಪಣೆ ಕೋರಬೇಕಾಗಿ ಬಂತಲ್ಲಾ ಅಂತೆಲ್ಲ ವಿಲಿವಿಲಿ ಒದ್ದಾಡಿದ್ರು ಕುಮಾರಣ್ಣೋರು. ಹಿಂಗೆಲ್ಲ ಆದ್ರೆ ಈ ಹಾಳಾದ ಜನಗಳ ಸಾವಾಸವೇಬ್ಯಾಡ ಅನ್ನೋ ಹಂಗೆ ಯಾರ್ಗಿಗಾದರೂ ಆಗೋದೇಯ. ಅದ್ಕೇ ಮೈಸೂರಲ್ಲಿ 'ನನಗೆ ರಾಜಕೀಯ ರೋಸೊತ್ತು ಹೋಗದೆ. ಅದ್ರಿಂದ ಹೊರಕ್ಕೆ ಒಂದು ಕಾಲ ಇಟ್ಬಿದೀನಿ' ಅಂದವ್ರೆ. ಒಂದು ರೀತೀಲಿ ನೆಹರೂ ಆದರು ಅಂದ್ರೂ ಸರೀನೆ. ಅವರೇನು ಮಾಡುತ್ತಿದ್ದರಂತೆ ಅಂದ್ರೆ ಯಾವುದಾದರೂ ಬಿಡಿಸಲಾಗದ ಸಮಸ್ಯೆ ಉದ್ಭವಿಸಿದಾಗ 'ನೆಹರೂ ನಿವೃತ್ತರಾಗುತ್ತಾರೆ' ಅನ್ನೊ ಗುಮ್ಮ ಹೊರಕ್ಕೆ ಬರುವಂತೆ ಸಂಚು ರೂಪಿಸುತ್ತಿದ್ದರಂತೆ. ಅವರಿಗೆ ಗೊತ್ತಿತ್ತು, ಜನ ಅನ್ನೋವು ಪೆದ್ದು ಮುಂಡೇವು. ಸಮಸ್ಯೆ ಮರೆತು 'ನಿವೃತ್ತಿ' ಹಿಡ್ಕೊಂಡು ನ್ಯಾತಾಡ್ತವೆ ಅಂತಾವ. ಅದರಲ್ಲಿ ಅವರು ಯಶಸ್ಸನ್ನೂ ಕಂಡಿದ್ದರಂತೆ. ಕುಮಾರಣ್ಣ ಇನ್ನೂ ಎಳಸಲ್ವಾ. ನೆಹರು ತರ ಪಳಗಿ ದೋರಲ್ಲ, ಇಂತಹ ಮಾತ ಬ್ಯಾರೆ ಯೋರ ಬಾಯಿಂದ ಹೇಳಿಸಬೇಕು ಅನ್ನೋದು ಹೊಳೀಲಿಲ್ಲವೇನೋ. ಪೆದ್ದುಪೆದ್ದಾಗಿ ಅವರೇ ಹಂಗಂದ್ಬು ಟ್ಟವ್ರೆ. 'ಬ್ಯಾಡ ಕಣಣ್ಣೋ ಬ್ಯಾಡ. ಹಂಗೇನಾರ ಮಾಡಿಗೀಡಿ ಬಿಟ್ಟೀಯ. ನುಂಬ್ದೋರ ಹಾಳು ಬಾವಿಗೆ ತಳ್ದಂಗಾಯ್ತದೆ' ಅಂತ ಜನ ಮುತ್ತಿಗೆ ಹಾಕ್ತಾರೆ ಅಂತಾವ ಕನಸು ಕಾಣ್ತಾ ಇದ್ರೆ..... ಅದಾಗ್ಲಿಲ್ಲ, ಎಲ್ರೋ ಅವರ ಇನ್ನೊ ಒಂದು ಕಾಲು ಒಳಗದಲ್ಲ, ಅದ್ನೂ ತಗ್ದು ಹೊರಕ್ಕೆ ಹಾಕಿದ ಮೇಲೆ ಹೋಗಿಹೇಳಾನ ಅಂತಿದ್ದಾರೋ ಏನೋ.....

ಹೋಗ್ಲಿಬಿಡಿ. ಎಲ್ರೋ ಏನೋ ಯಡವಟ್ಟಾಗದೆ. ಜನ ಕೈ ಬುಟ್ಟರೂ ಯಡ್ಯೂರಪ್ನೋರು ಬುಟ್ಟಿಲ್ಲ ಅನ್ನೋದೆ ಸಮಾಧಾನ. ಅವ್ರು 'ದೇವೇಗೌಡರು, ಕುಮಾರಸ್ವಾಮಿಯವರು, ಸಿದ್ಧರಾಮಯ್ಯನವರು ಅನುಭವಿ ರಾಜಕಾರಣಿಗಳು. ಅವರು ರಾಜಕೀಯ ಬಿಡಬಾರದು. ಭ್ರಷ್ಟಾಚಾರಕ್ಕೆ ಹೆದರಬಾರದು. ನಾವೆಲ್ಲ ಸೇರಿ ಅದನ್ನ ಎದುರಿಸೋಣ' ಅಂದವ್ರೆ. ಹಂಗಂದ್ರಲ್ಲಾ.... ಆಮೇಲೆ ಏನಾಯ್ತಂತೆ ಅಂದ್ರೆ.... ಟಿವಿ ಕ್ಯಾಮೆರಾಕ್ಕೆ ಪೋಸು ಕೊಡುವಾಗ ಪಕ್ಕದಲ್ಲೇ ನಿಂತಿರ್ತಾವಲ್ಲ ಸೈಡ್ ವ್ಯಕ್ತಿಗಳು ಅವರಲ್ಲಿ ಒಂದು ವ್ಯಕ್ತಿ ಏನ್ಮಾಡ್ತಂತೆ 'ಇದೇನು ಗುರುವೆ ನೀವೂ ಹಿಂಗೇಳ್ತಿದೀರಿ. ಕುಮಾರಸ್ವಾಮಿ ರಾಜಕೀಯ ಬುಟ್ಟಾ ರಾಬುಟ್ಟಾನಾ. ಎಲ್ಲ ನಾಟಕ ಗುರುವೆ ನಾಟಕ' ಅಂತಂತೆ. ಅದ್ಕೆ ಯಡ್ಯೂರಪ್ನೋರು 'ನಾನು ಈಗ ಮಾಡಿದ್ದಿನ್ನೇನು' ಅಂದುಬುಟ್ರಂತೆ.....

ಮನಮೋಹನ ಕೊಡುಗೆ

ರಾಜ್ಯಸಭೆ, ವಿಧಾನ ಪರಿಷತ್ತು ಅಂದರೆ ರಾಜಕೀಯದಲ್ಲಿ ಕಿಮ್ಮತ್ತು ಕಳೆದುಕೊಂಡವರ ಪುನರ್ ವಸತಿ ಕೇಂದ್ರ ಇದ್ದಂಗೆ. ವಿಧಾನಸಭೆ, ಲೋಕಸಭೆಗಾದರೆ ನಿಗದಿತ ಸಮಯದಲ್ಲಿ ಜನರ ಬಳಿ ಹೋಗಬೇಕು. ಇಷ್ಟ ಇಲ್ಲದಿದ್ದರೂ ಬ[...] ಹಚ್ಚಬೇಕು. ಬಿಸಿಲು, ಮಳೆ, ಲೆಕ್ಕಿಸದೆ ಓಟಿನ ಬೇ[...] ಮಾಡಬೇಕು. ಇವೆಲ್ಲ ತರಲೆ ತಾಪತ್ರಯದ ಕೆಲಸ ಅನ್ನೋ[...] ಪ್ರಧಾನಿ ಮನಮೋಹನ್ ಸಿಂಗ್ ಅನುಭವದಿ[...] ಅರಿತಿರೋರು. ಲೋಕಸಭೆಗೆ ದೊಡ್ಡ ಸಲಾಂ ಹೊಡೆ[...] ಅಸ್ಸಾಂನಿಂದ ರಾಜ್ಯಸಭೆಗೆ ಸಲೀಸಾಗಿ ಆಯ್ಕೆಯಾಗಿದ್ದಾ[...] ಇದರಲ್ಲೇನೂ ಅತಿಶಯ ಇಲ್ಲಬಿಡಿ. ನಂ ದೇವೇಗೌಡರ[...] ಪ್ರಧಾನಿಯಾದದ್ದು ಹೀಗೇನೆ. ಈಗ ಯಾಕೆ ಈ ವಿಷ[...] ಅಂದರೆ ಈ ಸಲ ಅಸ್ಸಾಂನ ವಿಧಾನಸಭೆ ಚುನಾವ[...] ನಡೆಯಿತಲ್ಲ ಆಗ 'ಮತ ಚಲಾಯಿಸದಿರುವುದು ಅಕ್ಷ[...] ಅಪರಾಧ', 'ಮತ ಹಾಕದವರು ಪ್ರಜಾಪ್ರಭುತ್ವಕ್ಕೆ ಅನರ್ಹ[...] ಎಂದೆಲ್ಲ ಚುನಾವಣಾ ಆಯೋಗ ಪ್ರಚಾರ



ಎಚ್.ಎಲ್. ಕೇಶವಮೂರ್ತಿ

ಅಣಕ

ಮಾಡಿ ಮತದಾರರನ್ನು ಆಕರ್ಷಿಸಲು ಇನ್ನಿಲ್ಲದ ಪ್ರಯ[...] ಪಟ್ಟಿತ್ತಲ್ಲಾ, ಅದು ನಮ್ಮ ಮನ-ಮೋಹನ-ಸಿಂಗ್ [...] ಅವರ ಮನಸ್ಸನ್ನು ಮೋಹಿಸಲು ಸಾಧ್ಯವೇ ಆಗಲಿಲ್ಲವಂ[...] ಸಿಂಗ್‌ಜೀ ತಮ್ಮ ಮತ ಚಲಾಯಿಸಲೇ ಇಲ್ಲವಂತೆ!

ಸಿಂಗ್‌ಜೀ ಲೋಕಸಭೆ ಕಂಡವರು. ವಿಧಾನಸ[...] ಅರಿತವರು. ಅಲ್ಲಿಗೆ ಬರುವ ಮಾನ್ಯ ಸದಸ್ಯರ ಆಳ ಅ[...] ತಿಳಿದಿರೋರು. ಎಂತೆಂತಹ ಕ್ರಿಮಿನಲ್‌ಗಳು ಆಯ್ಕೆ [...] ಬರುತ್ತಾರಲ್ಲಪ್ಪಾ. ಈ ಸುಖಕ್ಕೆ ನಾನು ಯಾಕೆ ಮ[...] ಚಲಾಯಿಸಬೇಕು ಎಂದೋ; ಅಥವಾ ನನ್ನ ಒಂ[...] ಓಟನಿಂದ ಏನು ಸೂರೆ ಹೋಗೋದು? ಕೊಟ್ಟ[...] ಆಯ್ತು, ಕೊಡದಿದ್ದರೂ ಆಯ್ತು ಎಂದೋ ಮ[...] ನೀಡಿರಲಾರರು. ಅಲ್ಲ ಎಲ್ಲ ಮತದಾರರೂ ಮನಮೋಹ[...] ಆದರೆ..... ಆಹಾ ಏನು ಪ್ರಜಾಪ್ರಭುತ್ವ......!

ತಾಜಾ ಸುದ್ದಿ ಏನೆಂದರೆ ಇದು ನರೇಂದ್ರ ಮೋ[...] ಸಂವಿಧಾನ ವಿರೋಧಿ, ಅಂಬೇಡ್ಕರ್ ವಿರೋಧಿಯ[...] ಕಾಣಿಸಿರುವುದು. ಕಾಂಗ್ರೆಸ್ಸಿಗರು ತಪ್ಪು ಮಾಡಿದಾಗ ಇವ[...] ದಿಢೀರನೆ ಇವುಗಳಿಗೆ ಗೌರವ ನೀಡಬೇಕು ಎ[...] ಜ್ಞಾನೋದಯ ಆಗಬಹುದೋ ಏನೋ. ಇದ[...] ಮನಮೋಹನ್ ಸಿಂಗ್ ಅವರ ನಡವಳಿಕೆ ಸರಿಯಾ[...] ಅಂದರೆ ಹೌದು ಅನ್ನುತ್ತಾರೆ ಕಾಂಗ್ರೆಸ್ ವಕ್ತಾರ ಮನ[...] ತಿವಾರಿ. 'ಅದು ಹೇಗ್ರಿ ಸಾರ್' ಅಂದ್ರೆ 'ಇಂಡಿ[...] ಅನ್ನೋದು ಬೃಹತ್ ರಾಷ್ಟ್ರ. ಅಲ್ಲಿನ ಪ್ರಧಾನಿಗೆ ನೂರೆ[...] ಕೆಲಸ ಇರ್ತವೆ. ಯಾವುದೋ ಪೂರ್ವ ನಿಯೋಜಿತ ಅಧಿ[...] ಕಾರ್ಯ ಇದ್ದುದರಿಂದ ಅವರು ಅಸ್ಸಾಂಗೆ ಹೋಗಲಿ[...] ಮತ ಚಲಾಯಿಸಲಿಲ್ಲ' ಅಂತಾರೆ. ಹಾಗಾ.... ಹಾಗಾ[...] ಅಂಚೆಮತ ಪತ್ರ ಬಳಸಬಹುದಿತ್ತಲ್ಲಾ....

ಬಹಿರಂಗದ ಪತ್ರಕ್ಕೊಂದು ಅಂತರಂಗದ ಅನಿಸಿಕೆ

ಟಿ.ಆರ್.ಚಂದ್ರಶೇಖರ್ ಅವರು 20-4-2011ರ ಸಂಚಿಕೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಿಗೆ ಬರೆದ ತೆರೆದ ಪತ್ರ ನಮಗೆಲ್ಲ ತುಂಬಾ ಸಂತೋಷವನ್ನುಂಟುಮಾಡಿದೆ.

ಸನ್ಮಾನ್ಯರು ವೀರಶೈವ ಸಭೆ ತೆಗೆದುಕೊಳ್ಳಬೇಕಾದ ನಿರ್ಣಯಗಳನ್ನು ತುಂಬಾ ಕಳಕಳಿಯಿಂದ ಸೂಚಿಸಿದ್ದಾರೆ. ಆದರೆ ಜಾತಿಯ ಅಂಧಕಾರತ್ವವನ್ನು ತುಂಬಿಕೊಂಡಿರುವ ಆ ಹಬ್ಬ ಇವರು ತಿಳಿ ಹೇಳಿರುವ ನಿರ್ಣಯಗಳನ್ನು ಕೈಗೊಳ್ಳಲು ನೂರು ವರ್ಷಗಳು ಬೇಕಾಗುತ್ತವೆನೋ?! ಧರ್ಮಗುರು ಬಸವಣ್ಣನವರನ್ನಾಗಲಿ, ಬಸವಾದಿ ಪ್ರಮಥರ ಸಂದೇಶಗಳನ್ನಾಗಲಿ ಎಳ್ಳಷ್ಟೂ ಅರಿಯದ ಅವರು ತಮ್ಮ ಸಭೆಯ ಹೆಸರನ್ನು ಲಿಂಗಾಯತ ಎಂದು ಬದಲಿಸುವ ಬಗ್ಗೆ ಕಿಂಚಿತ್ತೂ ನಂಬಿಕೆ ಇಲ್ಲ,

ಬೇರೆ ಯಾವುದೇ ಧರ್ಮದ ಬಾಂಧವರಾಗಿದ್ದರೆ ಮುಖ್ಯಮಂತ್ರಿ ಯಡಿಯೂರಪ್ಪನವರಂತೆ ಧರ್ಮವಿರೋಧಿ ಕೆಲಸಗಳನ್ನು ಮಾಡಿದ್ದರೆ ಆಗಿಂದಾಗಲೆ ಆತನನ್ನು ಅಧಿಕಾರದಿಂದ ತೆಗೆದು ಹಾಕಿಸಿ ಆತನನ್ನು ತಮ್ಮ ಧರ್ಮದಿಂದಲೆ ಬಹಿಷ್ಕಾರ ಹಾಕುತ್ತಿದ್ದರು. ಆದರೆ ಅವರು ಹಾಗೆ ಮಾಡುವ ಬದಲು ಆತನ ಪರ ಧರಣಿ ಕೂರುತ್ತಾರೆ. ಆ ಮೂಲಕ ಇಡೀ ಲಿಂಗಾಯತ ಸಮುದಾಯದ ಮಾನವನ್ನು ಮೂರು ಕಾಸಿಗೆ ಹರಾಜು ಹಾಕುತ್ತಾರೆ.



ಇನ್ನು ಯಡಿಯೂರಪ್ಪ ಭಾಗವಹಿಸಿರುವ ಯಜ್ಞ-ಯಾಗಗಳಿಗೆ ಲೆಕ್ಕವಿಲ್ಲ, ಅದರ ಬಗ್ಗೆ ಒಮ್ಮೆ ತಾಯಿ ಗೌರಿ ಲಂಕೇಶ್ ತಮ್ಮ ಲೇಖದಲ್ಲಿ ಪ್ರಸ್ತಾಪಿಸಿದ್ದಾರೆ. ಒಂದು ಅಗಳು ಅನ್ನದ ಹಿಂದೆ ರೈತನ ಆರು ತಿಂಗಳ ಶ್ರಮವಿದೆ. ಸುಡುವ ಪೀತಾಂಬರದ ಹಿಂದೆ ಹಲವಾರು ಜನರ ಶ್ರಮವಿದೆ. ಒಂದು ಹಸು ಅಥವ ಎಮ್ಮೆಯನ್ನು ಸಾಕಿ, ಮೇಯಿಸಿ, ಹಾಲು ಹಿಂಡಿ, ಕಾಸಿ, ಹೆಪ್ಪು ಹಾಕಿ, ಮೊಸರು ಕಡೆದು, ಬೆಣ್ಣೆ ತೆಗೆದು, ತುಪ್ಪ ಕಾಯಿಸಿದ ಗೃಹಿಣಿಯ ಶ್ರಮವಿದೆ. ಇದೆಲ್ಲವೂ ಸಾಮಾನ್ಯ ಜನರ ಶ್ರಮ. ಅದನ್ನೆಲ್ಲ ಅವರು ಮಾಡುವುದು ಸಮಾಜಕ್ಕೆ ಉಪಯೋಗವಾಗಲಿ ಎಂದೇ ವಿನಃ ಸುಡಲು ಅಲ್ಲ,

ನಮ್ಮ ಸರ್ಕಾರ ರೂಪಾಯಿ ನೋಟನ್ನು ಸುಟ್ಟರೆ ಅದು ಕಾನೂನುಬಾಹಿರ ಎಂದು ಹೇಳುತ್ತದೆ. ಆದರೆ ತಿನ್ನುವ ಅನ್ನವನ್ನು ಸುಟ್ಟರೆ ಕಾನೂನು ಇದನ್ನು ವಿರೋಧಿಸುವುದಿಲ್ಲ,

ಲಿಂಗಾಯತರು ಆದಷ್ಟು ಬೇಗ ತಮ್ಮ ಧರ್ಮದ ವಿಶಿಷ್ಟತೆ ಬಗ್ಗೆ ಅರ್ಥಮಾಡಿಕೊಂಡು ಲಿಂಗಾಯತ ಧರ್ಮವನ್ನು ರಕ್ಷಿಸಬೇಕಿದೆ ಮತ್ತು ಬಸವಣ್ಣನವರು ತೋರಿದ ಮಾರ್ಗದಲ್ಲಿ ನಡೆಯಬೇಕಿದೆ.

- ವೀರೇಶ್ ಕುಮಾರ್. ಕೆ. ಈಮೇಲ್ ಮೂಲಕ

ರಾಜ್ಯದಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಿಗೆ (ಚನ್ನಪಟ್ಟಣ, ಬಂಗಾರಪೇಟೆ ಹಾಗು ಜಗಳೂರು) ಮರುಚುನಾವಣೆ ನಡೆದು 5 ದಿನವಾಯ್ತು, ಈವರೆಗೂ ಚುನಾವಣಾ ಫಲಿತಾಂಶ ಪ್ರಕಟವಾಗಿಲ್ಲ, ಮತ ಎಣಿಕೆ ಮಾಡುವುದು ಇನ್ನೂ ಒಂದು ತಿಂಗಳ ನಂತರ ಎಂದು ತಿಳಿದುಬಂತು. ಚುನಾವಣೆ ನಡೆದ ಮೇಲೆ ಒಂದು ತಿಂಗಳ ನಂತರ ಫಲಿತಾಂಶ!!! ಇಷ್ಟು ತಡವಾಗಿ ಮತ ಎಣಿಕೆ ಮಾಡುವುದು ಯಾವ ಕಾರಣಕ್ಕಾಗಿ? ತಿಳಿಯುತ್ತಿಲ್ಲ!!!

ಮಾವಿನಕಾಯಿ ಕಿತ್ತು ಒತ್ತಾಕಿದರೆ 4 ದಿನಕ್ಕೆ ಹಣ್ಣಾಗುತ್ತವೆ. ಅದಕ್ಕೆ ಮುಂಚೆ ಹಣ್ಣು ಬೇಕೆಂದರೆ ಸಿಗುವುದಿಲ್ಲ, ಹಲಸಿನಕಾಯಿ ಕಿತ್ತು ಒತ್ತಾಕಿದರೆ 2 ದಿನಕ್ಕೆ ಹಣ್ಣಾಗುತ್ತವೆ. ಹಣ್ಣು ಬೇಕೆಂದರೆ ಕಾಯಲೇ ಬೇಕು. ಹಾಗೆಯೇ ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ ಫಲಿತಾಂಶ ಬರುವುದು 1 ತಿಂಗಳ ನಂತರ. ಇದೂ ಅರ್ಥವಾಗುತ್ತದೆ. ಆದರೆ ಓಟುಗಳನ್ನು ಎಣಿಸಲು 1 ತಿಂಗಳು ತಡಮಾಡುವುದು ಏತಕ್ಕಾಗಿ ಎಂಬುದು ಗೊತ್ತಾಗುತ್ತಿಲ್ಲ,

ಪಾಕಿಸ್ತಾನ, ಶ್ರೀಲಂಕ, ಅಮೆರಿಕ ಮುಂತಾದ ದೇಶಗಳಲ್ಲಿ ಚುನಾವಣೆ ನಡೆದ ದಿನವೇ ರಾತ್ರಿ 8 ಗಂಟೆಗೆ ಫಲಿತಾಂಶ ಹೊರಬೀಳುತ್ತದೆ. ಇದು ನಮ್ಮಲ್ಲೇಕೆ ಸಾಧ್ಯವಿಲ್ಲ? ಫಲಿತಾಂಶಗಳು, ಬೇರೆ ಕಡೆ ನಡೆಯುವ ಚುನಾವಣೆಗಳ ಮೇಲೆ ಪ್ರಭಾವ ಬೀರುತ್ತವೆ ಎನ್ನುವುದಾದರೆ "ನಮ್ಮ ಮತದಾರರು ಪ್ರಜ್ಞಾವಂತರಲ್ಲ" ಎಂದಾಗುತ್ತದೆ. ಅವರಿಗೆ ಮತದಾನ ಮಾಡುವಷ್ಟೂ ಬುದ್ಧಿ ಇಲ್ಲ ಎಂದಾಗುತ್ತದೆ. ಹಾಗಿದ್ದಲ್ಲಿ ನಮ್ಮ ಚುನಾವಣೆಗಳಿಗೆ ಅರ್ಥವೇ ಇಲ್ಲ ಎಂದಾಗುತ್ತದೆ.

ಚುನಾವಣಾ ಫಲಿತಾಂಶವನ್ನು ಶೀಘ್ರವಾಗಿ ಪ್ರಕಟಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮತದಾರರನ್ನು ಪ್ರಜ್ಞಾವಂತರನ್ನಾಗಿಸುವ ಕಾರ್ಯ ಈಗಲಾದರೂ ಶ್ರದ್ಧಾಪೂರ್ವಕವಾಗಿ ಆಗಬೇಕು. ಅದಕ್ಕೆ ಬೇಕು, 100 ಕ್ಕೆ 100 ಸಾಕ್ಷರತ[...] ಅದು ಬಿಟ್ಟು ಮತ ಎಣಿಕೆ ತಡವಾಗಿ ಮಾಡುವುದಲ್ಲ; ಅದು ಶು[...] ಮೂರ್ಖತನ.

- ವೀರಭ್ಯಾತಯ್ಯ. ಬೆಂಗಳೂರ[...]


ಏಪ್ರಿಲ್ 20, 2011ರ ಸಂಚಿಕೆ ತುಂಬಾ ಇಷ್ಟವಾಯ್ತು, 'ಚಾರ್ವಾ[...] ಶಿವಸುಂದರ್ ಲೇಖನ ನಾವು ಚಿಂತಿಸುವಂತೆ ಮಾಡಿತು. ಇಡೀ ದೇಶವೆ[...] ಅಷ್ಟೇ ಏಕೆ ಇಡೀ ಪ್ರಪಂಚವೇ ಈ ಬೂದಿ ಬಾಬಾನ ಆರೋಗ್ಯದ ಬಗ[...] ಆತನ ದೇಹಸ್ಥಿತಿಯ ಬಗ್ಗೆ ಚಿಂತೆ ಮಾಡುತ್ತಿದ್ದರೆ ನೀವು ಆತನ ಇನ್ನೊಂದ[...] ಮಗ್ಗುಲನ್ನು ಪರಿಚಯಿಸಿ 'ಆತನ ಬಂಡವಾಳವನ್ನು ಬಯಲಿಗೆಳೆದಿರಿ. ನವ[...] ಟೀಮ್‌ನ ಪಾರ್ವತೀಶರ ವಿಶೇಷ ಲೇಖನ ಚೆನ್ನಾಗಿತ್ತು

ನಮ್ಮ ಚಂದ್ರೇಗೌಡ್ರು, ನಾಗ್ತಿಹಳ್ಳಿ ಜೊತೆಗಿನ ಕೇರಳದ ಪ್ರವಾಸವನ್[...] ತುಂಬಾ ಚೆನ್ನಾಗಿ ಬರೆದಿದ್ದಾರೆ. ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಅವಲೋಕಿಸು[...] ಹೊಟ್ಟೆಹುಣ್ಣಾಗುವಷ್ಟು ನಗಿಸುವ ಇವರು ಅಲ್ಲಿ ಕಂಡದ್ದನ್ನು ಯಥಾವತ್ತಾ[...] ಚಿತ್ರಿಸಿದ್ದಾರೆ. ನಾನೂ ಕೂಡಾ ಇವರ ಜೊತೆಗೆ ಹೋಗಬೇಕಾಗಿತ್ತು, ಆದ[...] ಈ ಬಿರುಬಿಸಿಲಿನ ತಾಪಮಾನವನ್ನು ತಡೆಯಲಾರದೆ ನನ್ನ ಮಗಳು ಗುಂಡ[...] ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರಿಂದ ಅನಿವಾರ್ಯವಾಗಿ ಇವರ ಜೊ[...] ಹೋಗಲಿಲ್ಲ, ಆದರೇನಂತೆ ಗೌಡ್ರು ಲೇಖನ ಓದಿದ ಮೇಲೆ ನಾನೂ ಸ[...] ಕೇರಳಕ್ಕೆ ಹೋದ ಅನುಭವವಾಯ್ತು,

ಬ್ರಹ್ಮಾಂಡ ಬ್ರಹ್ಮನ ಬಗ್ಗೆ 'ಯಾಹೂ' ಟೀಕೆ ಹೊಟ್ಟೆ ಹುಣ್ಣಾಗುವಷ[...] ನಗು ತರಿಸಿತು. ಈ ಅಯೋಗ್ಯ 'ಅಂಗೈಗೆ ಗುಲಗಂಜಿ ಮುಳುಗೋವಷ[...] ರಂ ಬಿಟ್ಟುಕೊಂಡು ಕುಡಿರಿ' ಅಂತ ಹೇಳಿದ್ದು ನೋಡಿದರೆ ನಾನು ಒಂದ[...] ಬಾಟ್ಲಿಯನ್ನು ಖಾಲಿ ಮಾಡಲು ಒಂದು ವಾರವೇ ಬೇಕಾಗುತ್ತದೆ. ಲಂಕೇ[...] ವಿಶೇಷಾಂಕದಲ್ಲಿ ರಾಜಪ್ಪ ದಳವಾಯಿ ಬರೆದ ಲೇಖನಕ್ಕೆ ಇಷ್ಟೊಂದು ವ್ಯಾ[...] ಪ್ರತಿಕ್ರಿಯೆ ಬಂದದ್ದನ್ನು ನೋಡಿದರೆ ಆರೋಗ್ಯಕರ ಮನಸ್ಸುಗಳು ಇನ್ನೂ [...] ಅಂತ ಅನಿಸ್ತು, ಇಂತಹ ಟೀಕೆಗಳು, ಪ್ರತಿಕ್ರಿಯೆಗಳು ಈಗ ಅಗತ್ಯ. ನವ[...] ಕಲ್ಮಳಿಯ 'ಮಂಗನ ಬ್ಯಾಟೆ' ಲೇಖನವನ್ನು ಓದುತ್ತಾ ಹೋದರೆ ನನ್ನೂರಿನ[...] ಇತ್ತೀಚೆಗೆ ವಿಪರೀತ ಮಂಗಗಳು ಮನೆ ಮನೆಗೆ ನುಗ್ಗುತ್ತಾ ಸಿಕ್ಕಿದ್ದನ್ನೆ[...] ದೋಚಿಕೊಂಡು ತಿನ್ನುತ್ತಾ ಹೋಗುತ್ತಿರುವುದೇಕೆ ಎಂದು ಅರ್ಥವಾಗುತ್ತ[...] ಪಾಪ ಅವು ಏನು ಮಾಡಕ್ಕೆ ಸಾಧ್ಯ? ಈ ದರಿದ್ರ ನರ ಮಾನವರು(ನಾನು ಕೂಡಾ) ಕಾಡನ್ನೆಲ್ಲಾ ಕಡಿಯುತ್ತಾ ಬಂದರೆ ಅವು ಅನಿವಾರ್ಯವಾಗಿ ಎಲ್ಲಿ[...] ಹೋಗಬೇಕು, ಅಲ್ಲವೇ?

-ಶೂದ್ರ ಸಂತೋಷ್. ಅಜ್ಜಂಪುರ[...]

ಮುಸ್ಸಂಜೆ ಸೀನನಿಗೆ ಮೂರನೇ ಹೆಂಡತಿ ಮುಹೂರ್ತ ಇಟ್ಟಳಾ?



ದೂವರೆ ವರ್ಷಕ್ಕೆ ಮುನ್ನ 'ಮುಸ್ಸಂಜೆ ಗೆಳತಿ' ತರಮ ದರಿದ್ರ ಸಿನಿಮಾವೊಂದು ಬಂದಿತ್ತು. ಈ ತ್ರವನ್ನು ಯಾರೂ ಮೂಸಿ ನೋಡಿರಲಿಲ್ಲವಾದ್ದರಿಂದ ದಿನಕ್ಕೇ ಆ ಚಿತ್ರ ಗೊಟಕ್ ಎಂದಿತ್ತು.

ರೆ ಆ ಸಿನಿಮಾದ ನಿರ್ದೇಶಕ, ನಿರ್ಮಾಪಕ ಕಂ ಬಿ.ಪಿ. ಶ್ರೀನಿವಾಸ್ ತನ್ನ ಮಗಳನ್ನೇ ಯನ್ನಾಗಿಸಿ ವಿಕೃತಿಯನ್ನೂ ಮೀರಿದ ಕೃತ್ಯವನ್ನು ಒಬ್ಬ ತಂದೆಯೆನಿಸಿಕೊಂಡು ತನ್ನ ಮೊದಲ ಮಗಳು ಶಾಲಿನಿಗೆ ತುಂಡು ಬಟ್ಟೆ ಹಾಕಿಸಿ, ದ ಎಕ್ಸ್‌ಪೋಸ್ ಮಾಡಿಸಿ, ಆಕೆಯೊಂದಿಗೆ ತ್ರ ಫೋಟೋಗಳನ್ನು ತೆಗೆಸಿ, ಅವಳೊಂದಿಗೆ ಹುಬಿಬಿಸಿ ಲ್ಲಿ ಕಾಣಿಸಿಕೊಂಡು ಅಸಹ್ಯ ಹುಟ್ಟಿಸಿದ್ದ.

ಗ ಅದೇ ಶ್ರೀನಿವಾಸ್ ತುಮಕೂರು ಜಿಲ್ಲೆ ಬೆಳ್ಳಾವಿ ಸರ ಮುಂದೆ ತನ್ನ ಮೂರನೇ ಹೆಂಡತಿ ನವನೀತಳ ದೂರು ಹೇಳುತ್ತಾ ನಿಂತಿದ್ದಾನೆ. "ಅವಳು ನೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾಳೆ. ರು ಸೇರಿ ನನ್ನನ್ನು ಕೊಲ್ಲಲು ಸ್ಕೆಚ್ ಹಾಕಿದ್ದಾರೆ" ಅವಲತ್ತು ಕೊಳ್ಳುತ್ತಿದ್ದಾನೆ...

ತುಕಿನುದ್ದಕ್ಕೂ ಐಲಾಟ, ದಗಲ್ಬಾಜಿಗಳನ್ನೇ ಂಡು ಬಂದಿರುವ ಶ್ರೀನಿವಾಸ ಒಂಥರಾ ವಿಲಕ್ಷಣ ಈತ ಬರೀ ವಂಚಕನಲ್ಲ, ಸುಳ್ಳೊಂದೇ ಈತನ ಸೀರೆ ಶೋಕಿಯೊಂದೇ ಈತನಿಗಂಟಿದ ತೆವಲಲ್ಲ... ಈ ಎಲ್ಲ ವಿಕೃತಿಗಳನ್ನೂ ಒಳಗೊಂಡ ಧೂರ್ತ ೀನಿವಾಸ. ಒಂದು ಕಾಲಕ್ಕೆ ಮಸಾಲೆ ಪುಡಿ, ಮ ಪುಡಿ, ರಸಂಪುಡಿಯನ್ನು ರುಬ್ಬಿ ಅದನ್ನು ್ಬ ಮಾಡಿ ಅಂಗಡಿಅಂಗಡಿಗಳಿಗೆ ಸಪ್ಲೈ ತ್ತಿದ್ದವನು ಶ್ರೀನಿವಾಸ. ಹೀಗಾಗಿಯೇ ಈತನಿಗೆ ಪುಡಿ ಸೀನ ಎಂಬ ಪೆಟ್‌ನೇಮ್ ಕೂಡಾ

ಹೆಂಡಿರು ಮೂವರು!

ರದಪುಡಿ ಮಾರಿಕೊಂಡಿದ್ದ ಸೀನ ಎಸ್ಟೇಟ್ ಬಿಜಿನೆಸ್ಸಿಗಿಳಿದು ಒಂದಷ್ಟು ೋಡುತ್ತಿದ್ದಂತೇ ಆತನ ೋಕಿ ಶೋಕಿಗಳೂ ವು. ಅಧಿಕೃತವಾಗೇ ಹೆಂಡತಿಯರ ಸಂಖ್ಯೆ . ಮೂವರು ಮುದ್ದಿನ ಗಂಡ ತರರನ್ನು ಎಷ್ಟೇ ಮೋಚಿದರೂ ತನ್ನ ರು ಪತ್ನಿಯರನ್ನು ರವಾಗೇ ಕೊಂಡಿದ್ದ. ಈತನ ಪತ್ನಿ ಸುಜಾತಾ. ಕುಮಾರಸ್ವಾಮಿ ನಲ್ಲೊಂದು ಮನೆ ತೆಪ್ಪಗಿರಿಸಿದ್ದಾನೆ. ೇ ಪತ್ನಿ ವಸಂತಾಳಿಗೆ ಾವಿಯಲ್ಲಿ ಮನೆ ಮಾಡಿ ಟ್ಟಿದ್ದಾನೆ. ಇನ್ನು ಈತನ ವಿರುದ್ಧ ದ್ದಿರುವ ಮೂರನೇ ಹೆಂಡತಿ ನವನೀತಾಳನ್ನೂ ಸೊಂಪಾಗೇ ಸಾಕಿದ್ದ.



ನವನೀತಾಳಿಗೆ ಬೆಂಗಳೂರಿನ ಡಾಲರ್ಸ್ ಕಾಲನಿಯಲ್ಲೊಂದು ಬಂಗಲೆ, ಬೆಳ್ಳಾವಿಯಲ್ಲೊಂದು ಫಾರ್ಮ್ ಹೌಸು, ಓಡಾಡಲು ದಿವೀನಾದ ಕಾರು, ಅಡಿಯಿಂದ ಮುಡಿಯವರೆಗೆ ಫಳಗುಟ್ಟುವ ಬೆಳ್ಳಿ, ಬಂಗಾರ ಎಲ್ಲವನ್ನೂ ಪ್ರಾಪ್ತಿಸಿದ್ದ. ಶ್ರೀನಿವಾಸನ ಅತಿ ಮುದ್ದಿನ ಮೂರನೇ ಪತ್ನಿ ನವನೀತಾ ಚಿತ್ರನಟನೆ, ರಾಜಕಾರಣ ಮತ್ತು ಇನ್ನೂ ಹಲವು ಬಿಜಿನೆಸ್ಸುಗಳಲ್ಲಿ ಕೈಯಾಡಿಸುವ ಚಾಲಾಕಿ ಹೆಂಗಸು. ನವನೀತಾ ಈ ಹಿಂದೆ ತುಮಕೂರು ಗ್ರಾಮಾಂತರದ ಬುಗುಡನಹಳ್ಳಿಯ ತಾಲ್ಲೂಕು ಪಂಚಾಯತಿಯ ಸದಸ್ಯೆಯಾಗಿದ್ದವಳು.

ಮೊದಲೇ ಇಬ್ಬರು ಪತ್ನಿಯರನ್ನು ಹೊಂದಿದ್ದ ಶ್ರೀನಿವಾಸ್ ಕೆಲ ವರ್ಷಗಳ ಹಿಂದೆ ಡಿಡಿ 1ಗೆ ಧಾರಾವಾಹಿಯೊಂದನ್ನು ನಿರ್ಮಿಸಿದ್ದ. ಆ ಧಾರಾವಾಹಿಯಲ್ಲಿ ಇದೇ ನವನೀತಾ ಸಣ್ಣದೊಂದು ಪಾತ್ರದಲ್ಲಿ ನಟಿಸಿದ್ದಳು. ಕರೀ ಮುಖದ ಖಾರದಪುಡಿ ಸೀನ ಮತ್ತು ಲಕಲಕಾ ಹೊಳೆಯುವ ನವನೀತಾಳ ನಡುವೆ ಅದೆಂತಹ ಆಕರ್ಷಣೆ ಹುಟ್ಟಿತೋ. ಇಬ್ಬರೂ ಪರಸ್ಪರ ಲವ್ವಿಗೆ ಬಿದ್ದು ಮದುವೆಯಾದರು. ನವನೀತಾಳನ್ನು ತಾಲ್ಲೂಕು ಪಂಚಾಯತಿ ಎಲೆಕ್ಷನ್ನಿಗೆ ನಿಲ್ಲಿಸಿ, ಸಖತ್ತಾಗಿ ದುಡ್ಡು ಖರ್ಚು ಮಾಡಿ ಆಕೆಯನ್ನು ಗೆಲ್ಲಿಸೇ ಬಿಟ್ಟ ಸೀನ. ಅಷ್ಟು ಸಾಲದೆಂಬಂತೆ, 2004ರಲ್ಲಿ ಜೆಡಿಎಸ್‌ನ ಕೆ.ಎನ್. ರಾಜಣ್ಣರ ಎದುರು ಬೆಳ್ಳಾವಿ ವಿಧಾನಸಭಾ ಚುನಾವಣೆಗೂ ನವನೀತಾಳನ್ನು ನಿಲ್ಲಿಸಿ ಕೋಟಿ ಕೋಟಿ ಖರ್ಚು ಮಾಡಿದ್ದ. ಹೀಗೆ ಹಣ ಸುರಿದಿದ್ದರಿಂದ ನವನೀತಾ ಗೆದ್ದೇ ಬಿಟ್ಟಳು ಎಂದು ಸೀನ ಬೀಗುತ್ತಿದ್ದರೂ ಮತ ಪೆಟ್ಟಿಗೆಯಲ್ಲಿ ರಾಜಣ್ಣ ಮುಂದೆ ಸಾಗಿ ಸೀನ ಮಣ್ಣುಮುಕ್ಕಿದ.

ಎಲೆಕ್ಷನ್‌ನಲ್ಲಿ ಎಕ್ಕಾ ಎದ್ದ ಮೇಲೆ ಶ್ರೀನಿವಾಸ ಕೈಯಿಟ್ಟಿದ್ದು ಸಿನಿಮಾ ನಿರ್ಮಾಣಕ್ಕೆ. ತನ್ನ ದೂರದ ಸಂಬಂಧಿ ಸ್ಟಾರ್ ಕ್ರಿಯೇಟರ್ಸ್‌ನ ಗುರು ದೇಶಪಾಂಡೆಯನ್ನೇ ನಿರ್ದೇಶಕನನ್ನಾಗಿಸಿ 'ವಾರಸ್ದಾರ' ಎಂಬ ಸಿನಿಮಾ ತೆಗೆದ. ಪತ್ರಕರ್ತ ರವಿ ಬೆಳಗೆರೆ ಮುಖ್ಯ ಪಾತ್ರದಲ್ಲಿ ನಟಿಸಿದ ಈ ಚಿತ್ರದಲ್ಲಿ ಶ್ರೀನಿವಾಸ ಮತ್ತು ಆತನ ಮೂರನೇ ಮಡದಿ ನವನೀತಾ ಕೂಡಾ ಪಾರ್ಟು ಮಾಡಿದ್ದರು.

ಮಹಾನ್ ವಂಚಕ!

ಹೀಗೆ ಏರಿಯಾಗೊಬ್ಬಳು ಹೆಂಡತಿ, ವರ್ಷಕ್ಕೊಂದು ಸೀರಿಯಲ್ಲು, ವಾರಕ್ಕೊಂದು ಸಿನಿಮಾ ಎಂಬಂತಹ ರಂಗೀಲಾ ಆಟಗಳನ್ನು ಆಡಲು ಸೀನನಿಗೆ ಈ ಪಾಟಿ ದುಡ್ಡು ಎಲ್ಲಿಂದ ಬರುತ್ತದೆ ಎಂದು ಹುಡುಕುತ್ತಾ ಹೊರಟರೆ ನಿಗೂಢವಾದ ಅನೇಕ ಅಧ್ಯಾಯಗಳು ತೆರೆದುಕೊಳ್ಳುತ್ತವೆ. ಸ್ವತಃ ಶ್ರೀನಿವಾಸನೇ ಹೇಳುವ ಪ್ರಕಾರ ನೇಪಾಳದ ಕಠ್ಮಂಡುವಿನಲ್ಲಿ 'ಇಂಡಿಯಾ-ಹಾಂಕಾಂಗ್ ಬ್ಯಾಂಕಿಂಗ್ ಸರ್ವೀಸ್ ಕಾರ್ಪೋರೇಷನ್' ಎನ್ನುವ ಬ್ಯಾಂಕನ್ನು ನಡೆಸುತ್ತಾನಂತೆ. ಭೂತಾನ್, ಶ್ರೀಲಂಕಾ, ಮಾರಿಷಸ್, ಹಾಂಕಾಂಗ್ ಮತ್ತು ಬೆಂಗಳೂರುಗಳಲ್ಲಿ ಇದರ ಬ್ರಾಂಚುಗಳೂ ಇವೆಯಂತೆ. ಜೊತೆಗೆ ಫಿನಾ ವರ್ಲ್ಡ್ ಗ್ರೂಪ್ ಆಫ್ ಕಂಪನೀಸ್ ಎಂಬ ಸಂಸ್ಥೆಗೂ ಈತನೇ ಒಡೆಯನಂತೆ. ಇದೇನಪ್ಪಾ ಇದೆಲ್ಲಾ ನಿಜವಾ ಎಂದು ಇಂಟರ್‌ನೆಟ್‌ನಲ್ಲಿ ಸರ್ಚ್ ಮಾಡಿದರೆ ಈತನ ಕಂಪೆನಿಗಳ ಡಿಟೇಲುಗಳಿಗಿಂತ ಬರೀ ಈತನ ವಂಚನೆಯ ವಿವರವೇ ಬಿದ್ದು ಮಲಗಿವೆ. ಶ್ರೀನಿವಾಸ್ ನಿಜಕ್ಕೂ ಬ್ಯಾಂಕ್ ನಡೆಸುತ್ತಾನಾ? ಹರಳೆಣ್ಣೆ ಕುಡಿದವನಂತೆ ಕಾಣುವ ಈತ ಅಷ್ಟು ದೊಡ್ಡ ಉದ್ಯಮಿಯಾ? ಎಂಬ ಪ್ರಶ್ನೆಗಳು ಮೂಡುತ್ತವಾದರೂ, ಈತ ನೇಪಾಳದಲ್ಲಿ ಏನೋ ಅಡ್ನಾಡಿಗುಬ್ಬಿ ಮಾಡುತ್ತಾನೆಂಬುದಂತೂ ನಿಜ. ಸಿಕ್ಕಸಿಕ್ಕವರಿಗೆಲ್ಲಾ ಲೋನ್ ಕೊಡಿಸುತ್ತೇನೆ ಎಂದು ಈತ ಪಂಗನಾಮ ಇಟ್ಟ ಕಾರಣಕ್ಕೆ, ಒಮ್ಮೆ ಗೋವಾ ಪೊಲೀಸರು ಬೆಂಗಳೂರಿಗೇ ಬಂದು ಈತನನ್ನು ಅರೆಸ್ಟ್ ಮಾಡಿ ಕರೆದೊಯ್ದಿದ್ದರು.

'ಮುಸ್ಸಂಜೆ ಗೆಳತಿ'ಯ ನಂತರ 'ಮುಸ್ಸಂಜೆಯ ಗೆಳತಿ' ಖ್ಯಾತಿಯ ಬಿ.ಪಿ. ಶ್ರೀನಿವಾಸ್ ಒಟ್ಟೊಟ್ಟಿಗೆ ಮೂರು ಚಿತ್ರಗಳನ್ನು ಘೋಷಿಸಿದ್ದ. ಅವುಗಳಲ್ಲಿ ಮೊದಲನೆಯದು 'ಹರಿಶ್ಚಂದ್ರ ಘಾಟ್'. ಮೂವರು ಹೆಂಡಿರನ್ನು ಹೊಂದಿರುವ ತನ್ನದೇ ಲೈಫ್ ಸ್ಟೋರಿಯನ್ನು ಆಧರಿಸಿ 'ಯಾರು ಹಿತವರು ನಿನಗೆ ಈ ಮೂವರೊಳಗೆ' ಎಂಬ ಚಿತ್ರವನ್ನೂ ಈ ಭೂಪ ಘೋಷಿಸಿದ್ದ. ಮೂರನೆಯದು 'ಬ್ಲಾಕ್ ಫಾರೆಸ್ಟ್' ಎಂಬ ನಿಗೂಢ ಚಿತ್ರ. ಈ ಮೂರು ಚಿತ್ರಗಳಲ್ಲಿ 'ಹರಿಶ್ಚಂದ್ರ ಘಾಟ್' ಚಿತ್ರಕ್ಕೆ ಬೆಂಗಳೂರಿನ ಕಲ್ಲಪಲ್ಲಿ ಸ್ಮಶಾನದಲ್ಲೇ ವಿಲಕ್ಷಣವಾಗಿ ಮುಹೂರ್ತ ನಡೆಸಿ ಸುದ್ದಿ ಮಾಡಿದ್ದ. 'ಗಂಗಾ ಕಾವೇರಿ' ವೆಂಕಟಪ್ಪನವರ ಮಗ ಅಕ್ಷಯನೇ ತನ್ನ ಚಿತ್ರದ ಹೀರೋ ಎಂದು ನಂಬಿಸಿದ್ದ. ಸಿನಿಮಾ ಒಂದು ವಾರ ಶೂಟಿಂಗ್ ಮುಗಿಯುವ ಹೊತ್ತಿಗೆ ಶ್ರೀನಿವಾಸ್‌ನ ಅಸಲಿಯತ್ತು ತಿಳಿದ ವೆಂಕಟಪ್ಪನವರು ಮಗನ ಕಾಸ್ಟ್ಯೂಮು ಬಿಚ್ಚಿಸಿ 'ಸಿನಿಮಾನೂ ಬೇಡ, ಈ ತರ್ಲೆ ಸೀನನ ಸವಾಸವೂ ಬ್ಯಾಡ' ಎಂದು ಮಗನನ್ನು ಮನೆಗೆ ವಾಪಾಸು ಕರೆದೊಯ್ದಿದ್ದರು. ಅಷ್ಟೊತ್ತಿಗೆ ಸಿಕ್ಕ ಸಿಕ್ಕಲ್ಲೆಲ್ಲಾ ಕಾಸು ಗೆಬರಿದ್ದ ಸೀನ ತಲೆಮರೆಸಿಕೊಂಡು ಕಠ್ಮಂಡು ಸೇರಿದ್ದ.

ಇಂಥ ಶ್ರೀನಿವಾಸ ಈಗ ಮತ್ತೆ ಪ್ರತ್ಯಕ್ಷನಾಗಿದ್ದಾನೆ. ಅದೂ ತನ್ನ ಮೂರನೇ ಹೆಂಡತಿಯ ಮೇಲೇ ಆರೋಪ ಹೊರಿಸುತ್ತಾ!

ಮುಹೂರ್ತ ಇಟ್ಟಳೇ ನವನೀತೆ?

"ನವನೀತಾ ಡ್ರೈವರ್ ಬಸವರಾಜು ಜೊತೆ ಅನೈತಿಕ ಸಂಬಂಧ ಹೊಂದಿದ್ದಾಳೆ. ಎಷ್ಟು ಹೇಳಿದರೂ ಆತನ ಸಂಪರ್ಕ ತೊರೆಯುತ್ತಿಲ್ಲ, ನನ್ನನ್ನು ಕೊಂದು ನನ್ನ ಎಲ್ಲ ಆಸ್ತಿಯನ್ನು ಲಪಟಾಯಿಸುವುದು ಅವರಿಬ್ಬರ ಪ್ಲಾನು" ಎನ್ನುವುದು ಶ್ರೀನಿವಾಸನ ಗೋಳು.

ನಾಲ್ಕೈದು ದಿನಗಳ ಹಿಂದೆ ಬಂದು ಶ್ರೀನಿವಾಸ್ ಬೆಳ್ಳಾವಿಯಲ್ಲಿರುವ ತನ್ನ ಫಾರ್ಮ್ ಹೌಸ್‌ಗೆ ಹೋದಾಗ ನವನೀತಾ ಆತನಿಗೆ ದೋಸೆ-ಚಟ್ನಿ ತಿನ್ನಲು ಕೊಟ್ಟಳಂತೆ. ಅದರಲ್ಲಿ ವಿಷ ಬೆರೆಸಲಾಗಿತ್ತು ಎಂದು ಶ್ರೀನಿವಾಸ ಗಂಟಲು ಹಿಡಿದು ಅರಚುತ್ತಿದ್ದಾನೆ. ಆದರೆ ಪೊಲೀಸರ ಸಮಕ್ಷಮದಲ್ಲಿ ವೈದ್ಯಕೀಯ ತಪಾಸಣೆ ನಡೆಸಿದ ವೈದ್ಯರು 'ಈತನ ದೇಹದಲ್ಲಿ ಯಾವ ವಿಷವೂ ಸೇರಿಲ್ಲ' ಎಂದು ಸರ್ಟಿಫಿಕೇಟು ನೀಡಿದ್ದಾರೆ. "ಡ್ರೈವರ್ ಬಸವರಾಜು ಜೊತೆ ಸೇರಿ ರೌಡಿಗಳನ್ನು ಬಿಟ್ಟು ನನ್ನನ್ನು ಮರ್ಡರ್ ಮಾಡುವ ಸ್ಕೆಚ್ಚು ಹಾಕಿದ್ದಾಳೆ ನವನೀತಾ" ಎಂದು ಸದ್ಯ ಚಾನೆಲ್‌ಗಳಿಗೆ ಸೀನ ಲೈವ್ ಇಂಟರ್‌ವ್ಯೂ ಕೊಡುತ್ತಿದ್ದಾನೆ.


ಅತ್ತ ನವನೀತಾ "ಶ್ರೀನಿವಾಸ್ ನನಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದಾನೆ" ಎಂದು ಆರೋಪಿಸಿ ಸೀನನ ವಿರುದ್ಧ ಸೆಕ್ಷನ್ 498 ಅಡಿಯಲ್ಲಿ ಕಂಪ್ಲೇಂಟು ದಾಖಲು ಮಾಡಿದ್ದಾಳೆ. ಶ್ರೀನಿವಾಸ್ ಕೂಡಾ ನವನೀತಾಳ ತಾಯಿ, ತಮ್ಮ, ಆಕೆಯ ಅಕ್ಕ ಮತ್ತು ನಾದಿನಿ ಸೇರಿದಂತೆ ಅವರ ಕುಟುಂಬದ ಎಲ್ಲ ಸದಸ್ಯರ ಮೇಲೂ ಹೋಲ್‌ಸೇಲ್‌ಆಗಿ ದೂರು ದಾಖಲಿಸಿದ್ದಾನೆ. ಶ್ರೀನಿವಾಸ ಮತ್ತು ನವನೀತಾರ ಜಗಳದಲ್ಲಿ ಬೆಳ್ಳಾವಿ ಪೊಲೀಸರು ಜರ್ಝರಿತರಾಗಿದ್ದಾರೆ.

ನಟ ನವನೀತಾ ಡ್ರೈವರ್ ಬಸವರಾಜನೊಂದಿಗೆ ಸೇರಿ ಶ್ರೀನಿವಾಸನ ಮೇಲೆ ನಿಜಕ್ಕೂ ಕೊಲೆ ಪ್ರಯತ್ನ ನಡೆಸಿದ್ದಾಳಾ? ಅಥವಾ ಶ್ರೀನಿವಾಸನೇ ನವನೀತಾಳ ಮೇಲೆ ಇಲ್ಲಸಲ್ಲದ ಆರೋಪ ಹೊರೆಸುತ್ತಿದ್ದಾನಾ? ಗೊತ್ತಿಲ್ಲ. ಒಟ್ಟಿನಲ್ಲಿ ಈ ಖಾರದಪುಡಿ ಸೀನನ ರಗಳೆ ಇಲ್ಲಿಗೇ ನಿಲ್ಲುವುದಿಲ್ಲ ಎನ್ನುವುದಂತೂ ಸತ್ಯ....

• ಅರುಣೋದಯ

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 4-5-2011 RNI No. KARKAN200

ಅಂದು ಆರತಿ ಇಂದು ಈರತಿ







ಬಹಳ ವರ್ಷಗಳ ಹಿಂದೆ ಆಗಿನ ಮಾತಿನ ಮಲ್ಲಿ ಆರತಿ ರಾಜಕೀಯಕ್ಕೆ ಧುಮುಕಿದಾಗ ಸಿನಿಮಾರಂಗದವರೂ, ರಾಜಕಾರಣಿಗಳೂ ಹೌಹಾರಿದ್ದರು. ಈಗ ಇಂದಿನ ಮಾತಿನ ಮಲ್ಲಿ ರಮ್ಯಾ ರಾಜಕೀಯದಲ್ಲಿ 'ನಟಿಸಲು' ಹೊರಟಿರುವುದನ್ನು ನೋಡಿ ಎಲ್ಲರೂ ಚಕಿತರಾಗಿದ್ದಾರೆ.

ಜನಪ್ರಿಯತೆಯ ಉತ್ತುಂಗದಲ್ಲಿರುವಾಗಲೇ ನಾಯಕಿಯರು ರಾಜಕೀಯದ ಅರಂಗೇಟ್ರಂ ಮಾಡುವುದು ಅಪರೂಪ. ಆದರೆ ನಾಯಕರು ಮಾತ್ರ ಇದಕ್ಕೆ ಅಪವಾದ. ಉದಾಹರಣೆಗೆ ಅನಂತ್ ನಾಗ್, ಅಂಬರೀಶ್, ಜಗ್ಗೇಶ್, ಶ್ರೀನಾಥ್, ಶಶಿಕುಮಾರ್ ಮೊದಲಾದವರೆಲ್ಲ ಕೈತುಂಬಾ ಕೆಲಸವಿದ್ದಾಗಲೇ ತಮ್ಮ ಅದೃಷ್ಟವನ್ನು ರಾಜಕೀಯದಲ್ಲೂ ಪರೀಕ್ಷೆಗೊಳಪಡಿಸಿದ್ದರು.

ಹಾಗೆ ನೋಡಿದರೆ ನಾಯಕ ನಟರಂತೆ ಬೋಲ್ಡ್ ಆಗಿ ರಾಜಕೀಯಕ್ಕೆ ಕಾಲಿಟ್ಟ ಮೊದಲ ನಾಯಕಿ 'ಈ ಶತಮಾನದ ಮಾದರಿ ಹೆಣ್ಣು' ಎಂದೆನಿಸಿಕೊಂಡ ಆರತಿ. ಆಕೆ ರಾಜಕೀಯ ಪ್ರವೇಶಿಸಿ ಮೊದಲ ಬಾರಿ ಮಿರಿಮಿರಿ ಮಿನುಗುವ ಸೀರೆಯಲ್ಲಿ ವಿಧಾನಪರಿಷತ್ ಸಭಾಂಗಣಕ್ಕೆ ಕಾಲಿಟ್ಟಾಗ ಶಾಸಕರೆಲ್ಲಾ ಸಾಕ್ಷಾತ್ ರಂಭೆಯೇ ಧರೆಗಿಳಿದು ಬಂದಂತೆ ಕಣ್ಣುಬಾಯಿ ಬಿಟ್ಟು ನೋಡಿದ್ದರು.

ಆರತಿ ರಾಜಕೀಯ ಪ್ರವೇಶವು ರಾಜಕೀಯಕ್ಕೆ ಗ್ಲಾಮರ್ ಮತ್ತು ಮೆರಗು ತಂದುಕೊಟ್ಟಿತ್ತು. ಆಕೆಯ ಜತೆ ನಿಂತು ಫೋಟೋ ತೆಗೆಸಿಕೊಳ್ಳಲು ಶಾಸಕರು ಆಸೆ ಪಡುತ್ತಿದ್ದರು. ಹಲವರು ತಮಗೆ ಪರಿಚಯವಿದ್ದ ಛಾಯಾಗ್ರಾಹಕರಿಗೆ ಗುಟ್ಟಾಗಿ ಹೇಳಿ ಆಕೆಯೊಂದಿಗೆ ತಮ್ಮ ಫೋಟೋ ತೆಗೆಸಿಕೊಳ್ಳುವ ತೀಟೆಯನ್ನು ತೀರಿಸಿಕೊಂಡಿದ್ದೂ ಇದೆ.

ಆರತಿ ನಂತರ ಅಷ್ಟೇ ಬೋಲ್ಡಾಗಿ ಈಗ ರಮ್ಯಾ ರಾಜಕೀಯಕ್ಕೆ ಕಾಲಿಟ್ಟಿದ್ದಾರೆ. ಅದರಲ್ಲೂ ರಮ್ಯಾ ಆಗಮನ ಕಾಂಗ್ರೆಸ ಮುದಿ ಮತ್ತು ಯುವ ನಾಯಕರಲ್ಲಿ ಒಂದು ರೀತಿಯ ಸಂಚಲನವನ್ನು ಉಂಟುಮಾಡಿದೆ.

ಇದಕ್ಕಿಂತಲೂ ಮುಖ್ಯವಾಗಿ ರಮ್ಯಾಳ ಫ್ಯಾಮಿಲಿ ಹಿನ್ನೆಲೆ ಮತ್ತು ಕಾಂಟ್ಯಾಕ್ಟ್ಸ್. ಈಗ ಎಲ್ಲರಿಗೂ ಗೊತ್ತಿರುವಂತೆ ಹಾಲಿ ಕೇಂದ್ರ ವಿದೇಶಾಂಗ ಸಚಿವ ಎಸ್ಸೆಂ ಕೃಷ್ಣರ ನಿಕಟಸಂಬಂಧಿ ರಮ್ಯಾ. ಬಹಳ ಹಿಂದೆ ರಮ್ಯಾ ತೆಲುಗು ಪತ್ರಿಕೆಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ "ನಾನು ಕರ್ನಾಟಕದ ಮುಖ್ಯಮಂತ್ರಿ ಕೃಷ್ಣ ಅವರ ಮೊಮ್ಮಗಳು" ಎಂಬ ಅರ್ಥ ಬರುವ ಮಾತುಗಳನ್ನಾಡಿದ್ದಳು. ಆಂಧ್ರದಲ್ಲಿ ಆಗ ಅದು ಬಿರುಗಾಳಿಯೆಬ್ಬಿಸಿತು. ಆದರೆ ನಮ್ಮ ರಾಜ್ಯದಲ್ಲಿ ಅದೊಂದು ಗಾಸಿಪ್ ಮಾದರಿಯಲ್ಲಿ ಚಲಾವಣೆಗೆ ಬಂದು ಕೊನೆಗೆ ಠುಸ್ಸಾಗಿತ್ತು.


ರಮ್ಯಾ ರಾಜಕೀಯಕ್ಕೆ ಬರುವ ಬಗ್ಗೆ ಕಾಲದಿಂದ ಚರ್ಚೆಯಾಗುತ್ತಿತ್ತು. ಅದಕ್ಕೆ ತಕ್ಕಂತೆ ಕಳೆದೆರಡು ವರ್ಷಗಳಿಂದ ಆಕೆ ಹಲವು ಸಾಮಾಜಿಕ ಕಳಕಳಿಯುಳ್ಳ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾರಂಭಿಸಿದ್ದಳು. ಅದರಲ್ಲೂ ಮುಖ್ಯವಾಗಿ ಮಂಡ್ಯ ತಾಲ್ಲೂಕಿನ ಸಮೀಪ 'ಪ್ಲಾಸ್ಟಿಕ್ ರಹಿತ ಸಮಾಜ' ಎಂಬ ಕಾರ್ಯಕ್ರಮದಲ್ಲಿ ಆಕೆ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡಿದ್ದಳು. ಪ್ಲಾಸ್ಟಿಕ್ ತ್ಯಾಜ್ಯಗಳು ಹೇಗೆ ಮನುಕುಲಕ್ಕೆ ತೊಂದರೆಯಾಗುತ್ತದೆ ಎಂಬ ಬಗ್ಗೆ ಭಾಷಣ ಬಿಗಿದಿದ್ದಳು. ಆಗ ರಾಜಕೀಯ ಪ್ರವೇಶಿಸುತ್ತೀರಾ ಎಂದು ಆಕೆಯನ್ನು ಕೇಳಿದಾಗಲೆಲ್ಲಾ ಅದನ್ನು ನಿರಾಕರಿಸುತ್ತಿದ್ದ ರಮ್ಯಾ ಈಗ ಬಹಿರಂಗವಾಗಿ ಕಾಂಗ್ರೆ ಪಕ್ಷವನ್ನು ಸೇರಿಕೊಂಡಿದ್ದಾಳೆ.

ಅಂದರೆ ಮುಂಬರುವ ದಿನಗಳಲ್ಲಿ ರಮ್ಯಾ ಕಾಂಗ್ರೆ ಪರ ಸಕ್ರಿಯವಾಗಿ ಪ್ರಚಾರ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳುವುದಂತೂ ಗ್ಯಾರಂಟಿ. ಮುಂದೊಂದು ದಿನ ಈ ಮಂಡ್ಯದ ಹುಡುಗಿ ಕಾಂಗ್ರೆಸಿಂದ ಶಾಸಕಿಯಾಗಿ ಆಯ್ಕೆಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಒಂದೇ ಒಂದು ಪ್ರಶ್ನೆ: ರಮ್ಯಾ ಜನರಿಂದ ಆಯ್ಕೆಯಾಗಿ ಎಂಎಲ್ಎ ಆಗುತ್ತಾಳೋ? ಅಥವಾ ಕಾಂಗ್ರೆಸ್ಸಿಗರಿಂದ ಆಯ್ಕೆಯಾಗಿ ಎಂಎಲ್‌ಸಿ ಆಗುತ್ತಾಳೋ?

• ಶೆಣೈ

ಥೇಂಬರ
ಗುದ್ದಾಟ







ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಒಳಗೆ ಕುದಿಯುತ್ತಿದ್ದ ಅಸಮಾಧಾನ ಈಗ ಭುಗಿಲೆದ್ದಿದೆ.

ನಾಯಕಿ ರಮ್ಯಾ ಪ್ರಕರಣದಲ್ಲಿ ವಾಣಿಜ್ಯ ಮಂಡಳಿ ಅಧ್ಯಕ್ಷ ಬಸಂತ್‌ಕುಮಾರ್ ಪಾಟೀಲ್ ತೆಗೆದುಕೊಂಡಿದ್ದ ಕೆಲವು ನಿಲುವುಗಳು ಏಕಪಕ್ಷೀಯವಾಗಿದ್ದವು ಎಂಬುದು ಮಂಡಳಿಯ ಸದಸ್ಯ ರಾಕ್‌ಲೈನ್ ವೆಂಕಟೇಶರ ವಾದವಾಗಿತ್ತು. ಮಾತ್ರವಲ್ಲ, ಪಾಟೀಲರ ಸರ್ವಾಧಿಕಾರವನ್ನು ವಿರೋಧಿಸಿ ರಾಕ್‌ಲೈನ್ ಮಂಡಳಿಯ ಸದಸ್ಯ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದರು.

ಅದಕ್ಕೆ ತಕ್ಕಂತೆ ಪಾಟೀಲರು ರಾಕ್‌ಲೈನ್ ರಾಜೀನಾಮೆಯನ್ನು ಸಮಿತಿಯಲ್ಲಿ ಚರ್ಚಿಸದೆ ಏಕಾಏಕಿ ಅದನ್ನು ಅಂಗೀಕರಿಸಿಯೇ ಬಿಟ್ಟರು. ಇದು ರಾಕ್‌ಲೈನ್ ಬಣಕ್ಕೆ ದೊಡ್ಡ ಶಾಕ್ ನೀಡಿತ್ತು.

ಈಗ ರಾಕ್‌ಲೈನ್ ಪರವಾಗಿ ನಿರ್ಮಾಪಕ ಕೆ.ಮಂಜು ಕೂಡಾ ತಮ್ಮ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಆದರೆ ಸೋ ಫಾರ್ ಪಾಟೀಲರು ಈ ರಾಜೀನಾಮೆಯನ್ನು ಅಂಗೀಕರಿಸಿಲ್ಲ. ಈಗ ಇದಕ್ಕೇ ನೆಪವಾಗಿಟ್ಟುಕೊಂಡು ರಾಕ್‌ಲೈನ್ ಬಣದಲ್ಲಿರುವ ಸುಮಾರು 20ಕ್ಕೂ ಹೆಚ್ಚು ಮಂಡಳಿಯ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ.

ಈ ಸರಣಿ ರಾಜೀನಾಮೆ ಪ್ರಕರಣಗಳನ್ನು ಅವಲೋಕಿಸಿದರೆ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪಾಟೀಲರು ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದ ನಂತರ ಒಂದು ದಿನವೂ ನೆಮ್ಮದಿಯಿಂದ ಕಾಲಕಳೆದಿಲ್ಲ. ರಾಜ್ಯ ರಾಜಕೀಯದಲ್ಲಿ ಹೇಗೆ ದಿನಕ್ಕೊಂದು ಭಿನ್ನಮತ ಭುಗಿಲೆದ್ದು ಯಡಿಯೂರಪ್ಪನ ರಾಜೀನಾಮೆಯನ್ನು ಕೇಳುತ್ತಿರುತ್ತಾರೋ, ಅದೇರೀತಿ ಪಾಟೀಲರ ರಾಜೀನಾಮೆಯನ್ನು ಸಿನಿಮಾರಂಗದ ಭಿನ್ನಮತೀಯರು ಅನೇಕ ಬಾರಿ ಕೇಳಿದ್ದುಂಟು. ಆದರೆ ಪ್ರತಿಬಾರಿಯೂ ಯಡ್ಡಿಯಂತೆ ಪಾಟೀಲರು ಕೂಡ ತೆರೆಮರೆಯಲ್ಲಿ ರಾಜೀಸೂತ್ರಗಳನ್ನು ಸಾಧಿಸಿ ತಮ್ಮ ಕುರ್ಚಿಯನ್ನು ಉಳಿಸಿಕೊಂಡಿದ್ದಾರೆ.

ಆದರೆ ರಾಕ್‌ಲೈನ್ ವಿಷಯದಲ್ಲಿ ಅದು ಹೇಗೋ ಧೈರ್ಯ ಮಾಡಿದ ಪಾಟೀಲರು "ನಾನು ನಿಮ್ಮ ಕೈಗೊಂಬೆ ಅಲ್ಲ" ಎ... ಸಂದೇಶವನ್ನು ಸಾರುವ ಉದ್ದೇಶದಿಂದ ಅವರ ರಾಜೀನಾಮೆ... ಅಂಗೀಕರಿಸುವ ಮೂಲಕ ಭಿನ್ನಮತೀಯರಿಗೆ ಬಿಸಿ ಮುಟ್ಟಿಸಿ... ರಾಕ್‌ಲೈನ್ ವೆಂಕಟೇಶ್‌ರಂತಹ ಪ್ರಭಾವಿ ನಿರ್ಮಾಪಕ... ಚೇಂಬರಿನಿಂದ ಹೊರಹಾಕಿದ ಮೇಲೆ ತಮ್ಮಂತಹ ಚಿಕ್ಕ ನಿರ್ಮಾ... ಗತಿಯೇನು ಎಂದು ಉಳಿದವರು ಈಗ ಚಿಂತಿಸುವಂತಾಗಿದೆ.

ಪ್ರಸ್ತುತ ಸರಣಿ ರಾಜೀನಾಮೆ ಪ್ರಹಸನ ಆರಂಭವಾಗಿದ್ದೇ ತಡ, ... ಚಾನೆಲ್‌ಗಳು ಇದೊಂದು ರಾಷ್ಟ್ರೀಯ ಸುದ್ದಿಯೆಂಬಂತೆ ಅದನ್ನೇ 'ಬ್ರೇ... ನ್ಯೂಸ್' ಎಂದು ಚೀರಾಡುತ್ತಿವೆ. ಜೊತೆಗೆ ವಾಣಿಜ್ಯ ಮಂಡ... ಹೊರಗಡೆ ಟಿವಿಯವರ ನೇರ ಪ್ರಸಾರದ ವಾಹಿನಿಗಳು ಸಾ... ನಿಂತಿವೆ. ಇದರರ್ಥ ರಮ್ಯಾ ಪ್ರಕರಣದ ರೀತಿಯಲ್ಲೇ ... ನೇರ ಪ್ರಸಾರ, ಚರ್ಚೆ ಮತ್ತು ಸಂಧಾನದ ಕಾರ್ಯಕ್ರಮ... ಟಿವಿಯಲ್ಲಿ ಲೈವ್ ಆಗಿ ಪ್ರಸಾರವಾಗಲಿದೆ!

ಈಗ ಕರ್ನಾಟಕದ ಜನ ಕನ್ನಡ ಸಿನಿಮಾಗಳಿಗಿಂತಲೂ ... ಸಿನಿಮಾ ಜನರ ಗುದ್ದಾಟವೇ ಮಜವಾಗಿದೆಯಲ್ಲ ಎ... ಸಿನಿಮಾ ಥಿಯೇಟರ್‌ಗೆ ಹೋಗುವುದು ಬಿಟ್ಟು ಟಿವಿ ಮ... ಕುಳಿತುಕೊಂಡಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಕನ್ನಡ ಚಿತ್ರ... ಉದ್ಧಾರವಾಗುವುದು ಎಂದು??

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalor